ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 12 ಭಾನುವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 351 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜಕೀಯ ಸ್ವಾರ್ಥಕ್ಕೆ ಸಿದ್ದರಾಮಯ್ಯ ಸಾಮಾಜಿಕ ನ್ಯಾಯ ಜಪ

■ ಮುಸ್ಲಿಂ ನಾಯಕನನ್ನು ಗೆಲ್ಲಿಸಲು ದರಿದ್ರ ನಾರಾಯಣ ರ‍್ಯಾಲಿಗೆ ಕೈಕೊಟ್ಟಿದ್ದ ಹಾಲಿ ಮುಖ್ಯಮಂತ್ರಿ!; ಮಾಜಿ ಪ್ರಧಾನಿ ದೇವೇಗೌಡರ ಆಕ್ರೋಶ ■ ಜೆಡಿಎಸ್ ಜನತಾ ಸಮಾವೇಶ ಮತ್ತು ಬೆಳ್ಳಿಹಬ್ಬ ಸಮಾವೇಶ ■ ನನ್ನ 60 ವರ್ಷಗಳ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ಸರ್ಕಾರವನ್ನು ಎಂದೆಂದೂ ನೋಡಿಲ್ಲ ■ ಇದೇ ಅಹಿಂದ ನಾಯಕರು ಕುಮಾರಸ್ವಾಮಿ ಸರ್ಕಾರವನ್ನು ತೆಗೆದರು!

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಹಾಲಿ ಮುಖ್ಯಮಂತ್ರಿ ಸಾಮಾಜಿಕ ನ್ಯಾಯದ ಪರ ಎಂದೆಂದೂ ಇಲ್ಲ ಎಂದು ನೇರ ಆರೋಪ ಮಾಡಿದರು.

ಬೆಂಗಳೂರಿನಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಜೆಡಿಎಸ್ ಸಮಾವೇಶದಲ್ಲಿ ಮಾತನಾಡಿದ ಮಾಜಿ ಪ್ರಧಾನಿಗಳು, ಕೇವಲ ರಾಜಕೀಯ ಸ್ವಾರ್ಥಕ್ಕಾಗಿ ಮಾತ್ರ ಅವರು ಸಾಮಾಜಿಕ ನ್ಯಾಯದ ಜಪ ಮಾಡುತ್ತಿದ್ದಾರೆ ಅಷ್ಟೆ ಎಂದು ಟೀಕಿಸಿದರು.

ಸಾಮಾಜಿಕ ನ್ಯಾಯದ ಪರ ನಾನು ಇದ್ದೇನೆಯೇ ಇಲ್ಲವೇ ಎಂಬುದನ್ನು ಸ್ವತಃ ಸಿದ್ದರಾಮಯ್ಯನವರೇ ತಮ್ಮ ಆತ್ಮಕ್ಕೆ ಪ್ರಶ್ನೆ ಮಾಡಿಕೊಳ್ಳಬೇಕು. ತಮ್ಮ ರಾಜಕೀಯ ಭವಿಷ್ಯಕ್ಕಾಗಿ ಅವರು ಸಾಮಾಜಿಕ ನ್ಯಾಯವನ್ನು ವ್ಯವಸ್ಥಿತವಾಗಿ ಬಳಸಿಕೊಂಡಿದ್ದಾರೆ. ಇದೇ ಅಹಿಂದ ನಾಯಕರು, ಕುಮಾರಸ್ವಾಮಿ ಅವರ ಸರ್ಕಾರವನ್ನು ತೆಗೆದರು. ಹಾಗೆಯೇ ನಮ್ಮ ಪಕ್ಷವನ್ನು ಮುಗಿಸುವ ವ್ಯವಸ್ಥಿತ ಹುನ್ನಾರವನ್ನೂ ನಡೆಸಿದರು. ಇಂತಹ ಶಕ್ತಿಗಳಿಗೆ ಪಾಠ ಕಲಿಸಲೇಬೇಕೆಂದು ನಿರ್ಧರಿಸಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳಲು ಕುಮಾರಸ್ವಾಮಿ ಅವರಿಗೆ ಸ್ವತಃ ನಾನೇ ಅನುಮತಿ ಕೊಟ್ಟೆ. ಇವತ್ತು ಕೇಂದ್ರ ಮಂತ್ರಿಯಾಗಿ ಕುಮಾರಸ್ವಾಮಿ ಅವರು ಅತ್ಯುತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ರಾಜ್ಯ ಸರ್ಕಾರ ಸಹಕಾರ ಕೊಡುತ್ತಿಲ್ಲ. ಕುದುರೆಮುಖ ಅದಿರು ಕಂಪನಿ ಮತ್ತು ಹೆಚ್‌ಎಂಟಿ ವಿಚಾರವಾಗಿ ಅನಗತ್ಯ ತೊಂದರೆ ಕೊಡುತ್ತಿದ್ದಾರೆ. ರಾಜ್ಯದ ಹಿತದ ಬಗ್ಗೆ ಇವರು ರಾಜಕೀಯ ಮಾಡುತ್ತಿರುವುದು ಸರಿಯಲ್ಲ. ಕುಮಾರಸ್ವಾಮಿ ಅವರು ಅಂಜದೆ ತಮ್ಮ ಕೆಲಸಗಳನ್ನು ಮುಂದುವರಿಸಿದ್ದಾರೆ ಎಂದರು.

ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟ ಬಲಿಷ್ಠವಾಗಿದೆ. ನಿತೀಶ್‌ಕುಮಾರ್ ಅವರಿಗೆ ನರೇಂದ್ರ ಮೋದಿ ಅವರು ಶಕ್ತಿ ತುಂಬಿದ್ದಾರೆ. ನಂಬಿಕೆ, ವಿಶ್ವಾಸದ ಮೇಲೆ ಅವರು ಕೆಲಸ ಮಾಡುತ್ತಿದ್ದಾರೆ. ಆದರೆ ನಮ್ಮ ಜೊತೆ ಕಾಂಗ್ರೆಸ್ ನಡೆದುಕೊಂಡ ರೀತಿಯನ್ನು ನಾವು ಎಂದಿಗೂ ■ 6ನೇ ಪುಟಕ್ಕೆ



ಬೆಂಗಳೂರಿನಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಜೆಡಿಎಸ್ ಸಮಾವೇಶದಲ್ಲಿ ಜೆಡಿಎಸ್ ವರಿಷ್ಠರೂ ಆದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಯುವ ನಾಯಕ ನಿಖಿಲ್ ಹಾಗೂ ಪಕ್ಷದ ರಾಜ್ಯ ನಾಯಕರು ಒಗ್ಗಟ್ಟು ಪ್ರದರ್ಶಿಸಿದರು.

> “ನನಗೀಗ 93 ವರ್ಷ. ಪಕ್ಷ ಕಟ್ಟುವ ಶಕ್ತಿ, ಹುಮ್ಮಸ್ಸು ನನಗಿದೆ. ಮುಖಂಡರು ಮತ್ತು ಕಾರ್ಯಕರ್ತರು ಎಲ್ಲಿಗೆ ಕರೆದರೂ ನಾನು ಬರಲು ಸಿದ್ದನಿದ್ದೇನೆ. ನಾವೆಲ್ಲರೂ ಸೇರಿ ಪಕ್ಷವನ್ನು ಬಲಿಷ್ಠವಾಗಿ ಸಂಘಟನೆ ಮಾಡೋಣ. ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಿದರೆ ಕುಮಾರಸ್ವಾಮಿಯವರಿಗೆ ಬಲ ಬರುತ್ತದೆ.
> –ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

ಒಂದೇ ಒಂದು ಅವಕಾಶ ನೀಡಿ; ರಾಜ್ಯಕ್ಕೆ ಹಿಡಿದಿರುವ ಗ್ರಹಣ ಸಂಪೂರ್ಣ ಬಿಡಿಸುತ್ತೇನೆ

● ಕುಮಾರಸ್ವಾಮಿ ಮನವಿ ● ನಾನು ಕನ್ನಡಿಗರು ತಲೆ ತಗ್ಗಿಸುವ ರೀತಿ ಆಡಳಿತ ನಡೆಸಿಲ್ಲ; ಕಾಂಗ್ರೆಸ್ಸಿಗೆ ತಿರುಗೇಟು

ಬೆಂಗಳೂರು: ಜೆಡಿಎಸ್ ಪಕ್ಷಕ್ಕೆ ಒಂದೇ ಒಂದು ಬಾರಿ ಐದು ವರ್ಷ ಅವಕಾಶ ನೀಡಿ. ಈ ರಾಜ್ಯಕ್ಕೆ ಹಿಡಿದಿರುವ ಗ್ರಹಣವನ್ನು ಸಂಪೂರ್ಣವಾಗಿ ಬಿಡಿಸುತ್ತೇನೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ರಾಜ್ಯದ ಜನತೆಯಲ್ಲಿ ಮನವಿ ಮಾಡಿದರು. ಜೆಡಿಎಸ್ ಸಮಾವೇಶದಲ್ಲಿ ಮಾತಾಡಿದ ಕೇಂದ್ರ ಸಚಿವರು, ಕೇವಲ ಒಮ್ಮೆ ಮಾತ್ರ ಅವಕಾಶ ಕೊಟ್ಟು ನೋಡಿ. ಕಾಂಗ್ರೆಸ್ ಪಕ್ಷದಿಂದ ರಾಜ್ಯಕ್ಕೆ ಹಿಡಿದಿರುವ ಗ್ರಹಣಕ್ಕೆ ಮುಕ್ತಿ ಹಾಡುತ್ತೇನೆ. ಇವರು ಮಾಡಿರುವ ಕೊಳಕನ್ನೆಲ್ಲಾ ಸ್ವಚ್ಛ ಮಾಡುತ್ತೇನೆ ಎಂದರು.

ನಾನು ಎರಡು ಬಾರಿ ಸಿಎಂ ಆಗಿದ್ದೆ. ಆದರೆ, ನನ್ನದು ಬಹುಮತದ ಸ್ವತಂತ್ರ ಸರ್ಕಾರ ಆಗಿರಲಿಲ್ಲ. ಇನ್ನೊಬ್ಬರ ಹಂಗಿನಲ್ಲಿ ಸರ್ಕಾರ ಮಾಡಿದ್ದೆ. ಹೀಗಾಗಿ ನನಗೆ ಒಮ್ಮೆ ಪೂರ್ಣ ಪ್ರಮಾಣದ ಸರ್ಕಾರ ಕೊಟ್ಟು ನೋಡಿ ಎಂದು ರಾಜ್ಯದ ಜನತೆಯಲ್ಲಿ ಮನವಿ ಮಾಡಿದರು. ರಾಜ್ಯ ಯಾವ ಸ್ಥಿತಿಗೆ ಹೋಗಿದೆ ಎಂಬುದನ್ನು ಎಲ್ಲರೂ ನೋಡುತ್ತಿದ್ದೀರಿ. ಇಂತಹ ದುಸ್ಥಿತಿಗೆ ತಂದ ವ್ಯಕ್ತಿಗಳಿಗೆ ಪಾಠ ಕಲಿಸಬೇಕು. ಜೆಡಿಎಸ್ ಕೇವಲ ರೈತರಿಗೆ ಸೀಮಿತವಾದ ಪಕ್ಷವಲ್ಲ. ಹಾಗೆಂದು ನಾವು ರೈತರನ್ನು ಎಂದು ನಿರ್ಲಕ್ಷ ಮಾಡಿಲ್ಲ, ಮುಂದೆಯೂ ಮಾಡುವುದು ಇಲ್ಲ ಎಂದರು.

ಖ್ಯಾತ ಗಾಯಕಿ ಆಶಾ ಭೋಸ್ಲೆ ಸ್ಥಿತಿ ಗಂಭೀರ



ಮುಂಬೈ, ಏ.11– ಭಾರತೀಯ ಸಿನಿಮಾ ರಂಗದ ದಿಗ್ಗಜ ಗಾಯಕಿ ಆಶಾ ಭೋಸ್ಲೆ ಅವರಿಗೆ ಹೃದಯಾಘಾತವಾಗಿದ್ದು, ಅವರನ್ನು ಮುಂಬೈನ ಪ್ರತಿಷ್ಠಿತ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಆಶಾ ಬೋಸ್ಲೆ ಅವರಿಗೆ 92 ವರ್ಷ ವಯಸ್ಸಾಗಿದ್ದು, ವಯೋಸಹಜ ಕೆಲವು ಸಮಸ್ಯೆಗಳಿಂದ ಅವರು ಬಳಲುತ್ತಿದ್ದರು ಎನ್ನಲಾಗಿದೆ.

ಆಶಾ ಭೋಸ್ಲೆ ಅವರು ಭಾರತ ರತ್ನ ಪುರಸ್ಕೃತ ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಅವರ ಸಹೋದರಿ. ಅಕ್ಕನಂತೆಯೇ ಅದ್ಭುತ ಗಾಯಕಿ ಆಗಿದ್ದಾರೆ. ಎಂಟು ದಶಕಗಳಿಂದಲೂ ಗಾಯಕ ಕ್ಷೇತ್ರದಲ್ಲಿರುವ ಆಶಾ ಭೋಸ್ಲೆ ಈವರೆಗೆ ಸಾವಿರಾರು ಹಾಡುಗಳನ್ನು ರೆಕಾರ್ಡ್ ಮಾಡಿದ್ದಾರೆ. ಹಲವಾರು ಲೈವ್ ಶೋಗಳನ್ನು ನೀಡಿದ್ದಾರೆ. ಹಲವು ಸಿಂಗಿಂಗ್ ರಿಯಾಲಿಟಿ ಶೋಗಳಿಗೆ ಜಡ್ಜ್ ಸಹ ಆಗಿದ್ದಾರೆ. ಆಶಾ ಭೋಸ್ಲೆ ಅವರು ತಮ್ಮ 90ನೇ ವಯಸ್ಸಿನಲ್ಲೂ ಸಹ ಲೈವ್ ಸಿಂಗಿಂಗ್ ಶೋಗಳನ್ನು ನೀಡುತ್ತಿದ್ದರು. ಮೂರು–ನಾಲ್ಕು ಗಂಟೆ ಸ್ಟೇಜ್ ಮೇಲೆ ನಿಂತು ಹಾಡುತ್ತಿದ್ದರು. ಆದರೆ ಕಳೆದ ಕೆಲ ತಿಂಗಳುಗಳಿಂದ ಆರೋಗ್ಯ ಹದಗೆಟ್ಟಿತ್ತು.

10 ಕೋಟಿ ರೂ. ವಂಚನೆ ಆರೋಪ; ಗಾಯಕಿ ಮಂಗ್ಲಿ ವಿರುದ್ಧ ಪ್ರಕರಣ ದಾಖಲು



ಹೈದರಾಬಾದ್: ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿ ತನ್ನದೇ ಜನಪದ ಮತ್ತು ಸಿನಿಮಾ ಹಾಡುಗಳಿಂದ ಖ್ಯಾತಿ ಗಳಿಸಿರುವ ಗಾಯಕಿ ಮಂಗ್ಲಿ ವಿರುದ್ಧ ವಂಚನೆ ಮತ್ತು ಸಂತ್ರಸ್ತರ ಪರ ವಕೀಲರಿಗೆ ಜೀವ ಬೆದರಿಕೆ ಹಾಕಿದ ಆರೋಪ ಕೇಳಿ ಬಂದಿದ್ದು ಪ್ರಕರಣ ದಾಖಲಾಗಿದೆ.

ವಕೀಲ ಸುಬ್ಬರಾವ್ ಅವರು ನೀಡಿದ ದೂರಿನನ್ವಯ, ಹೈದಾರಾಬಾದ್‌ನ ಪಂಜಗುಟ್ಟ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿ ಗಾಯಕಿ ಮಂಗ್ಲಿ, ಶಿವ, ನಿರ್ದೇಶಕ ವೇಣು ಉಡುಗುಲ ಹಾಗೂ ಇತರರ ವಿರುದ್ಧ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು ತನಿಖೆ ಮುಂದುವರೆಸಿದ್ದಾರೆ.

ದಾವಣಗೆರೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ

ಜಮೀರ್ ಸಚಿವ ಸ್ಥಾನಕ್ಕೆ ಕುತ್ತು?



ಬೆಂಗಳೂರು: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಮುಗಿದಿದೆ. ಆದರೆ ಪಕ್ಷದಲ್ಲಿ ಈಗ ಮುಸ್ಲಿಂ ನಾಯಕರ ನಡುವಿನ ಮುಸುಕಿನ ಗುದ್ದಾಟ ಜೋರಾಗಿದೆ. ಪಕ್ಷದ ಅಭ್ಯರ್ಥಿ ಸಮರ್ಥ್ ಶಾಮನೂರು ಪರ ಪ್ರಚಾರ ಮಾಡದ ಸಚಿವ ಜಮೀರ್ ಅಹ್ಮದ್ ವಿರುದ್ಧ ಮತ್ತೊಂದು ಮುಸ್ಲಿಂ ಬಣ ತಿರುಗಿ ಬಿದ್ದಿದೆ.

ದಾವಣಗೆರೆ ಚುನಾವಣೆ ಪ್ರಚಾರದ ವೇಳೆ ನಡೆದ ಹಗ್ಗಜಗ್ಗಾಟ ಆಂತರಿಕ ವರದಿ ಕಾಂಗ್ರೆಸ್ ಹೈಕಮಾಂಡ್ ಕೈಸೇರಿದೆ. ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಅಭಿಷೇಕ್ ದತ್ ನೀಡಿದ ವರದಿಯಲ್ಲಿ ಉಪ ಚುನಾವಣಾ ಸಂದರ್ಭದಲ್ಲಿ ಪಕ್ಷದ ಆಂತರಿಕ ಬೆಳವಣಿಗೆಗಳು ಮತ್ತು ನಾಯಕರ ನಡುವಿನ ಮುನಿಸು ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಅಡ್ಡಿಯಾಗುಬಹುದು ಎಂಬ ಆತಂಕ ವ್ಯಕ್ತಪಡಿಸಿದೆ ಜಮೀರ್ ಅಹ್ಮದ್ ಪಕ್ಷದ ಅಭ್ಯರ್ಥಿ ಪರ ಪ್ರಚಾರ ಮಾಡಿಲ್ಲ, ಪ್ರಚಾರಕ್ಕೆ ಅಂತ ಬಂದಿದ್ದರೂ ಅವರ ನಡೆ ಯಾರಿಗೂ ಸಮಾಧಾನ ತಂದಿಲ್ಲ. ಮುಸ್ಲಿಂ ನಾಯಕರ ಮನವೊಲಿಕೆ ಮಾಡದೇ ಜಮೀರ್ ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಆರೋಪಿಸಲಾಗಿದ್ದು ಇದೀಗ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಶಿಸ್ತು ಕ್ರಮದ ತೂಗುಕತ್ತಿ ನೇತಾಡುತ್ತಿದೆ. ಅಲ್ಪಸಂಖ್ಯಾತ ಸಮುದಾಯದ ಕೆಲವು ಶಾಸಕರೇ ಸಚಿವ ಜಮೀರ್ ಅಹ್ಮದ್ ವಿರುದ್ಧ ಹೈಕಮಾಂಡ್‌ಗೆ ದೂರು ನೀಡಿದ್ದು, ಸಚಿವ ಸಂಪುಟ ಪುನಾರಚನೆ ವೇಳೆ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಒತ್ತಾಯಿಸಿ ■ 6ನೇ ಪುಟಕ್ಕೆ

ಒಂದೆಡೆ ಶಾಂತಿ ಮಾತುಕತೆ; ಮತ್ತೊಂದೆಡೆ ಸಂಘರ್ಷಕ್ಕೆ ಸನ್ನದ್ಧ

ಚರ್ಚೆ ನಡುವೆಯೇ ಹಾರ್ಮುಜ್‌ನತ್ತ ನುಗ್ಗಿ ವಾಪಸ್ಸಾದ ಅಮೆರಿಕ ಯುದ್ಧ ನೌಕೆ



ನವದೆಹಲಿ: ಪಶ್ಚಿಮ ಏಷ್ಯಾ ಯುದ್ಧವನ್ನ ಕೊನೆಗೊಳಿಸಲು ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಶಾಂತಿ ಮಾತುಕತೆ ನಡೆಯುತ್ತಿದ್ದರೆ, ಇತ್ತ ಹಾರ್ಮುಜ್‌ನಲ್ಲಿ ಸಮರ ಸನ್ನದ್ಧತೆ ನಡೆದಂತಿದೆ.

ಇಸ್ಲಾಮಾಬಾದ್‌ನಲ್ಲಿ ಅಮೆರಿಕ–ಇರಾನ್ ನಡುವೆ ಕದನ ವಿರಾಮ ಮಾತುಕತೆಗಳು ಆರಂಭವಾಗಿದ್ದು, ಸಂಸದೀಯ ಸ್ಪೀಕರ್ ಮೊಹಮ್ಮದ್ ಬಘರ್ ಗಾಲಿಬಾಫ್ ನೇತೃತ್ವದ ಇರಾನಿನ ನಿಯೋಗವು, ಅಮೆರಿಕಾ ಉಪಾಧ್ಯಕ್ಷ ಜೆಡಿ ವ್ಯಾನ್ಸ್, ಶ್ವೇತ ಭವನದ ರಾಯಭಾರಿ ಸ್ಟೀವ್ ವಿಟ್ಕಾಫ್ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಳಿಯ ಜೇರೆಡ್ ಕುಶ್ನರ್ ಸಹವರ್ತಿಗಳೊಂದಿಗೆ ಮಾತುಕತೆ ನಡೆಸಿದೆ.

ಆರಂಭದಲ್ಲಿ ಫ್ರೀಜ್ ಮಾಡಿದ ಇರಾನ್‌ನ ಕೆಲ ಸಂಪತ್ತನ್ನ ಹಂತ–ಹಂತವಾಗಿ ಬಿಡುಗಡೆಗೊಳಿಸುವುದು ಸೇರಿದಂತೆ ಕೆಲವು ಬೇಡಿಕೆಗಳಿಗೆ ಅಮೆರಿಕ ತಾತ್ವಿಕ ಒಪ್ಪಿಗೆ ನೀಡಿದೆ. ಇಸ್ರೇಲ್ ಕದನ ವಿರಾಮ ಅನುಸರಿಸುವುದಾಗಿ ಅಮೆರಿಕ ನಿಯೋಗ ಇರಾನ್‌ಗೆ ಭರವಸೆ ನೀಡಿದೆ ಎಂದು ವರದಿಗಳು ತಿಳಿಸಿವೆ. ಈ ಮಧ್ಯೆ ಇರಾನ್ ತನ್ನ ಪರಮಾಣು ಕಾರ್ಯಕ್ರಮವನ್ನ ಸಂಪೂರ್ಣವಾಗಿ ನಿಷೇಧಿಸಬೇಕು ಮತ್ತು ಹಾರ್ಮುಜ್ ಜಲಸಂಧಿಯನ್ನ ಮತ್ತೆ ತೆರೆಯಬೇಕು ಎಂದು ಒತ್ತಾಯಿಸಿದೆ. ಆದರೆ ಇದಕ್ಕೆ ಇರಾನ್ ಒಪ್ಪಿಲ್ಲ ಎಂದು ತಿಳಿದು ಬಂದಿದೆ.

ಹಾರ್ಮುಜ್‌ನಲ್ಲಿ ಭೀತಿ: ಪಾಕಿಸ್ತಾನ ಮಧ್ಯಸ್ಥಿಕೆಯಲ್ಲಿ ಶಾಂತಿ ಮಾತುಕತೆ ನಡೆಯುತ್ತಿರುವ ಸಂದರ್ಭದಲ್ಲೇ ಸಮುದ್ರದ ಮಧ್ಯೆ ಅಮೆರಿಕದ ಯುದ್ಧ ನೌಕೆ ಹಾಗೂ ಇರಾನ್ ಪಡೆಗಳ ನಡುವೆ ಭೀಕರ ಸಂಘರ್ಷದ ಸನ್ನಿವೇಶ ಸೃಷ್ಟಿಯಾಗಿದೆ. ಹಾರ್ಮುಜ್ ಜಲಸಂಧಿಯನ್ನು ಸ್ವಚ್ಛಗೊಳಿಸುತ್ತೇವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ ಬೆನ್ನಲ್ಲೇ ■ 6ನೇ ಪುಟಕ್ಕೆ

ಗ್ರೇಟರ್ ಮೈಸೂರ್ ಭೂಮಿ ಕಬಳಿಸುವವರಿಗೆ ಅನುಕೂಲಕಾರಿ!

● ಪ್ರಗತಿಪರ ಚಿಂತಕ ನಾ.ದಿವಾಕರ ಆರೋಪ ● ಅಧಿಕಾರದಲ್ಲಿದ್ದಾಗ ಕಾಂಗ್ರೆಸ್‌ನವರು ಕಾಂಗ್ರೆಸ್ ಭವನ ಟ್ರಸ್ಟ್‌ಗೆ; ಬಿಜೆಪಿಯವರು ರಾಷ್ಟ್ರೋತ್ಥಾನಕ್ಕೆ ಕಡಿಮೆ ಬೆಲೆಗೆ ಭೂಮಿ ಮಂಜೂರು ಮಾಡಿದ್ದಾರೆ

ಮೈಸೂರು, ಏ.11(ಎಸ್‌ಪಿಎನ್)– ಮೈಸೂರು ಮಹಾನಗರ ಪಾಲಿಕೆಯನ್ನು ಗ್ರೇಟರ್ ಮೈಸೂರು ಮಹಾನಗರ ಪಾಲಿಕೆಯಾಗಿ ಪರಿವರ್ತಿಸುವುದರಿಂದ ಸಾರ್ವಜನಿಕರಿಗೆ ಹೆಚ್ಚೇನೂ ಲಾಭವಿಲ್ಲ. ಆದರೆ, ಭೂಮಿ ಕಬಳಿಸುವವರಿಗೆ ಹೆಚ್ಚಿನ ಅನುಕೂಲ ಆಗಲಿದೆ ಎಂದು ಪ್ರಗತಿಪರ ಚಿಂತಕ, ಲೇಖಕ ನಾ.ದಿವಾಕರ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಹಾರ್ಡ್ವಿಕ್ ಶಾಲಾ ಆವರಣದ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಆವರಣದಲ್ಲಿ ಬೆಂಗಳೂರಿನ ಪಾರದರ್ಶಕ ಮೀಡಿಯಾ ಫೌಂಡೇಷನ್ ಹಾಗೂ ಮೈಸೂರು ರಂಗವಲ್ಲಿ ಸಹಯೋಗದೊಂದಿಗೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಜಿ.ಮಹಾಂತೇಶ್ ಸಂಪಾದಕತ್ವದ ಪಾರದರ್ಶಕ ಪ್ರಜಾಪ್ರಭುತ್ವ ಮಾಲೆ–01ರ 'ಭೂ ಕಬಳಿಕೆ ಸಿದ್ಧಾಂತ' ಪುಸ್ತಕವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಆದರೆ, ಗ್ರೇಟರ್ ಮೈಸೂರು ಹೆಸರಿನಲ್ಲಿ ನಗರದ ಸುತ್ತಮುತ್ತ ಕೃಷಿ ಜಮೀನುಗಳನ್ನು ಕಬಳಿಕೆ ಮಾಡಲಾಗುತ್ತಿದೆ. ಈ ಘೋಷಣೆಯಿಂದ ರಿಯಲ್ ಎಸ್ಟೇಟ್ ಉದ್ಯಮಕ್ಕೆ, ಕಾರ್ಪೊರೇಟ್ ಕಂಪನಿಗಳಿಗೆ ಹೆಚ್ಚಿನ ಲಾಭ ಮಾಡಿಕೊಟ್ಟಿದೆ. ಮೇಲಾಗಿ ಇದರಿಂದ ರಾಜ್ಯ ಸರ್ಕಾರಕ್ಕೆ ಕೋಟ್ಯಾಂತರ ರೂ. ತೆರಿಗೆ ವಂಚನೆಯಾಗುತ್ತಿದೆ ಎಂದು ಆರೋಪಿಸಿದರಲ್ಲದೆ, ಭೂಮಿಯನ್ನು ನಂಬಿಕೊಂಡು ಜೀವನ ನಡೆಸುತ್ತಿರುವ ರೈತರಿಗೆ ದುಡ್ಡಿನ ಆಸೆ ತೋರಿಸಿ, ಕಡಿಮೆ ಬೆಲೆಗೆ ಭೂಮಿ ಖರೀದಿಸುತ್ತಾರೆ. ಮುಂದೆ ಇಂತಹ ಜಾಗಗಳನ್ನು ಸರ್ಕಾರವನ್ನು ಬೆಂಬಲಿಸುವ ಕಾರ್ಪೊರೇಟ್ ಸೆಕ್ಟರ್‌ಗಳಿಗೆ ಮಾರಾಟ ಮಾಡಿ ಮೂರನೇ ವ್ಯಕ್ತಿ ಲಾಭ ಮಾಡಿಕೊಳ್ಳುತ್ತಾರೆ. ಇಂತಹ ಜಾಲಕ್ಕೆ ಅದೆಷ್ಟು ಅಮಾಯಕ ರೈತರು ಬಲಿಯಾಗಿದ್ದಾರೋ ತಿಳಿಯದು ಎಂದು ಬೇಸರ ವ್ಯಕ್ತಪಡಿಸಿದರು.



ಲೇಖಕ ಜಿ.ಮಹಾಂತೇಶ್ ಸಂಪಾದಕತ್ವದ ಪಾರದರ್ಶಕ ಪ್ರಜಾಪ್ರಭುತ್ವ ಮಾಲೆ–01ರ 'ಭೂ ಕಬಳಿಕೆ ಸಿದ್ಧಾಂತ' ಪುಸ್ತಕವನ್ನು ಪ್ರಗತಿಪರ ಚಿಂತಕ ನಾ.ದಿವಾಕರ ಬಿಡುಗಡೆಗೊಳಿಸಿದರು.

> “ರಾಜ್ಯದ 6 ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ವಿವಿಧ ನಾಗರಿಕ ಸೌಲಭ್ಯಗಳಿಗೆ ಮೀಸಲಿಟ್ಟ ಸಿಎ ನಿವೇಶನಗಳನ್ನು ನಿಯಮ ಮೀರಿ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಕಡಿಮೆ ದರದಲ್ಲಿ ನಗರಾಭಿವೃದ್ಧಿ ಇಲಾಖೆ ಮಂಜೂರು ಮಾಡಿದೆ. ಕೆಲವೆಡೆ ಕಂದಾಯ ಇಲಾಖೆಯಿಂದಲೂ ಕಡಿಮೆ ದರಕ್ಕೆ ಭೂಮಿ ಮಂಜೂರು ಮಾಡಿರುವುದು ಎಷ್ಟು ಸರಿ?
> – ಲೇಖಕ ಜಿ.ಮಹಾಂತೇಶ್

ಎಲ್ಲಾ ವಿರೋಧಿಗಳೇ : ಕರ್ನಾಟಕದಲ್ಲಿ ಆಡಳಿತ ನಡೆಸಿದ ಎಲ್ಲಾ ಸರ್ಕಾರಗಳು ರೈತ ವಿರೋಧಿ, ಜನ ವಿರೋಧಿ ಸರ್ಕಾರಗಳಾಗಿವೆ. ಅಭಿವೃದ್ಧಿ ನೆಪದಲ್ಲಿ ರೈತರಿಂದ ವಶಪಡಿಸಿಕೊಂಡಿದ್ದ ಜಮೀನು ಹಾಗೂ ಗೋಮಾಳದ ಜಾಗಗಳನ್ನು ತಮ್ಮ ಪಕ್ಷದ ಸಿದ್ಧಾಂತ ಹೊಂದಿರುವ ಸಂಸ್ಥೆಗಳಿಗೆ ಕಾನೂನು ಬಾಹಿರವಾಗಿ ಮಂಜೂರು ಮಾಡಿವೆ ಎಂದು ಆರೋಪಿಸಿದರು.


ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಸರ್ಕಾರಗಳು ತಮ್ಮ ರಾಜಕೀಯ ಶಕ್ತಿಯಿಂದ ನಿರಂತರವಾಗಿ ಭೂ ಕಬಳಿಕೆಯಲ್ಲಿ ತೊಡಗಿವೆ. ಕರ್ನಾಟಕದಲ್ಲಿ ಭೂಮಿಗಾಗಿ ಅನ್ನದಾತರು ಇಂದಿಗೂ ಬೀದಿಯಲ್ಲಿ ನಿಂತು ಹೋರಾಟ ಮಾಡುತ್ತಿದ್ದಾರೆ. ಆದರೆ, ಅವರಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ. ಮುಂದೆಯೂ ಸಿಗುವ ಭರವಸೆ ಇಲ್ಲ ಎಂಬ ವಾತಾವರಣವಿರುವುದು ಬೇಸರದ ಸಂಗತಿ ಎಂದರು.

ಕಾಂಗ್ರೆಸ್ ನಾಯಕರು, ತಮ್ಮ ಹೈಕಮಾಂಡ್ ಮೆಚ್ಚಿಸಲು ಕಾಂಗ್ರೆಸ್ ಭವನ ಟ್ರಸ್ಟ್ ಹೆಸರಿನಲ್ಲಿ ಭೂ ಕಬಳಿಕೆ ಮಾಡಿದರೆ, ಬಿಜೆಪಿಯು ಸಂಘಪರಿವಾರದವರನ್ನು ಮೆಚ್ಚಿಸಲು ರಾಷ್ಟ್ರೋತ್ಥಾನಕ್ಕೆ ಭೂಮಿಯನ್ನು ಕಡಿಮೆ ಬೆಲೆಗೆ ಮಂಜೂರು ಮಾಡಿವೆ. ಆಡಳಿತ ಪಕ್ಷಗಳು ತಮ್ಮ ಸಿದ್ಧಾಂತಕ್ಕೆ ಅನುಗುಣವಾಗಿರುವ ಖಾಸಗಿ ಸಂಸ್ಥೆಗಳಿಗೆ ಸಾರ್ವಜನಿಕರ ಆಸ್ತಿಯನ್ನು ಕಡಿಮೆ ದರದಲ್ಲಿ ಮಂಜೂರು ಮಾಡಿ, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂ. ನಷ್ಟ ಮಾಡಿವೆ. ಇದರ ವಿರುದ್ಧ ಯಾರೂ ಧ್ವನಿ ಎತ್ತುತ್ತಿಲ್ಲ ಎಂದು ಆಕ್ರೋಶ ಹೊರಹಾಕಿದರು.

ಲೇಖಕ ಜಿ.ಮಹಾಂತೇಶ್ ಮಾತನಾಡಿ, ರಾಷ್ಟ್ರೋತ್ಥಾನ ಪರಿಷತ್ ಖಾಸಗಿ ಸಂಸ್ಥೆ. ಈ ಸಂಸ್ಥೆ 401 ಕೋಟಿ ರೂ. ಆದಾಯ ಹೊಂದಿರುವ ಸಂಸ್ಥೆ. ಈ ಸಂಸ್ಥೆಗೆ ಗೋಮಾಳ, ನಾಗರಿಕ ನಿವೇಶನಗಳೇ ಏಕೆ ಬೇಕು. ■ 6ನೇ ಪುಟಕ್ಕೆ


ಪೂರ್ವ ಮುಂಗಾರು ಪರಿಣಾಮ; ಹಸಿರಿಂದ ಕಂಗೊಳಿಸುತ್ತಿದೆ ಬಂಡೀಪುರ ಅರಣ್ಯ!

ವನ್ಯಜೀವಿಗಳಲ್ಲಿ ಹೊಸ ಚೈತನ್ಯದ ಕಲರವ



ಪೂರ್ವ ಮುಂಗಾರು ಮಳೆಯಿಂದಾಗಿ ಬಂಡೀಪುರದ ಅರಣ್ಯ ಹಸಿರಿನಿಂದ ಕಂಗೊಳಿಸುತ್ತಿರುವುದು.







ಹಸಿರು ಆವರಿಸಿರುವ ಬಂಡೀಪುರ ಅರಣ್ಯದ ಸಫಾರಿ ವಲಯದಲ್ಲಿ ಆನೆಗಳ ಹಿಂಡು, ಸಾಂಬಾರ್, ಚಿರತೆ ಸ್ವಚ್ಛಂದವಾಗಿ ವಿರಮಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಏ.11(ಎಂಟಿವೈ)– ಪೂರ್ವ ಮುಂಗಾರು ಮಳೆಯಿಂದಾಗಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯದಲ್ಲಿ ಹಸಿರು ಆವರಿಸಿದ್ದು, ಒಂದೆಡೆ ಕಾಡ್ಗಿಚ್ಚು ಆತಂಕ ದೂರವಾಗಿದ್ದರೆ, ಮತ್ತೊಂದೆಡೆ ವನ್ಯಜೀವಿಗಳ ಕಲರವ ಆರಂಭವಾಗಿದೆ.

ಪ್ರತಿವರ್ಷ ನವೆಂಬರ್‌ನಿಂದ ಮೇ ತಿಂಗಳವರೆಗೆ ಕಾಡ್ಗಿಚ್ಚಿನ ಆತಂಕ ಉಂಟಾಗಲಿದ್ದು, ಮಳೆಗಾಲ ಆರಂಭದವರೆಗೂ ಹದ್ದಿನ ಕಣ್ಣಿಟ್ಟು ಕಾಡು ಕಾಪಾಡಿಕೊಳ್ಳಲು ಮುಂಚೂಣಿ ಸಿಬ್ಬಂದಿ ಶ್ರಮಿಸುತ್ತಿದ್ದರು. ಆದರೆ, ಈ ಬಾರಿ ಅವಧಿಗೂ ಮುನ್ನವೇ 3–4 ಬಾರಿ ಸುರಿದ ಧಾರಾಕಾರ ಮಳೆ, ಬೇಸಿಗೆಯಲ್ಲೂ ಅರಣ್ಯ ಪ್ರದೇಶ ಹಸಿರು ಆವರಿಸುವಂತೆ ಮಾಡಿದೆ. ಇದರಿಂದ ಸದ್ಯಕ್ಕೆ ಕಾಡ್ಗಿಚ್ಚಿನ ಆತಂಕ ನಿವಾರಣೆಯಾಗಿದೆ. ಆದರೂ, ಸೂಕ್ಷ್ಮ ಪ್ರದೇಶದಲ್ಲಿ ಬೆಂಕಿ ಪ್ರಕರಣಗಳ ತಡೆಗೆ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಾಜ್ಯದ ಮೊದಲ ಹುಲಿ ಸಂರಕ್ಷಿತ ಪ್ರದೇಶ ಹೆಗ್ಗಳಿಕೆಗೆ ಪಾತ್ರವಾಗಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಬೇಸಿಗೆ ನಿರ್ವಹಣೆಗಾಗಿ ಈ ಬಾರಿ 2,800 ಕಿ.ಮಿ ಬೆಂಕಿ ರೇಖೆ ನಿರ್ಮಿಸಲಾಗಿತ್ತು ಡಿಸೆಂಬರ್ ವೇಳೆಗೆ ಫೈರ್‌ಲೈನ್ ಕೆಲಸ ಪೂರ್ಣಗೊಳಿಸಿ, ಜನವರಿ 1ರಿಂದ ಕಾಡಂಚಿನ ಗ್ರಾಮ, ಹಾಡಿಗಳ 475 ಮಂದಿ ಫೈರ್ ವಾಚರ್ಸ್ ನಿಯೋಜಿಸಿ, ಕಾಡ್ಗಿಚ್ಚು ತಡೆಗಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ, ದಿನದ 24 ಗಂಟೆಯೂ ಕಾಡಂಚಿನ ಗ್ರಾಮಗಳ ಬಳಿ ಅರಣ್ಯ ಪ್ರದೇಶಕ್ಕೆ ಅಕ್ರಮ ನುಸುಳುವಿಕೆ ಪರಿಶೀಲನೆ ಸೆನ್ಸಾರ್ ಬೇಸ್ಡ್ ಕ್ಯಾಮರಾ, ಸಿಸಿ ಕ್ಯಾಮರಾ, ಥರ್ಮಲ್ ಡ್ರೋನ್ ಮೂಲಕ ಪರಿಶೀಲಿಸಲಾಗುತ್ತಿತ್ತು. ಇದರೊಂದಿಗೆ ಆಯಕಟ್ಟಿನ ಸ್ಥಳದಲ್ಲಿ ನಿರ್ಮಿಸಿರುವ ವಾಚ್ ಟವರ್ಸ್ ಮೂಲಕ ಹಗಲಿರುಳು ಅರಣ್ಯ ಸಂರಕ್ಷಣೆಗೆ ವೀಕ್ಷಣೆ ಮಾಡುವ ವ್ಯವಸ್ಥೆ ಕಲ್ಪಿಸಲಾಗಿತ್ತು.

ವರದಾನವಾದ ಮಳೆ: ಪ್ರತಿವರ್ಷವೂ ಜನವರಿ ಮತ್ತು ಫೆಬ್ರವರಿಯಲ್ಲಿ ಮಳೆ ಬರುವ ವಾಡಿಕೆಯಿದೆ. ಆದರೆ, ಈ ಬಾರಿ ಸಾಂಪ್ರದಾಯಿಕ ಮಳೆಯೊಂದಿಗೆ 3–4 ಬಾರಿ ಸುರಿದ ಹಠಾತ್ ಮಳೆಯಿಂದ ಒಣಗಿದ್ದ ಬಂಡೀಪುರ ಕಾಡಿಗೆ ಮರುಜೀವ ಬಂದಿದೆ. ಅರಣ್ಯ ಪ್ರದೇಶದ ಬಹುಪಾಲು ಹಸಿರು ಆವರಿಸಿದ್ದು, ಆನೆ, ಕಾಡೆಮ್ಮೆ, ಸಾಂಬರ್, ಜಿಂಕೆ, ಕಾಡು ಕುರಿ ಸೇರಿದಂತೆ ವಿವಿಧ ಪ್ರಾಣಿಗಳು ಅರಣ್ಯ ಪ್ರದೇಶದಲ್ಲಿ ಲವಲವಿಕೆಯಿಂದ ಓಡಾಡುತ್ತಿವೆ. ಅದರಲ್ಲೂ ಸಫಾರಿ ವಲಯದಲ್ಲಿ ಆನೆ, ಕಾಡೆಮ್ಮೆಗಳ ಹಿಂಡಿನ ದರ್ಶನವಾಗುತ್ತಿದ್ದು, ಪ್ರವಾಸಿಗರು ಸಂಭ್ರಮಿಸುತ್ತಿದ್ದಾರೆ.

ನೀರಿನ ಕೊರತೆಯಿಲ್ಲ: ಬಂಡೀಪುರ ಅರಣ್ಯದಲ್ಲಿ ಈ ಬಾರಿ ವನ್ಯಜೀವಿಗಳಿಗೆ ಕುಡಿಯುವ ನೀರಿನ ಕೊರತೆ ಉಂಟಾಗಿಲ್ಲ. ಅರಣ್ಯದಲ್ಲಿ ಒಟ್ಟು 420 ಕೆರೆ–ಕಟ್ಟೆಗಳಿದ್ದು, ಅವುಗಳಲ್ಲಿ ಕೆಲವೇ ಕೆರೆಗಳು ಬತ್ತಿ ಹೋಗಿದ್ದರೂ, ಉಳಿದ ಕೆರೆಗಳಲ್ಲಿ ಇನ್ನು ನೀರಿದೆ. ಅಲ್ಲದೆ, ವಿವಿಧ ವಲಯ ವ್ಯಾಪ್ತಿಯಲ್ಲಿರುವ 42 ಕೆರೆಗಳಿಗೆ ಸೋಲಾರ್ ಬೋರ್‌ವೆಲ್ ಅಳವಡಿಸಿದ್ದು, ಆ ಕೆರೆಗಳಲ್ಲಿ ವರ್ಷವಿಡೀ ನೀರಿರುತ್ತದೆ. ಇತ್ತೀಚೆಗೆ ಸುರಿದ ಮಳೆಯಿಂದಾಗಿ ಇಳಿಜಾರು ಪ್ರದೇಶದಲ್ಲಿರುವ ಕೆರೆಗಳಿಗೆ ನೀರು ಹರಿದು ಬಂದಿದ್ದು, ಸದ್ಯದ ಮಟ್ಟಿಗೆ ವನ್ಯಜೀವಿಗಳಿಗೆ ನೀರಿನ ಕೊರತೆ ಇಲ್ಲದಂತಾಗಿದೆ.



ಮಳೆ ಬಿದ್ದ ಕಾರಣ ಕಾಡ್ಗಿಚ್ಚು ಆತಂಕ ನಿವಾರಣೆ



“ಅರಣ್ಯ ಪ್ರದೇಶದಲ್ಲಿ ಈಗಾಗಲೇ 3–4 ಬಾರಿ ಮಳೆ ಬಿದ್ದಿರುವುದರಿಂದ ಅರಣ್ಯ ಪ್ರದೇಶ ಹಸಿರಿಂದ ಆವರಿಸುತ್ತಿದೆ. ಇದರಿಂದ ಕಾಡ್ಗಿಚ್ಚು ಆತಂಕ ಸದ್ಯ ನಿವಾರಣೆಯಾಗಿದೆ. ಆದರೂ ಸೂಕ್ಷ್ಮ ಪ್ರದೇಶದಲ್ಲಿ ಕಣ್ಗಾವಲು ಇಡಲಾಗಿದೆ. ಎಲ್ಲಾ ವಲಯದಲ್ಲೂ ಫೈರ್ ವಾಚರ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಥರ್ಮಲ್ ಡ್ರೋನ್ ಸೇರಿದಂತೆ ಆಧುನಿಕ ಸೌಲಭ್ಯ ಬಳಸಿಕೊಂಡು ಸೂಕ್ಷ್ಮ ಪ್ರದೇಶ, ಕಾಡಂಚಿನ ಪ್ರದೇಶಗಳಲ್ಲಿ ಹದ್ದಿನ ಕಣ್ಣಿಡಲಾಗಿದೆ. ಈ ಬಾರಿ ಅರಣ್ಯ ಪ್ರದೇಶದಲ್ಲಿರುವ ಹಲವು ಕೆರೆಗಳಲ್ಲಿ ನೀರಿದೆ. ಕೆಲ ಕೆರೆಗಳ ಹೂಳೆತ್ತಲಾಗಿದೆ. ಸೋಲಾರ್ ಬೋರ್‌ವೆಲ್‌ಗಳನ್ನು ದುರಸ್ಥಿ ಮಾಡಲಾಗಿದೆ. ಕಾಡಂಚಿನ ಪ್ರದೇಶಗಳಲ್ಲಿ ಅರಣ್ಯದ ಮಹತ್ವ ಹಾಗೂ ಕಾಡ್ಗಿಚ್ಚಿನಿಂದಾಗುವ ಅನಾಹುತಗಳ ಅರಿವು ಕಾರ್ಯಕ್ರಮ ನಡೆಸಿ, ಸ್ಥಳೀಯರ ಸಹಕಾರ ಪಡೆಯಲಾಗಿದೆ.

–ಎಸ್.ಪ್ರಭಾಕರನ್, ಸಿಎಫ್, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ.

ಡಾ.ರಾಮೇಶ್ವರಿ ವರ್ಮಾಗೆ ನಟನ ಪುರಸ್ಕಾರ



ಮೈಸೂರು, ಏ. 11–ರಂಗಭೂಮಿಗೆ ತನ್ನನ್ನು ತಾನು ಅರ್ಪಿಸಿಕೊಂಡು ಬದುಕನ್ನು ಸವೆಸಿದ ಸಾಧಕರನ್ನು ಗುರುತಿಸಿ, ಮುಂದಿನ ತಲೆಮಾರಿಗೆ ಅವರನ್ನು ಪರಿಚಯಿಸಿ, ಗೌರವಿಸುವ ನಿಟ್ಟಿನಲ್ಲಿ, ನಟನದ ಅಧ್ಯಕ್ಷರಾಗಿದ್ದ ಎನ್.ಸುಬ್ರಹ್ಮಣ್ಯಂ ಅವರ ಗೌರವಾರ್ಥ ಕೊಡಮಾಡಲ್ಪಡುವ ಪ್ರತಿಷ್ಠಿತ ನಟನ ಪುರಸ್ಕಾರವನ್ನು ಈ ಬಾರಿ ರಂಗಭೂಮಿಯಲ್ಲಿ ಬಹುಕಾಲ ಜೀವನ ಸವೆಸಿ ಸಿನಿಮಾ, ಕಿರುತೆರೆ ಕ್ಷೇತ್ರದಲ್ಲಿ ಬಹುದೀರ್ಘವಾಗಿ ತೊಡಗಿಕೊಂಡಿರುವ ಕನ್ನಡ ರಂಗಭೂಮಿಯ ಹಿರಿಯ ಕಲಾವಿದೆಯಾದ ಡಾ.ರಾಮೇಶ್ವರೀ ವರ್ಮಾ ಅವರಿಗೆ ಸಮರ್ಪಿಸಲಾಗುತ್ತಿದೆ. ಸ್ಮರಣಿಕೆ, ಅಭಿನಂದನಾ ಪತ್ರ, ಮತ್ತು ನಗದು ಹಣವನ್ನು ಗಣ್ಯರು, ಪೋಷಕರು, ಮಕ್ಕಳ ನಡುವೆ ಹಿರಿಯ ಕಲಾವಿದೆಗೆ ನೀಡಲಾಗುವುದು. ಏ.14 ಮಂಗಳವಾರ ಬೆಳಗ್ಗೆ ಬಿ.ಎಸ್.ಎಸ್. ವಿದ್ಯೋದಯ (ಭಗಿನಿ ಸೇವಾ ಸಮಾಜ) ಶಾಲೆಯ ಆವರಣದಲ್ಲಿ ನಡೆಯಲಿರುವ ಮಂಡ್ಯ ರಮೇಶ್ ಅವರ ನಟನ ಸಂಸ್ಥೆಯ 24ನೇ ವರ್ಷದ 'ರಜಾ–ಮಜಾ' ಮಕ್ಕಳ ಬೇಸಿಗೆ ಶಿಬಿರದ ಆರಂಭದ ಸಂಭ್ರಮದಲ್ಲಿ ನಟನ ಪುರಸ್ಕಾರ 2026ನ್ನು ಸಮರ್ಪಿಸಲಾಗುವುದು. ವಿವರಗಳಿಗೆ 7259537777, 9480468327, 9845595505 ಸಂಪರ್ಕಿಸಿ

ಸೇಂಟ್ ಜೋಸೆಫ್ ಆಸ್ಪತ್ರೆಗೆ ಆಂಬ್ಯುಲೆನ್ಸ್ ಕೊಡುಗೆ...



ಸೌತ್ ಇಂಡಿಯನ್ ಬ್ಯಾಂಕ್‌ನ ಸಿಎಸ್‌ಆರ್ ನಿಧಿಯಿಂದ ಮೈಸೂರಿನ ಬನ್ನಿಮಂಟಪದಲ್ಲಿರುವ ಸೇಂಟ್ ಜೋಸೆಫ್ ಆಸ್ಪತ್ರೆಗೆ ಅತ್ಯಾಧುನಿಕ ಸೌಲಭ್ಯವುಳ್ಳ ಆಂಬ್ಯುಲೆನ್ಸ್ ಅನ್ನು ಕೊಡುಗೆ ನೀಡಲಾಯಿತು. ಸೇಂಟ್ ಜೋಸೆಫ್ ಆಸ್ಪತ್ರೆ ಟ್ರಸ್ಟ್ ಅಧ್ಯಕ್ಷ ರೆವರೆಂಡ್ ಡಾ.ಫ್ರಾನ್ಸಿಸ್ ಸೆರಾವೊ, ನಿರ್ದೇಶಕ ರೆ. ಫಾ. ರೊಕ್ಸಾನ್ ಬರೂಸ್, ಸಹಾಯಕ ನಿರ್ದೇಶಕ ರೆ. ಫಾ. ನವೀನ್‌ಕುಮಾರ್.ಕೆ, ಟ್ರಸ್ಟ್ ಸದಸ್ಯ ರೆ. ಫಾ. ಟೆನ್ನಿ ಕುರಿಯನ್, ಒಡಿಪಿ ನಿರ್ದೇಶಕ ಡಾ.ಕ್ಸೇವಿಯರ್ ಡಿಸೋಜಾ, ಹೆಚ್‌ಆರ್ ಮ್ಯಾನೇಜರ್ ಎಂ.ಜಯಚಿತ್ರ, ಡಾ.ಮನುಪ್ರಸಾದ್, ಸೌತ್ ಇಂಡಿಯನ್ ಬ್ಯಾಂಕ್ ಬೆಂಗಳೂರು, ಮಂಗಳೂರು ಮ್ಯಾನೇಜರ್, ಮೈಸೂರು ಸೌತ್ ಇಂಡಿಯನ್ ಬ್ಯಾಂಕ್ ಸಿಬ್ಬಂದಿ ಸದಸ್ಯರು ಉಪಸ್ಥಿತರಿದ್ದರು.

ಮಹಿಳಾ ಸ್ವಯಂ ಉದ್ಯೋಗಿಗಳಿಗೆ ನೆರವು...



ಮೈಸೂರು ತಾಲೂಕು ಜಯಪುರದ ಉದ್ಯಮಿ, ಹೆಚ್‌ಎಂಐ ಫ್ರೂಟ್ಸ್ ಮಾಲೀಕರಾದ ಮೋಹಿಯುದ್ದಿನ್, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದಲ್ಲಿ ಫ್ಯಾಷನ್ ಡಿಸೈನಿಂಗ್ ತರಬೇತಿ ಪಡೆದ ನಾಲ್ವರು ಬಡ ಮಹಿಳೆಯರಿಗೆ 28 ಸಾವಿರ ಮೌಲ್ಯದ 4 ಹೊಲಿಗೆ ಯಂತ್ರಗಳು ಹಾಗೂ ಬ್ಯೂಟಿಷಿಯನ್ ತರಬೇತಿ ಪಡೆದ ಅಭ್ಯರ್ಥಿಗಳಿಗೆ 10 ಸಾವಿರ ಧನಸಹಾಯ ನೀಡಿದರು. ಈ ವೇಳೆ ವಿಆರ್‌ಎಲ್‌ಸಿ ವ್ಯವಸ್ಥಾಪಕ ಚಿನ್ನ ಮಹಾದೇವ, ಸಂಯೋಜಕ ಅಬ್ದುಲ್ ರಶೀದ್, ತರಬೇತುದಾರರಾದ ನೇತ್ರಾವತಿ, ವಿಜಯಲಕ್ಷ್ಮೀ ಹಾಜರಿದ್ದರು.

ಏ.26ರೊಳಗೆ ಸವಲತ್ತು ನೀಡದಿದ್ದರೆ ಮಿನಿ ವಿಧಾನಸೌಧದ ಎದುರು ಆದಿವಾಸಿಗಳ ಪ್ರತಿಭಟನೆ

ಮೈಸೂರು,ಏ.11(ಜಿಎ)–ಹೆಚ್.ಡಿ.ಕೋಟೆ ತಾಲೂಕಿನ ಆದಿವಾಸಿ ಸಮುದಾಯದ ಸುಮಾರು 80 ಹಾಡಿಗಳಲ್ಲಿ ವಾಸವಾಗಿರುವವರಿಗೆ ವಿವಿಧ ಸವಲತ್ತು ನೀಡದೇ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ತಾಳಿದ್ದಾರೆ. ಏ.26ರ ಮುನ್ನ ಸವಲತ್ತು ನೀಡದಿದ್ದರೆ ಹೆಚ್.ಡಿ.ಕೋಟೆ ಮಿನಿ ವಿಧಾನ ಸೌಧದೆದುರು ಆದಿವಾಸಿಗಳು ಅಹೋರಾತ್ರಿ ಧರಣಿ ನಡೆಸಬೇಕಾಗುತ್ತದೆ ಎಂದು ತಾಲೂಕು ಅರಣ್ಯ ಹಕ್ಕು ಸಮಿತಿಗಳ ಒಕ್ಕೂಟದ ಅಧ್ಯಕ್ಷ ಬಿ.ಎಂ.ನಟರಾಜು ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಡಿ ವಾಸಿಗಳಿಗೆ ಮೊದಲು ಅರಣ್ಯ ಹಕ್ಕುಪತ್ರ ವಿತರಿಸಿದ ಬಳಿಕವೇ ರೈಲ್ವೆ ಕಂಬಿಯ ತಡೆಗೋಡೆ ನಿರ್ಮಿಸಬೇಕು. ಸುಮಾರು 175 ಅರ್ಜಿ ನಮೂನೆ ಎ,ಬಿ,ಸಿ ಕಡತಗಳನ್ನು ಬುಡಕಟ್ಟು ಅರಣ್ಯ ಹಕ್ಕು ವಿಶೇಷ ಗ್ರಾಮ ಸಭೆಗೆ ಸಲ್ಲಿಸಿದ್ದರೂ ತಡೆಹಿಡಿಯಲಾಗಿದೆ. ಕೂಡಲೇ ಇವುಗಳ ವಿಲೇವಾರಿ ಮಾಡಬೇಕು. ಅರಣ್ಯ ಹಕ್ಕು ಸಮಿತಿ ತೀರ್ಮಾನದ ಶಿಫಾರಸುಗಳಿಗೆ ಮಾತ್ರ ಮಾನ್ಯತೆ ನೀಡಬೇಕು, ಪ್ರೊ.ಮುಜಾಫರ್ ಅಸ್ಸಾದಿ ಶಿಫಾರಸು ಜಾರಿಗೊಳಿಸಬೇಕು. ಇದರನ್ವಯ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನಗೊಳಿಸಿ ಜಮೀನು, ಮನೆ ಮಂಜೂರು ಮಾಡಬೇಕು. ಪ್ಯಾಕೇಜ್ ಹಣವನ್ನು ಪತಿ, ಪತ್ನಿ ಹೆಸರಿನ ಜಂಟಿ ಖಾತೆಗೆ ಜಮಾ ಮಾಡಬೇಕು ಎಂಬಿವೇ ಮೊದಲಾದವು ತಮ್ಮ ಬೇಡಿಕೆಗಳಾಗಿವೆ ಎಂದರು.

ಸಾಧಕಿಯರಿಗೆ ಕರ್ನಾಟಕ ಮಹಿಳಾ ರತ್ನ ಪ್ರಶಸ್ತಿ ಪ್ರದಾನ



ವಿವಿಧ ಕ್ಷೇತ್ರದ ಮಹಿಳಾ ಸಾಧಕಿಯರಿಗೆ ಕರ್ನಾಟಕ ಮಹಿಳಾ ರತ್ನ ಪ್ರಶಸ್ತಿ 2026 ಪ್ರದಾನ ಮಾಡಲಾಯಿತು.

ಮೈಸೂರು, ಏ.11– ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಪಿಆರ್‌ಕೆ ಫೌಂಡೇಶನ್ ಉದ್ಘಾಟನೆ ಹಾಗೂ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ ಮಹಿಳಾ ಸಾಧಕಿಯರಿಗೆ ಕರ್ನಾಟಕ ಮಹಿಳಾ ರತ್ನ ಪ್ರಶಸ್ತಿ 2026 ಪ್ರದಾನ ಮಾಡಲಾಯಿತು.

ಸಮಾಜ ಸೇವಕರು ಖ್ಯಾತ ಜೋತಿಷ್ಯರಾದ ಚಂದ ಪಾಂಡೆ ಅಮ್ಮಜಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಇತಿಹಾಸದ ಉದ್ದಕ್ಕೂ ಮಹಿಳೆಯರು ತಮ್ಮ ಅಪ್ರತಿಮ ದೃಢಸಂಕಲ್ಪ ತ್ಯಾಗ ಮತ್ತು ಶಕ್ತಿಯ ಮೂಲಕ ಸಮಾಜವನ್ನು ರೂಪಿಸುತ್ತಾ ಬಂದಿದ್ದಾರೆ ಎಂದು ಹೇಳಿದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಮಾತನಾಡಿ, ಶಿಕ್ಷಣ ವ್ಯಾಪಾರ ವಿಜ್ಞಾನ ಕಲೆ ರಾಜಕೀಯ ಸೇರಿದಂತೆ ಪ್ರತಿ ಕ್ಷೇತ್ರದಲ್ಲೂ ಮಹಿಳೆಯರು ಪುರುಷರಿಗೆ ಸರಿ ಸಮಾನವಾಗಿ ಕೆಲಸ ಮಾಡುತ್ತಿದ್ದಾರೆ. ಮನೆಗೆ ಬೆಳಕಾಗುವ ಹೆಣ್ಣು ದೇಶದ ಅಭಿವೃದ್ಧಿಗೂ ಅಷ್ಟೇ ಪ್ರಮುಖ ಕೊಡುಗೆ ನೀಡುತ್ತಿದ್ದಾರೆ ಎಂದು ಹೇಳಿದರು.

ಸಮಾಜ ಸೇವಕಿ ಡಾ. ಹೇಮಾ ನಂದೀಶ್ ಮಾತನಾಡಿ, ಲಿಂಗ ಸಮಾನತೆಗಾಗಿ ಪ್ರತಿಪಾದಿಸಿದರ ಜೊತೆಗೆ ಮಹಿಳೆಯರು ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ಸದೃಢಬೇಕಾಗಿದೆ. ಪ್ರಸ್ತುತದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವಾಗಬೇಕಿದೆ ಎಂದು ಹೇಳಿದರು.

ಇದೇ ವೇಳೆ ಪಿಆರ್‌ಕೆ ಫೌಂಡೇಶನ್ ಲೋಗೋವನ್ನು ಸಂಸ್ಥೆಯ ಅಧ್ಯಕ್ಷ ಅಯ್ಯಪ್ಪ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಮಂಜುಳಾ ಸೋಮಣ್ಣ, ಶ್ರುತಿ, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಚಾಮುಂಡಿಬೆಟ್ಟದಲ್ಲಿ ಕೋತಿಗಳ ದಾಹ ನೀಗಿಸಲು ನೀರಿನ ತೊಟ್ಟಿ ಅಳವಡಿಕೆ

ಮೈಸೂರು, ಏ. 11– ಮೈಸೂರಿನ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ ತೀವ್ರ ಬೇಸಿಗೆ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟದ ನಂದಿ ಹತ್ತಿರ ಕೋತಿಗಳಿಗೆ ದಾಹ ನೀಗಿಸಲು ನೀರಿನ ತೊಟ್ಟಿ ಅಳವಡಿಸಿ ಸ್ಥಳೀಯ ವ್ಯಾಪಾರಸ್ಥರಿಗೆ ಪ್ರತಿನಿತ್ಯ ನೀರಿನ ತೊಟ್ಟಿಗೆ ನೀರನ್ನು ಹಾಕುವಂತೆ ಮನವಿ ಮಾಡುವ ಮೂಲಕ ಜಾಗೃತಿ ಮೂಡಿಸಲಾಯಿತು.

ಈ ವೇಳೆ ಮಾತನಾಡಿದ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಎಲ್ಲಾ ಜೀವಿಗಳಿಗೂ ಮನುಷ್ಯರಂತೆ ಭಾವನೆಗಳಿವೆ. ಅವುಗಳ ಕ್ರಿಯೆ ಪ್ರತಿಕ್ರಿಯೆಯನ್ನು ಸೂಕ್ಷ್ಮತೆಯಿಂದ ಅರಿಯುವ ಮನಸ್ಸು ಇಂದಿನ ಪೀಳಿಗೆಗೆ ಅವಶ್ಯಕತೆ, ಪರಿಸರದಲ್ಲಿ ಪ್ರಾಣಿ ಪಕ್ಷಿಗಳಿಗೂ ಬದುಕುವ ಹಕ್ಕಿದೆ. ಪ್ರಾಣಿ ಪಕ್ಷಿಗಳ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬ ಮನುಷ್ಯರ ಆದ್ಯ ಕರ್ತವ್ಯ. ಆದರೆ ಮೊಬೈಲ್ ತರಂಗಗಳಿಂದ ಹಾಗೂ ಪರಿಸರ ಅರಣ್ಯ ನಾಶದಿಂದ ಪಕ್ಷಿಗಳೇ ಮಾಯವಾಗಿ ರುವುದು ದುರಂತದ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ನಜರ್‌ಬಾದ್ ನಟರಾಜ್, ಕಡಕೊಳ ಗ್ರಾಮ ಪಂಚಾಯಿತಿ ಆರೋಗ್ಯ ಅಧಿಕಾರಿ ಮಂಜುನಾಥ್, ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ರವಿಚಂದ್ರ, ಲೋಕೇಶ್, ನಿತೇಶ್, ಕಡಕೋಳ ಶಿವು, ಎಸ್.ಎನ್.ರಾಜೇಶ್, ಹರೀಶ್ ನಾಯ್ಡು ಹಾಗೂ ಇನ್ನಿತರರು ಹಾಜರಿದ್ದರು.



ಚಾಮುಂಡಿಬೆಟ್ಟದ ನಂದಿ ಹತ್ತಿರ ಕೋತಿಗಳ ದಾಹ ನೀಗಿಸಲು ನೀರಿನ ತೊಟ್ಟಿ ಅಳವಡಿಸಿ, ಅವುಗಳ ರಕ್ಷಣೆಗೆ ಮುಂದಾಗುವಂತೆ ಜಾಗೃತಿ ಮೂಡಿಸಲಾಯಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.4.2026 ಭಾನುವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಶ್ರವಣ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ತಪಾಸಣಾ ಮತ್ತು ಸಲಹಾ ಶಿಬಿರ, ಕೊಲೆಸ್ಟ್ರಾಲ್ ಚಿಕಿತ್ಸಾ ಶಿಬಿರ, ಮಹಿಳೆಯರಲ್ಲಿ ಯೋನಿ ಸೋಂಕು ತಪಾಸಣಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಆರೋಹಣ ಪ್ರೀ ಸ್ಕೂಲ್** : ಉದ್ಘಾಟನಾ ಸಮಾರಂಭ, ಉದ್ಘಾಟನೆ : ಅಂಕಣಕಾರ ಪ್ರೊ. ಎಂ. ಕೃಷ್ಣೇಗೌಡ, ಮುಖ್ಯ ಅತಿಥಿಗಳು : ಆದಾಯ ತೆರಿಗೆ ಅಧಿಕಾರಿ ಡಾ. ಆರ್. ಭಾವನಾ, ಪ್ರೊ. ಕೆ.ಬಿ. ಪ್ರವೀಣ, ಸಾಮಾಜಿಕ ಕಾರ್ಯಕರ್ತ ಡಾ. ಇ.ಸಿ. ನಿಂಗರಾಜ್‌ಗೌಡ, ಪದ್ಮಶ್ರೀ ಪುರಸ್ಕೃತರಾದ ಎಂ. ಅಂಕೇಗೌಡ, ಸ್ಥಳ: 729, 3ನೇ ಕ್ರಾಸ್, 2ನೇ ಹಂತ, ಬೋಗಾದಿ, ಬೆಳಗ್ಗೆ 11ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಮುಕ್ತಿದಾನಂದ ಅವರಿಂದ ಈಶಾವಾಸ್ಯ ಉಪನಿಷದ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ವ್ಯವಸ್ಥಾಪಕರು** : ಭಗಿನಿ ಸಂಗೀತೋತ್ಸವ, ವಿದುಷಿ ಅಭಿರಾಂ ಬೋಡೆ ಅವರಿಂದ ಗಾಯನ, ವಿದ್ವಾನ್ ಕೇಶವ್ ಮೋಹನ್–ವಯೋಲಿನ್, ವಿದ್ವಾನ್ ರಾಧೇಶ್– ಮೃದಂಗ, ವಿದ್ವಾನ್ ಹಾಲಂಬಿ ಭಾರ್ಗವ–ಘಟಂ, ಸ್ಥಳ: ಬಿಎಸ್‌ಎಸ್ ವಿದ್ಯೋದಯದ ಪದ್ಮಜಾ ಶ್ರೀನಿವಾಸ್ ಸಭಾಂಗಣ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.
- **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಸಂಗೀತ ತ್ರಿಮೂರ್ತಿಗಳ ಸಂಸ್ಮರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಶ್ಯಾಮಾ ಶಾಸ್ತ್ರಿಗಳು, ಶ್ರೀ ತ್ಯಾಗರಾಜರು ಮತ್ತು ಶ್ರೀ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳ ಗಾಯನ, ಪ್ರಸ್ತುತಿ : ಸುರಭಿ ಗಾನ ಕಲಾ ಮಂದಿರದ ಕಲಾವಿದರು, ಪರಿಕಲ್ಪನೆ : ವಿದುಷಿ ಡಾ. ಸುಕನ್ಯಾ ಪ್ರಭಾಕರ್, ವಿದುಷಿ ಎಸ್.ಎ. ದಿವ್ಯಶ್ರೀ–ವಯೋಲಿನ್, ವಿದ್ವಾನ್ ಬಿ.ಎಸ್. ಶುಭಾಂಗ್–ಮೃದಂಗ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಸಂಜೆ 6ಕ್ಕೆ.
- **ಶ್ರೀ ಪ್ರಸನ್ನ ಸುಂದರ ರಾಮ ಮಂದಿರ ಸೇವಾ ಸಮಿತಿ ಟ್ರಸ್ಟ್** : ವಿದುಷಿ ಶ್ರೀಮತಿ ಅರ್ಚನಾ ಎಲ್. ರಾವ್ ಮತ್ತು ತಂಡದವರಿಂದ ಶಾಸ್ತ್ರೀಯ ಸಂಗೀತ ಗಾಯನ, ಸ್ಥಳ: ಶ್ರೀ ರಾಮಮಂದಿರ, 2ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಅಂಬಯ್ಯನುಲಿ, ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ.ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 8.30 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಗರ್ಭಿಣಿಯರಲ್ಲಿ ರಕ್ತದೊತ್ತಡ ಕಾರಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರಾದ ಡಾ.ತೇಜಸ್ವಿನಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ ಕಥೆ ಕೇಳು ಪುಟ್ಟಿ, ಪ್ರಸ್ತುತಿ–ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ ಚೈತನ್ಯ ಚಿಲುಮೆ ಮಾಲಿಕೆಯಲ್ಲಿ ಬಹುಮುಖ ಪ್ರತಿಭೆ ಭುವಿಕ್.ಎಂ.ಎಂ ಹಾಗೂ ಅವರ ತಂದೆ ಮಲ್ಲೇಶ್.ಎಚ್.ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ದಿಗ್ವಿಜಯ್.ಬಿ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ –ಗಿರಿನಗರ ಅಂಜನಾ ಮಹಿಳಾ ಬಳಗದವರಿಂದ ತೊಟ್ಟಿಲು ಶಾಸ್ತ್ರದ ಸಂಪ್ರದಾಯದ ಹಾಡುಗಳು, 12.35 ಭಕ್ತಿಗೀತೆಗಳು : ಸುಧಾ ಮಂಜುನಾಥ್, 12.45 ಜನಪದ ಸಂಗೀತ – ಟಿ.ನರಸೀಪುರದ ಇಂದಿರಮ್ಮ ಮತ್ತು ಸಂಗಡಿಗರಿಂದ ಮನೆಯಮ್ಮನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು– ಭವ್ಯಾ ಪೈ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಗೀತಾ,3.40 ಸಿರಿಗನ್ನಡಂ ಗೆಲ್ಗೆ,ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ – ಮಲ್ಲಾಡಿ ಸಹೋದರರ ಯುಗಳ ಹಾಡುಗಾರಿಕೆಯಲ್ಲಿ ನಾರಾಯಣತೀರ್ಥರ ರಚನೆಗಳು, 4.45 ಚಿತ್ರಗೀತೆಗಳು, 6.51 ಕೃಷಿರಂಗ : ಹಟ್ಟಿಹರಟೆ–ವಾರದ ಗ್ರಾಮೀಣಾ ಚರ್ಚೆ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ:– ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಫಸ್ಟ್ ಫಿಲ್ಮ್, ಪ್ರಸ್ತುತಿ–ಎಸ್.ಶ್ರೀಮಾನ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಜಗಜ್ಯೋತಿ ಬಸವೇಶ್ವರ ನಾಟಕದ ಹಾಡುಗಳು, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ – ಜಯಿತಾ ಘಾಟಕ್–ಖ್ಯಾಲ್ ಗಾಯನ

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪ್ರಶಿಕ್ಷಣ ವರ್ಗಕ್ಕೆ ಚಾಲನೆ

ಸಂಘಟನೆ ಬಲವರ್ಧನೆಗೆ ಕಾರ್ಯಕರ್ತರಿಗೆ ನಿರ್ದೇಶನ ಹಾಗೂ ಸ್ಫೂರ್ತಿ



ಪ್ರಶಿಕ್ಷಣ ವರ್ಗದ ಕಾರ್ಯಕ್ರಮವನ್ನು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಮೈಸೂರು, ಏ. 11–ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವತಿಯಿಂದ ಆಯೋಜಿಸಲಾಗಿದ್ದ ಪ್ರಶಿಕ್ಷಣ ವರ್ಗದ ಉದ್ಘಾಟನಾ ಕಾರ್ಯಕ್ರಮವು ಜಯಪುರ ಗ್ರಾಮದ ದೇವಮ್ಮ ಪಟೇಲ್ ಚಿಕ್ಕಅಂಕೇಗೌಡ ಕಲ್ಯಾಣ ಮಂಟಪದಲ್ಲಿ ಇಂದು ವಿಜೃಂಭಣೆಯಿಂದ ನೆರವೇರಿತು.

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಜಕೀಯದಲ್ಲಿ ದೀರ್ಘಕಾಲಿಕ ಸಾಧನೆ ಮಾಡಲು ಸಂಘಟಿತ ಕಾರ್ಯಪದ್ಧತಿ ಮತ್ತು ಶಿಸ್ತಿನ ತರಬೇತಿ ಅತ್ಯಾವಶ್ಯಕವೆಂದು ಹೇಳಿದರು. ಕಾರ್ಯಕರ್ತರು ಕೇವಲ ಚುನಾವಣಾ ಸಮಯದಲ್ಲಿ ಮಾತ್ರವಲ್ಲ, ಸದಾ ಜನಸಂಪರ್ಕ ದಲ್ಲಿದ್ದು ಪಕ್ಷದ ತತ್ವ-ಸಿದ್ಧಾಂತಗಳನ್ನು ಜನತೆಗೆ ತಲುಪಿಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕೆಂದು ಅವರು ಮಾರ್ಗ ದರ್ಶನ ನೀಡಿದರು.

ನಗರ ಅಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಪಕ್ಷದ ಬಲವೇ ಅದರ ಕಾರ್ಯಕರ್ತರು ಎಂಬುದನ್ನು ಒತ್ತಿ ಹೇಳಿದರು. ಸಂಘಟನೆಯ ಮೂಲಭೂತ ಸಿದ್ಧಾಂತಗಳನ್ನು ಅರಿತು, ನೆಲಮಟ್ಟದಲ್ಲಿ ಪಕ್ಷದ ಕಾರ್ಯಚಟುವಟಿಕೆಗಳನ್ನು ಬಲಪಡಿಸುವಲ್ಲಿ ಪ್ರಶಿಕ್ಷಣ ವರ್ಗಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ತರಬೇತಿಯ ಮೂಲಕ ನಾಯಕತ್ವ ಗುಣಗಳನ್ನು ಅಭಿವೃದ್ಧಿಪಡಿಸಿಕೊಂಡು, ಸಮಾಜದಲ್ಲಿ ಪಕ್ಷದ ಪ್ರಭಾವವನ್ನು ಮತ್ತಷ್ಟು ವಿಸ್ತರಿಸುವುದು ಪ್ರತಿಯೊಬ್ಬರ ಕರ್ತವ್ಯವೆಂದು ಹೇಳಿದರು.

ವಿಭಾಗ ಪ್ರಭಾರಿಗಳಾದ ಸ್ವಾಮಿ ಮರುಳಾಪುರ, ಸಹಪ್ರಭಾರಿಗಳಾದ ಇ.ಸಿ. ನಿಂಗ ರಾಜುಗೌಡ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು. ಜೊತೆಗೆ ನಗರ ಜಿಲ್ಲಾ ಉಪಾಧ್ಯಕ್ಷ ಎನ್. ಅರುಣ್ ಕುಮಾರ್ ಗೌಡ ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ. ರಘು, ರುದ್ರಮೂರ್ತಿ, ಚಾಮುಂಡೇಶ್ವರಿ ಮಂಡಲದ ಅಧ್ಯಕ್ಷ ಪೈ.ಟಿ.ರವಿ, ಎಸ್.ಡಿ. ಮಹೇಂದ್ರ ಗೋಪಾಲ್ ರಾವ್, ಹೇಮಂತ್ ಕುಮಾರ್‌ಗೌಡ, ಶಿವ ಕುಮಾರ್, ವಾಣಿಶ್ ಕುಮಾರ್, ಮಹೇಶ್, ಗಣೇಶ್ ಹಾಗೂ ಕ್ಷೇತ್ರ ಪ್ರಧಾನ ಕಾರ್ಯದರ್ಶಿಗಳಾದ ಹೇಮಂತ್ ಅಪ್ಪಾಜಿ ಗೌಡ, ಚಿಕ್ಕಣ್ಣ ಶಿವು, ಮರಿಸ್ವಾಮಿ ನಾಯಕ, ಶ್ರೀನಿವಾಸ್, ಮೋನಿಕಾ, ಸುನಿಲ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ರಾಮನಹಳ್ಳಿ ಗ್ರಾಮದ ಪರಿಮಿತಿಯ


ಲೆವೆಲ್ ಕ್ರಾಸಿಂಗ್ 19ರಲ್ಲಿ ಮೇಲ್ಸೇತುವೆ ನಿರ್ಮಾಣ

ಶಾಸಕ ಜಿ.ಟಿ.ದೇವೇಗೌಡರ ಮನವಿಗೆ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಭರವಸೆ

ಮೈಸೂರು,ಏ.11(ಪಿಎಂ)– ಮೈಸೂರು–ಕೆಆರ್ ನಗರ ಮಧ್ಯದಲ್ಲಿರುವ ಸಾಗರಕಟ್ಟೆ ಸಮೀಪದ 23/200–300 ಕಿ.ಮೀ.ನಲ್ಲಿರುವ ಲೆವೆಲ್ ಕ್ರಾಸಿಂಗ್ ಗೇಟ್ ಎಲ್‌ಸಿ–19ರಲ್ಲಿ ಮೇಲ್ಸೇತುವೆ ನಿರ್ಮಿಸುವಂತೆ ಕೋರಿ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಖಾತೆಗಳ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡರು ಮನವಿ ಸಲ್ಲಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಮೈಸೂರು ತಾಲೂಕು ಇಲವಾಲ ಹೋಬಳಿ ರಾಮನಹಳ್ಳಿ ಗ್ರಾಮದ ಪರಿಮಿತಿಯ ಲೆವಲ್ ಕ್ರಾಸಿಂಗ್ 19ರಲ್ಲಿ ಮೇಲ್ಸೇತುವೆ ನಿರ್ಮಿಸುವಂತೆ ಶಾಸಕ ಜಿ.ಟಿ.ದೇವೇಗೌಡರು ಮಾಡಿದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವ ಸೋಮಣ್ಣ ಮೇಲ್ಸೇತುವೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮೈಸೂರು–ಕೆಆರ್‌ನಗರ ಮಾರ್ಗದ ರೈಲ್ವೆ ಹಳಿಗಳು ಹಾದು ಹೋಗಿದ್ದು, ಕಾವೇರಿ ನದಿಗೆ ಹೊಂದಿಕೊಂಡಂತೆ ಇರುವ ಸಾಗರಕಟ್ಟೆ ರೈಲ್ವೆ ಸ್ಟೇಷನ್ ಹತ್ತಿರ 24/200–300 ಕಿ.ಮೀ.ನಲ್ಲಿ ಈಗಾಗಲೇ ಒಂದು ಕೆಳ ಸೇತುವೆಯನ್ನು ರೈಲ್ವೆ ಇಲಾಖೆಯಿಂದ ನಿರ್ಮಾಣ ಮಾಡಿದ್ದು, ಕಾವೇರಿ ನದಿಗೆ ನೀರು ಬಂದಾಗ ಈ ಕೆಳಸೇತುವೆಯಲ್ಲಿ ನೀರು ತುಂಬಿಕೊಳ್ಳುತ್ತದೆ. ಕೆಆರ್‌ಎಸ್‌ನಲ್ಲಿ ಸುಮಾರು 9 ತಿಂಗಳ ಕಾಲ ನೀರು ತುಂಬಿರುತ್ತದೆ. ಇದರಿಂದ ಈ ಕೆಳ ಸೇತುವೆಯು ಯಾವುದೇ ಉಪಯೋಗಕ್ಕೆ ಬರುತ್ತಿಲ್ಲ.



ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಶಾಸಕ ಜಿ.ಟಿ.ದೇವೇಗೌಡರು ಮನವಿ ಸಲ್ಲಿಸಿದರು.

ಆದರೆ ಇತ್ತೀಚೆಗೆ ಸಾಗರಕಟ್ಟೆ ರಾಮನಹಳ್ಳಿಗೆ ಹೋಗುವ ರಸ್ತೆಯಲ್ಲಿರುವ 23/200–300ರ ಮತ್ತೊಂದು ಲೆವೆಲ್ ಕ್ರಾಸಿಂಗ್ ಗೇಟ್ ಎಲ್‌ಸಿ 19ರಲ್ಲಿ ಕೆಳಸೇತುವೆ ನಿರ್ಮಿಸಲು ಅಂದಾಜು ಪಟ್ಟಿ ತಯಾರಿಸಿರುವುದಾಗಿ ತಿಳಿದು ಬಂದಿದೆ. ಕೆಆರ್‌ಎಸ್‌ನ ಹಿನ್ನೀರಿನಲ್ಲಿರುವ ಸದರಿ ಲೆವೆಲ್ ಕ್ರಾಸಿಂಗ್ 19ರಲ್ಲಿ ಕೆಳ ಸೇತುವೆ ನಿರ್ಮಾಣ ಮಾಡಿದರೆ ರೈತರಿಗೆ ಬಹಳ ತೊಂದರೆಯಾಗಲಿದೆ. ಈ ಸಂಬಂಧ ನಾನು ಸಹ ಸ್ಥಳ ಪರಿಶೀಲನೆ ಮಾಡಿದ್ದೇನೆ.

ಆದ್ದರಿಂದ ತಾವು ಸಾಗರಕಟ್ಟೆ-ರಾಮನಹಳ್ಳಿಗೆ ಹೋಗುವ ರಸ್ತೆಯಲ್ಲಿರುವ 23/200–300 ಲೆವೆಲ್ ಕ್ರಾಸಿಂಗ್ ಗೇಟ್ ಎಲ್‌ಸಿ 19ರಲ್ಲಿ ಕೆಳಸೇತುವೆಯ ಬದಲಾಗಿ ಮೇಲ್ಸೇತುವೆ ನಿರ್ಮಿಸಲು ಕ್ರಮ ವಹಿಸುವಂತೆ ಶಾಸಕ ಜಿ.ಟಿ.ದೇವೇಗೌಡರು ತಮ್ಮ ಮನವಿಯಲ್ಲಿ ಕೋರಿದ್ದಾರೆ.

ಮೈಕಾಸ್‌ನಲ್ಲಿ 100 ಮಂದಿಗೆ ಉದ್ಯೋಗಾವಕಾಶ ಲಭ್ಯ

ಮೈಸೂರು, ಏ.11(ಎಂಟಿವೈ)– ಮೈಸೂರಿನ ಮೈಕಾಸ್ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಮೆಗಾ ಉದ್ಯೋಗ ಮೇಳದಲ್ಲಿ ಸುಮಾರು 100 ಮಂದಿ ಸ್ಥಳದಲ್ಲೇ ಉದ್ಯೋಗ ನೇಮಕಾತಿ ಪತ್ರ ಪಡೆದಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರಾದ ತೆಕ್ಕಾಡೆ ಜೆ. ರಮ್ಯಾ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ 100 ವಿದ್ಯಾರ್ಥಿಗಳು ಸೇರಿದಂತೆ 850 ವಿದ್ಯಾರ್ಥಿಗಳು ಮೇಳದಲ್ಲಿ ಭಾಗವಹಿಸಿದ್ದರು. 43 ಕಂಪನಿಗಳು ಉದ್ಯೋಗ ಪ್ರಕ್ರಿಯೆಯಲ್ಲಿ ಪಾಲ್ಗೊಂಡವು. ಸುಮಾರು 300 ವಿದ್ಯಾರ್ಥಿಗಳಿಗೆ ಮುಂದಿನ ಹಂತದ ನೇಮಕಾತಿ ಪ್ರಕ್ರಿಯೆಗೆ ಆಹ್ವಾನಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪಿಂಯು ಕಾಲೇಜಿನ ಪ್ರಾಂಶುಪಾಲರಾದ ಅರ್ಚನಾ, ಉದಯ್, ಪವನ್ ಇದ್ದರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಮೈಸೂರು ಸಿಟಿ –570010, ನಜರ್‌ಬಾದ್, 2ನೇ ಅಡ್ಡರಸ್ತೆ, ಮನೆ ಸಂಖ್ಯೆ: 523/ಎ ರಲ್ಲಿ ವಾಸವಾಗಿರುವ ಶ್ರೀ.ಸಿದ್ಧಚಾರಿರವರ, ಮಗನಾದ, ಸುಮಾರು 46 ವರ್ಷ ವಯಸ್ಸಿನ ಶ್ರೀ.ಎಂ.ಎಸ್.ಭರತ್ ಕುಮಾರ್ ರವರು, ಮೈಸೂರು ಸಿಟಿ–570024, ಕೆ.ಆರ್.ಮೊಹಲ್ಲ ಪೋಸ್ಟ್ ಆಫೀಸ್, ಚಾಮರಾಜಮೊಹಲ್ಲ, ಕಾಲೇಜು ರಸ್ತೆ, ಮನೆ ಸಂಖ್ಯೆ 147/1 ರಲ್ಲಿ ವಾಸವಾಗಿರುವ ಲೇ॥ ವೆಂಕಟಚಲಯ್ಯ ರವರ ಮಗನಾದ. ಸುಮಾರು 59 ವರ್ಷ ವಯಸ್ಸಿನ ಶ್ರೀ.ಎಂ.ವಿ. ಕೃಷ್ಣ ಕುಮಾರ್ ರವರ ಹೆಸರಿನಲ್ಲಿ ನೊಂದಾಯಿತವಾಗಿರುವ ಕೆಳಕಂಡ ಅನುಸೂಚಿ ಸ್ವತ್ತನ್ನು ಕ್ರಯಪತ್ರದ ಮೂಲಕ ಖರೀದಿಸಿಕೊಳ್ಳಲು ಇಚ್ಛಿಸಿರುವರು.

ಈ ಸಂಬಂಧವಾಗಿ, ಮೇಲ್ಕಂಡ ಅನುಸೂಚಿ ಸ್ವತ್ತಿನ ಕುರಿತು ಯಾರಿಂದಾದರೂ ಯಾವುದೇ ವಿಧದ ತಕರಾರು, ಹಕ್ಕು, ಬೇಡಿಕೆ ಅಥವಾ ನ್ಯಾಯಬದ್ಧವಾದ ದಾವೆ ಇದ್ದಲ್ಲಿ, ಈ ಸಾರ್ವಜನಿಕ ಪ್ರಕಟವಾದ ದಿನಾಂಕದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಹಕ್ಕುಗಳನ್ನು ಸಮರ್ಥಿಸುವ ಎಲ್ಲಾ ಮೂಲ ದಾಖಲೆಗಳೊಂದಿಗೆ ಕೆಳಕಂಡ ವಿಳಾಸದಲ್ಲಿ ಹಾಜರಾಗಿ ತಿಳಿಸಬೇಕಾಗಿರುತ್ತದೆ:

Patel Associates, #2344/1, 1ನೇ ಮಹಡಿ, ನಂ.3, 1ನೇ ಮುಖ್ಯರಸ್ತೆ, ಪಂಪಾಪತಿ ರಸ್ತೆ, ಚಾಮರಾಜಪುರಂ ರೈಲು ನಿಲ್ದಾಣದ ಎದುರು, ಕೆ.ಜಿ.ಕೊಪ್ಪಲ್, ಚಾಮರಾಜ ಮೊಹಲ್ಲಾ, ಮೈಸೂರು 09. ನಿಗದಿತ ಅವಧಿಯೊಳಗಾಗಿ ಯಾವುದೇ ರೀತಿಯ ನ್ಯಾಯಬದ್ಧವಾದ ತಕರಾರುಗಳು ಅಥವಾ ಕ್ಲೈಂಗಳು ಸಲ್ಲಿಸದಿದ್ದಲ್ಲಿ, ನನ್ನ ಕಕ್ಷಿದಾರರು ಮೇಲ್ಕಂಡ ಅನುಸೂಚಿ ಸ್ವತ್ತಿನ ಕ್ರಯಪತ್ರವನ್ನು ನೋಂದಣಿ ಮಾಡಿಕೊಳ್ಳುವರು. ನಂತರದಲ್ಲಿ ಯಾರಿಂದಾದರೂ ಉದ್ಭವಿಸುವ ಯಾವುದೇ ರೀತಿಯ ತಕರಾರುಗಳು ಅಥವಾ ದಾವೆಗಳು ನನ್ನ ಕಕ್ಷಿದಾರರಿಗೆ ಬಾಧ್ಯವಾಗುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗುತ್ತದೆ.

ಅನುಸೂಚಿ ಸ್ವತ್ತಿನ ವಿವರಗಳು: ಮೈಸೂರು ಸಿಟಿ, ಚಾಮರಾಜಮೊಹಲ್ಲ, ಕಾಲೇಜು ರಸ್ತೆ, ಮನೆ ಸಂಖ್ಯೆ: 147/1, CH-8, ಮಹಾನಗರ ಪಾಲಿಕೆ, ಮೈಸೂರು ನಮೂನೆ–2 (ನಿಯಮ–11) ರ ಸ್ವತ್ತಿನ PID ಸಂಖ್ಯೆ 7550960211, ವಾರ್ಡ್ ಸಂಖ್ಯೆ: 23, ನಿರ್ದರಣಾ ಸಂಖ್ಯೆ: 147/1CH–8 ರ ಸ್ವತ್ತಿನ ಅಳತೆ ಪೂರ್ವ ಪಶ್ಚಿಮ 6.629413 ಮೀಟರ್‌ಗಳು, ಉತ್ತರ ದಕ್ಷಿಣ13.944628 ಮೀಟರ್‌ಗಳುಳ್ಳ ಒಟ್ಟು 92.4447 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನದಲ್ಲಿ ನಿರ್ಮಿಸಿರುವ ನೆಲ ಮಹಡಿ 39.01928 ಚ.ಮೀಟರ್, ನೆಲ ಮಹಡಿ 38.09023 ಚ.ಮೀಟರ್ ಹಾಗೂ ಮೊದಲ ಮಹಡಿ 39.01926 ಚ.ಮೀಟರ್ ಉಳ್ಳ ನೆಲ ಮೊಸಾಯಿಕ್, ಹೊನ್ನೆ ಮರಗಳನ್ನು ಬಳಸಿರುವ ಮೇಲ್ಛಾವಣಿ ಆರ್.ಸಿ.ಸಿ. ಯಿಂದ ಕೂಡಿರುವ ವಾಸದ ಮನೆ ಇದರ ಚಕ್ಕುಬಂದಿ–ಪೂರ್ವಕ್ಕೆ–ಶ್ರೀ.ಸಿದ್ದೇಗೌಡ ರವರ ಮನೆ, ಪಶ್ಚಿಮಕ್ಕೆ– ಶ್ರೀ.ಲಕ್ಷ್ಮಿನರಸಿಂಹ ರವರ ಮನೆ. ಉತ್ತರಕ್ಕೆ ಆಗಸರ ಬೀದಿ ಹಾಗೂ ದಕ್ಷಿಣಕ್ಕೆ– ಕಾಲೇಜು ರಸ್ತೆ. ಈ ಕ್ರಯಪತ್ರಕ್ಕೆ ಒಳಪಟ್ಟಂತಃ ಸಂಪೂರ್ಣ ಸ್ವತ್ತಾಗಿರುತ್ತದೆ.

ಸಹಿ/– ಕೆ.ಜೆ.ಸತೀಶ. ಎಂ.ಎ..ಎಲ್‌ಎಲ್‌ಬಿ.,
ವಕೀಲರು ಹಾಗೂ ನೋಟರಿ
#2344/1, New No CH-39, 1st Floor No.3
1st main, pampapathi Road, Opp Chamarajapuram
Rly Station, K.G Koppal, Chamaraja mohalla, Mysore-09
ಮೊ:9448594446. Email:kjsathisha222@gmail.com

ನಕ್ಕರೆ ಅದೇ ಸ್ವರ್ಗ

ಭಿಕ್ಷುಕ : 10 ರೂಪಾಯಿ ಇದ್ರೆ ಕೊಡಿ ಸಾರ್. ಗೆಳತಿಗೆ ಒಂದು ಫೋನ್ ಮಾಡಬೇಕು.
ಮಹಿಳೆ : ನೋಡಿ, ಭಿಕ್ಷುಕ ಕೂಡ ಅವನ ಗೆಳತಿನ ಎಷ್ಟು ಪ್ರೀತಿ ಮಾಡ್ತಾನೆ.
ಭಿಕ್ಷುಕ : ಇಲ್ಲಾ ಅಮ್ಮಾವ್ರೆ ಅವಳನ್ನ ಪ್ರೀತಿಸಿದ ಮೇಲೆ ನಾನು ಭಿಕ್ಷುಕನಾಗಿದ್ದು.

ಮೈಸೂರು ಮಿತ್ರ

ಭಾನುವಾರ, ಏಪ್ರಿಲ್ 12, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸಮಾಧಾನಕ್ಕೆ ನಮಗಿಂತ ಕೆಳಗಿನವರನ್ನು ನೋಡಬೇಕು.
ಸಾಧನೆಗೆ ನಮಗಿಂತ ದೊಡ್ಡವರನ್ನು ನೋಡಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ರಾವಣನ ಹೊಟ್ಟೆಗೆ ಆರುಕಾಸಿನ ಮಜ್ಜಿಗೆ

ನಿಮ್ಮ ಪತ್ರಗಳು

ಮರೆಯಲಾಗದ ಮುತ್ತುರಾಜ

ಮಾನ್ಯರೇ,



ದಿನಾಂಕ 12–4–2026ಕ್ಕೆ ಗಾನ ಗಂಧರ್ವ, ಕರ್ನಾಟಕ ರತ್ನ, ಪದ್ಮಭೂಷಣ, ಡಾ. ರಾಜಕುಮಾರ್ ನಿಧನರಾಗಿ 20 ವರ್ಷಗಳು ಕಳೆಯುತ್ತಿವೆ. ದಿನಾಂಕ 12–4–2006 ಬುಧವಾರ ಮಧ್ಯಾಹ್ನ 2 ಗಂಟೆ 5 ನಿಮಿಷದಲ್ಲಿ ಡಾ. ರಾಜಕುಮಾರ್ ಹೃದಯಾಘಾತದಿಂದ ಬೆಂಗಳೂರಿನಲ್ಲಿ ನಿಧನರಾದರು. 1954 ರಲ್ಲಿ ಎಚ್‌ಎಲ್‌ಎನ್ ಸಿಂಹ ಅವರಿಂದ ಮುತ್ತುರಾಜ್ ರಾಜಕುಮಾರ್ ಆಗಿ ನಾಮಂಕಿತರಾದರು. 7– 5 –1954 ರಂದು ಬಿಡುಗಡೆಯಾದ ಬೇಡರ ಕಣ್ಣಪ್ಪ ಸಿನಿಮಾದಿಂದ 10– 02–2000ನೇ ಇಸವಿಯಲ್ಲಿ ಬಿಡುಗಡೆಯಾದ ಶಬ್ದವೇದಿ ತನಕ 207 ಸಿನಿಮಾಗಳಲ್ಲಿ ನಟಿಸಿದ್ದಾರೆ. ಇವುಗಳಲ್ಲಿ 45 ಪೌರಾಣಿಕ ಚಿತ್ರಗಳು, 15 ಐತಿಹಾಸಿಕ ಚಿತ್ರಗಳು, 4 ಬಾಂಡ್ ಚಿತ್ರಗಳು, 143 ಸಾಮಾಜಿಕ ಚಿತ್ರಗಳು.

ಬೇಡರ ಕಣ್ಣಪ್ಪ,ಭಕ್ತ ಕನಕದಾಸ, ಸತ್ಯಹರಿಶ್ಚಂದ್ರ, ಮಂತ್ರಾಲಯ ಮಹಾತ್ಮೆ, ಬಂಗಾರದ ಹೂವು, ಶ್ರೀ ಕೃಷ್ಣದೇವರಾಯ, ಕಸ್ತೂರಿ ನಿವಾಸ, ಕುಲ ಗೌರವ, ಸಾಕ್ಷಾತ್ಕಾರ, ಬಂಗಾರದ ಮನುಷ್ಯ, ಗಂಧದಗುಡಿ, ಬಂಗಾರದ ಪಂಜರ, ಸಂಪತ್ತಿಗೆ ಸವಾಲ್, ಭಕ್ತ ಕುಂಬಾರ,ದಾರಿ ತಪ್ಪಿದ ಮಗ, ಮಯೂರ, ನಾ ನಿನ್ನ ಮರೆಯಲಾರೆ, ಬಬ್ರುವಾಹನ, ಸನಾದಿ ಅಪ್ಪಣ್ಣ, ನಾನೊಬ್ಬ ಕಳ್ಳ, ಹೊಸ ಬೆಳಕು, ಹಾಲು ಜೇನು, ಕವಿರತ್ನ ಕಾಳಿದಾಸ, ಕಾಮನಬಿಲ್ಲು, ಭಕ್ತ ಪ್ರಹ್ಲಾದ, ಧ್ರುವತಾರೆ, ಅನುರಾಗ ಅರಳಿತು, ಜೀವನ ಚೈತ್ರ, ಒಡಹುಟ್ಟಿದವರು, ಇನ್ನು ಹಲವಾರು ಚಿತ್ರಗಳಲ್ಲಿ ಡಾ. ರಾಜಕುಮಾರ್ ಅವರು ಮನೋಜ್ಞವಾಗಿ ಅಭಿನಯಿಸಿದ್ದಾರೆ.

9 ಬಾರಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದಾರೆ. 10 ಬಾರಿ ಫಿಲಂ ಫೇರ್ ಪ್ರಶಸ್ತಿ ಪಡೆದಿದ್ದಾರೆ. ಅವರು ನಮ್ಮಿಂದ ದೂರವಾಗಿ 20 ವರ್ಷ ಕಳೆದರೂ ಅವರ ಅಭಿನಯದ ಶ್ರೇಷ್ಠ ಚಲನಚಿತ್ರಗಳ ಮೂಲಕ ಕನ್ನಡ ಚಿತ್ರರಂಗವಲ್ಲ ಭಾರತೀಯ ಚಿತ್ರರಂಗ ಇರುವವರೆಗೂ ಅಜರಾಮರರಾಗಿರುತ್ತಾರೆ. ಚಾಮರಾಜನಗರದ ವಿಶ್ವವಿದ್ಯಾನಿಲಯಕ್ಕೆ 'ಡಾಕ್ಟರ್ ರಾಜಕುಮಾರ್ ವಿಶ್ವವಿದ್ಯಾನಿಲಯ' ಎಂದು ಕರ್ನಾಟಕ ಸರ್ಕಾರ ಘೋಷಿಸಲಿ. ಭಾರತ ಸರ್ಕಾರ ಮರಣೋತ್ತರವಾಗಿ ಡಾಕ್ಟರ್ ರಾಜಕುಮಾರ್ ಅವರಿಗೆ 'ಭಾರತ ರತ್ನ' ನೀಡಲಿ ಎಂದು ಕೋಟ್ಯಾಂತರ ಅಭಿಮಾನಿ ದೇವರುಗಳ ಮನವಿ.

–ಅಹಲ್ಯ. ಸಿ ನಾ. ಚಂದ್ರ, ಜನತಾನಗರ, ಮೈಸೂರು.

ಆಟೋ ಗ್ಯಾಸ್ ಅಭಾವ ಕೃತಕವೋ ಅಥವಾ ನೈಜವೋ?

ಮಾನ್ಯರೆ,

ಕೊಲ್ಲಿ ಯುದ್ಧದ ನೆಪದಲ್ಲಿ ಬಂಡವಾಳಶಾಹಿಗಳು ಹಾಗೂ ಮಾಫಿಯಾಗಳು 89.52ರೂ ಇದ್ದ ಗ್ಯಾಸ್ ಅನ್ನು 170ಕ್ಕೆ ಮಾರುತ್ತಾ ಹಗಲು ದರೋಡೆ ಮಾಡುತ್ತಿದ್ದರೂ ಸರ್ಕಾರ ಮೂಕಪ್ರೇಕ್ಷಕವಾಗಿದೆ. ಕಳೆದ 40 ದಿನಗಳಿಂದ ಆಟೋ ಚಾಲಕರು ಗ್ಯಾಸ್ ಬಂಕ್‌ಗಳ ಮುಂದೆ ರಾತ್ರಿಯಿಡೀ ಕಾಯುತ್ತಿದ್ದು ಅವರ ಕುಟುಂಬಗಳು ಉಪವಾಸ ಬೀಳುತ್ತಿವೆ. ಕೇವಲ 500 ಮಿತಿಯ ಗ್ಯಾಸ್ ನೀಡುತ್ತಿರುವುದು ದುರಂತ. ಇದು ಕೇವಲ ಇಂಧನ ಕೊರತೆಯಲ್ಲ. ಆಡಳಿತ ಯಂತ್ರದ ಸಂಪೂರ್ಣ ವೈಫಲ್ಯ ಹಾಗೂ ದಿವ್ಯ ನಿರ್ಲಕ್ಷ್ಯದ ಸಂಕೇತ. ಮಾರುಕಟ್ಟೆಯಲ್ಲಿನ ಈ ಅರಾಜಕತೆಯನ್ನು ತಡೆಗಟ್ಟಲು ಸರ್ಕಾರ ತಕ್ಷಣವೇ ಗ್ಯಾಸ್ ದರವನ್ನು ನಿಯಂತ್ರಿಸಿ ಕಾಳಸಂತೆಕೋರರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಬಡವರ ಹೊಟ್ಟೆ ಮೇಲೆ ಹೊಡೆಯುವ ಈ ದಬ್ಬಾಳಿಕೆ ನಿಲ್ಲದಿದ್ದರೆ, ಮುಂಬರುವ ದಿನಗಳಲ್ಲಿ ಬೀದಿಗಿಳಿದು ಉಗ್ರ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ. ಸರ್ಕಾರ ಇನ್ನಾದರೂ ಎಚ್ಚೆತ್ತುಕೊಳ್ಳಲಿ. ಸಾರ್ವಜನಿಕ ಸಾರಿಗೆಯ ಜೀವನಾಡಿಯಾಗಿರುವ ಆಟೋಗಳನ್ನು ನಂಬಿರುವ ಪ್ರಯಾಣಿಕರಿಗೂ ಇದರಿಂದ ತೀವ್ರ ತೊಂದರೆಯಾಗುತ್ತಿದ್ದು, ಪರ್ಯಾಯ ಇಂಧನ ಪೂರೈಕೆ ವ್ಯವಸ್ಥೆ ಕಲ್ಪಿಸಲು ಮೀನಮೇಷ ಎಣಿಸುತ್ತಿರುವ ಸರ್ಕಾರದ ನಡೆಯು ಅಕ್ಷಮ್ಯ ಅಪರಾಧವಾಗಿದೆ.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.

ಸರ್ಕಾರಿ ಶಾಲೆ ಉಳಿಸಿಕೊಳ್ಳುವತ್ತ ಗಮನ ಅಗತ್ಯ

ಮಾನ್ಯರೆ,

ರಾಜ್ಯದಲ್ಲಿ, ಸುಮಾರು ಮೂರು ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲಾ ಕಟ್ಟಡಗಳು ಶಿಥಿಲಗೊಂಡು, ಈ ಶಾಲೆಗಳು ಕುಸಿಯುವ ಹಂತ ತಲುಪಿವೆ ಎಂದು ಹಾಗೂ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸರ್ಕಾರಿ ಶಾಲೆಗಳ ದಾಖಲಾತಿ ಪ್ರಮಾಣ ಶೇಕಡ. 15 ರಷ್ಟು ಕಡಿಮೆಯಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಇದು ನಿಜಕ್ಕೂ ಆತಂಕಕಾರಿ ಬೆಳವಣಿಗೆ. ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸದೇ ಇರಲು ಹತ್ತಾರು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾಗಿ ಶಿಕ್ಷಕರ ಕೊರತೆ, ಸರ್ಕಾರಿ ಶಾಲೆಗಳು ಸುಸಜ್ಜಿತ ಸ್ಥಿತಿಯಲ್ಲಿ ಇಲ್ಲದೇ ಇರುವುದು, ಹೆಣ್ಣು ಮಕ್ಕಳಿಗೆ ಮೂಲಭೂತ ಸೌಕರ್ಯ ಇಲ್ಲದೇ ಇರುವುದು, ಪೋಷಕರಿಗೆ ಇಂಗ್ಲಿಷ್ ಮೇಲಿನ ವ್ಯಾಮೋಹ, ಶಿಕ್ಷಕರು ಮಕ್ಕಳ ಬಗ್ಗೆ ಹೆಚ್ಚಿನ ಜಾಗ್ರತೆ ವಹಿಸದೇ ಇರುವುದು ಹಾಗೂ ಕೆಲವೊಂದು ಸರ್ಕಾರಿ ಶಾಲೆಯಲ್ಲಿ ನುರಿತ ಶಿಕ್ಷಕರ ಕೊರತೆ. ಸರ್ಕಾರ ಶಾಲೆಗಳು ಆರಂಭವಾಗುವ ಮೊದಲೇ ಶಿಕ್ಷಕರ ನೇಮಕಾತಿ ಮತ್ತು ಶಿಥಿಲಗೊಂಡ ಸರ್ಕಾರಿ ಶಾಲೆಗಳಿಗೆ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡುವುದು ಹಾಗೂ ಕನಿಷ್ಠ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದರೇ ಮಾತ್ರ ಮುಂದಿನ ದಿನಗಳಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳಲು ಸಾಧ್ಯ. ಮಾನ್ಯ ಶಿಕ್ಷಣ ಸಚಿವರು ಈ ಬಗ್ಗೆ ಗಮನ ಹರಿಸಬೇಕು. –ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ವಿಜಯನಗರ 4ನೇ ಹಂತದಲ್ಲಿ ಹೆಚ್ಚುತ್ತಿರುವ ಮನೆಗಳ್ಳತನ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಮನೆಗಳ್ಳತನಗಳು ಇತ್ತೀಚೆಗೆ ಹೆಚ್ಚಾಗಿದ್ದು, 11 ಸಾವಿರ ಬೆಲ್ಟ್‌ನ ಮನೆ ಸಂಖ್ಯೆ 11262 ರಲ್ಲಿ ದಿನಾಂಕ 29.3.2026 ರಂದು ರಾತ್ರಿ 1 ರಿಂದ 3 ಗಂಟೆ ಸಮಯದಲ್ಲಿ ಕಳ್ಳರು ಮನೆ ಬಾಗಿಲು ಒಡೆದು ಮನೆಯಲ್ಲಿದ್ದ ಹಣ, ಚಿನ್ನ, ಬೆಳ್ಳಿ ದೋಚಿಕೊಂಡು ಹೋಗಿದ್ದಾರೆ. ಅದೇ ರೀತಿ ವಿಜಯನಗರ 4ನೇ ಹಂತದಲ್ಲಿಯೇ ಹಲವು ಕಡೆ ಕಳ್ಳತನವಾಗಿರುವುದು ತಿಳಿದು ಬಂದಿದೆ. ಈ ಮನೆಗಳ್ಳತನ ಮಾಡುವವರು ಮನೆಯಲ್ಲಿ ಯಾರೂ ಇಲ್ಲವೆಂದು ಖಚಿತಪಡಿಸಿಕೊಂಡು ವ್ಯವಸ್ಥಿತ ರೀತಿಯಲ್ಲಿ ಕಳ್ಳತನ ಮಾಡುತ್ತಿರುವುದು ಕಳ್ಳರ ಕೈಚಳಕದಿಂದ ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ವಿಜಯನಗರ 4ನೇ ಹಂತಕ್ಕೆ ರಾತ್ರಿ 1 ರಿಂದ 3 ರವರೆಗೆ ಗರುಡ ವಾಹನದ ಗಸ್ತು ವ್ಯವಸ್ಥೆ ಮಾಡಬೇಕಾಗಿ ಈ ಮೂಲಕ ಮನವಿ.

– ಬಿ.ಜಿ. ರಂಗೇಗೌಡ, ವಿಜಯನಗರ 4ನೇ ಹಂತ, ಮೈಸೂರು.

ನಾದಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ರಾಮ ರಾಜ್ಯ.....

ಅಯೋಧ್ಯೆಗೆ ಹಿಂದಿರುಗುವ ಹಾದಿಯಲ್ಲಿ ಜನಕ ಮಹಾರಾಜನಲ್ಲಿಗೆ ಹೋಗಿ ವಿಷ್ಣು ಮಾತ್ರ ಇದನ್ನು ಎತ್ತಿ, ಮುರಿಯಬಲ್ಲ. ಮತ್ಯಾರಿಂದಲೂ ಅದು ಸಾಧ್ಯವಿಲ್ಲ. ವಿಷ್ಣುವೇ ನಿನ್ನ ಮಗಳನ್ನು ವರಿಸುತ್ತಾನೆ ಎಂದು ಹೇಳಿ ಸಾಕ್ಷಾತ್ ಶಿವನೇ ಜನಕನಿಗೆ ನೀಡಿದ್ದ ಧನುಸ್ಸನ್ನು ಮುರಿದು, ರಾಮನು ಸೀತೆಯನ್ನು ವರಿಸುತ್ತಾನೆ. ಹಿಂದಿರುಗಿದ ರಾಮನಿಗೆ ಪಟ್ಟ ಕಟ್ಟುವ ಕಾರ್ಯಕ್ಕಾಗಿ ಸನ್ನದ್ಧನಾಗುತ್ತಾನೆ ದಶರಥ. ಮಂಥರೆಯಿಂದ ಪ್ರಚೋದಿತಳಾದ ಕೈಕೇಯಿ ರಾಮಚಂದ್ರನನ್ನು ಹದಿನಾಕು ವರುಷಗಳ ಕಾಲ ಅರಣ್ಯಕ್ಕೆ ಕಳುಹಿಸುವುದರಲ್ಲಿ ಯಶಸ್ವಿಯಾಗುತ್ತಾಳೆ. ಪಿತೃವಾಕ್ಯ ಪರಿಪಾಲನೆಯನ್ನು ಎತ್ತಿಹಿಡಿದ ರಾಮನು ಶಾಂತ ಮನಸ್ಸಿನಿಂದ ಸೀತೆ ಮತ್ತು ಲಕ್ಷ್ಮಣರೊಡನೆ ಕಾಡಿಗೆ ತೆರಳುತ್ತಾನೆ.

ವಿಷಯ ತಿಳಿದು ಓಡೋಡಿ ಬಂದ ಭರತನು ಅಣ್ಣನನ್ನು ಹಿಂದಿರುಗಿ, ನ್ಯಾಯವಾಗಿ ಅವನದಾಗಬೇಕಾದ ಸಿಂಹಾಸನದ ಮೇಲೆ ಕುಳಿತು ರಾಜ್ಯಭಾರ ಮಾಡಲು ಬೇಡಿಕೊಳ್ಳುತ್ತಾನೆ. ತಂದೆಯ ಮಾತನ್ನು ಪರಿಪಾಲಿಸುತ್ತೇನೆ ಎಂದು ಮಾತು ಕೊಟ್ಟಿದ್ದ ರಾಮನು ಇದಕ್ಕೆ ಒಪ್ಪುವನೇ ಎಂದಿಗೂ ಇಲ್ಲ. ಕೊನೆಗೆ ರಾಮನ ಪಾದುಕೆಗಳನ್ನು ಸಿಂಹಾಸನದ ಮೇಲೆ ಇಟ್ಟು, ಅವನ ಪ್ರತಿನಿಧಿಯಾಗಿ ಹದಿನಾಕು ವರುಷ ರಾಜ್ಯಭಾರ ಮಾಡಲು ಭರತ ಹೊರಡಬೇಕಾಗುತ್ತದೆ. ಮುಂದೆ ಗೋದಾವರೀ ತೀರದ ದಟ್ಟ ಕಾಡಿನ ಪಂಚವಟಿಯಲ್ಲಿ ಲಕ್ಷ್ಮಣ ನಿರ್ಮಿಸಿದ ಕುಟೀರದಲ್ಲಿ ಅವರು ಕ್ಷೇಮವಾಗಿರಬಹುದೆಂದು ಭಾವಿಸುತ್ತಾರೆ. ಆದರೆ ರಾಕ್ಷಸರಿಂದ ಯಾರೂ ಕ್ಷೇಮದಿಂದಿರಲು ಸಾಧ್ಯವಿಲ್ಲ. ಅವರನ್ನು ಅಲ್ಲಿ ಮೊದಲು ನೋಡಿದವಳು ರಾವಣನ ತಂಗಿಯಾದ ಶೂರ್ಪನಖಿ. ರಾಮನನ್ನು ನೋಡಿ ಮರುಳಾಗಿ, ಸುಂದರ ಯುವತಿಯಂತೆ ವೇಷ ಧರಿಸಿ ಬಂದು ನನ್ನನ್ನು ವರಿಸು ಎಂದು ಕೇಳಿಕೊಂಡ ಅವಳನ್ನು ಲಕ್ಷ್ಮಣನು ತನ್ನ ಬಾಣದಿಂದ ಮೂಗು, ಕಿವಿಗಳನ್ನು ಕತ್ತರಿಸಿ ಓಡಿಸುತ್ತಾನೆ.

ನೀವು ಇದಕ್ಕೆ ತಕ್ಕ ಶಾಸ್ತಿ ಅನುಭವಿಸುತ್ತೀರಿ ಎಂದು ಕೂಗಿದ ಅವಳು ತನ್ನ ಅಣ್ಣ ರಾವಣನ ಬಳಿ ಹೋಗಿ ತನಗಾದ ಅಪಮಾನವನ್ನು ಹೇಳಿದಳು. ರಾಮ, ಲಕ್ಷ್ಮಣರನ್ನು ಶಿಕ್ಷಿಸಲು ಅವಳ ಮತ್ತಿಬ್ಬರು ಅಣ್ಣಂದಿರಾದ ಖರ, ದೂಷಣರನ್ನು ರಾವಣ ಕಳುಹಿಸುತ್ತಾನೆ. ಇದಕ್ಕೆ ತಯಾರಾಗಿದ್ದ ರಾಮ, ಲಕ್ಷ್ಮಣರು ತಮ್ಮ ದಿವ್ಯಾಸ್ತ್ರಗಳಿಂದ ಅವರನ್ನು ಸೆದೆ ಬಡೆಯುತ್ತಾರೆ. ಇದನ್ನು ನೋಡುತ್ತಿದ್ದ ಶೂರ್ಪನಖಿಯು ರಾವಣನ ಬಳಿಹೋಗಿ ನಡೆದದ್ದೆಲ್ಲವನ್ನೂ ಹೇಳಿ, ತನಗಾದ ಅಪಮಾನಕ್ಕೆ ಸೇಡು ತೀರಿಸಿಕೊಳ್ಳಲು ಹೇಳುತ್ತಾಳೆ. ಅದಕ್ಕೆ ಬಹುಮಾನವಾಗಿ ಸೀತೆಯನ್ನು ಪಡೆ ಎಂದು ಹೇಳುತ್ತಾಳೆ. ಆ ಮನುಜರು ಸಾಯುವುದು ಖಾತ್ರಿ. ಸೀತೆಯು ನನ್ನವಳಾಗುತ್ತಾಳೆ ಎಂದು ಸಿಟ್ಟಿನಿಂದ ಆರ್ಭಟಿಸಿದ ರಾವಣ ತನ್ನ ಮಾವ ಮಾರೀಚನನ್ನು ಬರಹೇಳಿದ. ಹಿಂದೆ ರಾಮನು ಸಮುದ್ರದಲ್ಲಿ ಬಿಸಾಕಿದ್ದ ಮಾರೀಚನೇ ಇವನು. ರಾಮನ ದಿವ್ಯಾಸ್ತ್ರಗಳ ಬಗ್ಗೆ ಅನುಭವವಿದ್ದ ಇವನು ರಾವಣನಿಗೆ ಬುದ್ಧಿ ಹೇಳುತ್ತಾನೆ. ಅದಕ್ಕೆ ಕಿವಿಗೊಡದ ರಾವಣ ಅವನನ್ನು ಮಾಯಾಜಿಂಕೆಯ ರೂಪವನ್ನು ಧರಿಸಿ, ರಾಮನನ್ನು ದೂರಕ್ಕೆ ಕರೆದೊಯ್ಯಲು ಹೇಳುತ್ತಾನೆ.

ಆಕರ್ಷಕ ಬಣ್ಣದ ಜಿಂಕೆಯನ್ನು ಅನುಸರಿಸಿ, ರಾಮ ದೂರ ಹೋಗುತ್ತಾನೆ. ದೂರ ಹೋದಮೇಲೆ, ಅವನ ಧ್ವನಿಯನ್ನು ಅನುಕರಿಸಿ ಮಾರೀಚ ಹಾ ಲಕ್ಷ್ಮಣಾ, ಹಾ ಸೀತಾ ಎಂದು ಕೂಗುತ್ತಾನೆ. ಅದನ್ನು ಕೇಳಿದ ಸೀತೆ ಗಾಬರಿಗೊಂಡು ರಾಮನ ಸಹಾಯಕ್ಕೆ ಹೋಗುವಂತೆ ಲಕ್ಷ್ಮಣನನ್ನು ಒತ್ತಾಯಿಸುತ್ತಾಳೆ. ಹೋಗುವ ಮೊದಲು, ಕುಟೀರದ ಹೊರಗೆ ಒಂದು ರೇಖೆಯನ್ನು ಎಳೆದು, ಅದನ್ನು ದಾಟಬಾರದೆಂದು ಹೇಳಿದ ಲಕ್ಷ್ಮಣನೂ ಹೊರಡುತ್ತಾನೆ. ಇದಕ್ಕಾಗಿಯೇ ಕಾದಿದ್ದ ರಾವಣ ಸನ್ಯಾಸಿಯ ವೇಷದಲ್ಲಿ ಬಂದು ಸೀತೆಯಲ್ಲಿ ಭಿಕ್ಷೆ ಯಾಚಿಸುತ್ತಾನೆ. ಹಣ್ಣುಗಳನ್ನು ಹಿಡಿದು ಬಂದ ಸೀತೆಯಿಂದ ಸ್ವೀಕರಿಸಲು ರಾವಣ ಕಾಲನ್ನು ಎತ್ತುತ್ತಿದ್ದಂತೆಯೇ ಲಕ್ಷ್ಮಣ ರೇಖೆಯಿಂದ ಬೆಂಕಿಯ ಜ್ವಾಲೆ ಅವನ ಕಾಲಿಗೆ ತಾಕುತ್ತದೆ.



> “ರಾವಣನ ಕುದುರೆ, ಆನೆಗಳ ಸೈನ್ಯಕ್ಕೆ ಸಮವಾಗದು ವಾನರರ ಸೈನ್ಯ. ಜೊತೆಗೆ ರಾತ್ರಿಯಲ್ಲಿ ರಾಕ್ಷಸರಿಗೆ ಬಲ ಹೆಚ್ಚು. ರಾವಣನ ಮಗ ಇಂದ್ರಜಿತನ ಸರ್ಪಾಸ್ತ್ರ, ಬ್ರಹ್ಮಾಸ್ತ್ರ, ಕುಂಭಕರ್ಣ, ಎಲ್ಲದರಿಂದಲೂ ಪಾರಾಗುತ್ತಾರೆ ವಾನರರು. ಕೊನೆಗೆ ರಾಮನ ಬಾಣಕ್ಕೆ ರಾವಣ ಕೆಳಗುರುಳುತ್ತಾನೆ. ದುಷ್ಟರಿಂದ ಭೂಮಿಯು ರಕ್ಷಿಸಲ್ಪಡುತ್ತದೆ. ವಿಭೀಷಣನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದ ರಾಮ, ಸೀತೆ, ಲಕ್ಷ್ಮಣರೊಡನೆ ಅಯೋಧ್ಯೆಗೆ ಹಿಂದಿರುಗುತ್ತಾನೆ. ಅವನ ಆಡಳಿತವನ್ನು ಭಾರತೀಯರು ಇಂದಿಗೂ 'ರಾಮರಾಜ್ಯ' ಎಂದು ಸ್ಮರಿಸುತ್ತಾರೆ.

ಕೂಡಲೇ ಹಿಂದೆ ಸರಿದ ಅವನು ಸೀತೆಯನ್ನೇ ಹೊರಗೆ ಬಂದು ಭಿಕ್ಷೆ ನೀಡಲು ಕೇಳಿಕೊಳ್ಳುತ್ತಾನೆ. ಹಿಂಜರಿಯುತ್ತಾ ಬಂದ ಸೀತೆಯು ಗೆರೆಯನ್ನು ದಾಟಿದೊಡನೆಯೇ ತನ್ನ ನಿಜ ಸ್ವರೂಪವನ್ನು ತೋರಿಸಿ, ಅವಳ ಕೈಹಿಡಿದು ಎಳೆಯುತ್ತಾ ಪುಷ್ಪಕ ವಿಮಾನವನ್ನು ಹತ್ತುತ್ತಾನೆ. ಸೀತೆಯ ಆಕ್ರಂದನವನ್ನು ಕೇಳಿ, ಎತ್ತರದ ಆಕಾಶದಲ್ಲಿ ಹಾರುತ್ತಿದ್ದ ಜಟಾಯು ಕೆಳನುಗ್ಗಿ, ರಾವಣನನ್ನು ತಡೆಯಲು ಯತ್ನಿಸುತ್ತದೆ. ರಾವಣನು ತನ್ನ ಕತ್ತಿಯಿಂದ ಅದರ ರೆಕ್ಕೆಯನ್ನು ಕತ್ತರಿಸಿ ಆ ಧೈರ್ಯವಂತ ಪಕ್ಷಿಯನ್ನು ಉರುಳಿಸುತ್ತಾನೆ. ಅದನ್ನು ಕಂಡ ಸೀತೆಯ ಕಣ್ಣೀರು ಹರಿಯುತ್ತದೆ. ಅವಳು ಕೆಳಗೆ ಬಗ್ಗಿ ನೋಡಿದಾಗ, ಕೆಲ ವಾನರರು ಕಾಣಿಸುತ್ತಾರೆ. ಕೂಡಲೇ ತಾನು ಧರಿಸಿದ್ದ ಆಭರಣಗಳನ್ನು ಬಿಚ್ಚಿ, ಗಂಟು ಕಟ್ಟಿ, ಅದರೆಡೆಗೆ ಎಸೆಯುತ್ತಾಳೆ. ರಾಮ, ರಾಮ, ಸಹಾಯ ಸಹಾಯ ಎಂದು ಕೂಗುತ್ತಿದ್ದ ಅವಳನ್ನೂ, ಮಿಂಚಿನಂತೆ ವೇಗವಾಗಿ ಸಾಗಿದ ಪುಷ್ಪಕ ವಿಮಾನವನ್ನೂ ಸುಗ್ರೀವ, ಹನುಮಂತರು ನೋಡುತ್ತಾರೆ.

ಕುಟೀರಕ್ಕೆ ಹಿಂದಿರುಗಿದ ರಾಮ, ಲಕ್ಷ್ಮಣರು ಸೀತೆ ಇಲ್ಲದುದನ್ನು ಕಂಡು, ಅವಳನ್ನು ಅರಸುತ್ತಾ ಸಾಗುತ್ತಾರೆ. ಭೇಟಿಯಾದ ಜಟಾಯು, ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದ ವಿಷಯವನ್ನು ಅವರಿಗೆ ಅರುಹಿ, ಜೀವ ಬಿಡುತ್ತದೆ. ಅದಕ್ಕೆ ಯಥೋಚಿತವಾಗಿ ಅಪರಕರ್ಮಗಳನ್ನು ಮಾಡಿ, ಅವರು ದಕ್ಷಿಣ ದಿಕ್ಕಿಗೆ ಹೊರಡುತ್ತಾರೆ. ಅವರಿಗೆ ಹನುಮಂತ ಸುಗ್ರೀವರ ಭೇಟಿ ಆಗುತ್ತದೆ. ತಾವು ಕಂಡ ಪುಷ್ಪಕ ವಿಮಾನವನ್ನೂ, ಸೀತೆ ಗಂಟುಕಟ್ಟಿ ಎಸೆದ ಆಭರಣಗಳನ್ನೂ ತೋರುತ್ತಾರೆ. ತನ್ನ ಅಣ್ಣನಿಂದ ರಾಜ್ಯ ಕಳೆದುಕೊಂಡ ಸುಗ್ರೀವನಿಗೆ ರಾಮನು ಸಹಾಯ ಮಾಡಲು ಒಪ್ಪಿಕೊಳ್ಳುತ್ತಾನೆ. ಅವನೂ ಸೀತೆಯನ್ನು ಹುಡುಕಲು ನೆರವಾಗುವುದಾಗಿ ನುಡಿಯುತ್ತಾನೆ. ವಾಲಿ ವಧೆಯ ನಂತರ ಸೀತೆಯನ್ನು ಹುಡುಕಲು ಎಲ್ಲ ದಿಕ್ಕುಗಳಿಗೂ ವಾನರರನ್ನು ಕಳುಹಲಾಗುತ್ತದೆ. ಸಮುದ್ರ ದಾಟಿ ಹೋಗಿ ಹುಡುಕಲು ಹನುಮಂತನನ್ನು ನಿಯೋಜಿಸಲಾಗುತ್ತದೆ. ರಾಮನಿಗೆ ನಮಸ್ಕರಿಸಿ, ಅವನು ನೀಡಿದ ಮುದ್ರೆಯುಂಗುರವನ್ನು ತೆಗೆದುಕೊಂಡು ಹನುಮನು ನಭಕ್ಕೆ ಹಾರುತ್ತಾನೆ. ತನ್ನ ದಿವ್ಯಶಕ್ತಿಯಿಂದ ಆಕಾರವನ್ನು ಕುಗ್ಗಿಸಿಕೊಂಡು ಸುಂದರ ಲಂಕಾ ದ್ವೀಪದಲ್ಲಿ ಸೀತೆಯನ್ನು ಹುಡುಕುವ ಕಾರ್ಯದಲ್ಲಿ ತೊಡಗಿದ ಅವನಿಗೆ ದೈತ್ಯ ರಾವಣನು ಬಂದು, ಮರದ ಕೆಳಗೆ ಕುಳಿತಿದ್ದ ಸ್ತ್ರೀಗೆ ತನ್ನನ್ನು ಮದುವೆಯಾಗಲು ಒತ್ತಾಯಿಸುತ್ತಿದ್ದುದನ್ನೂ, ಆಕೆ ಸಿಟ್ಟಿನಿಂದ ಎಂದಿಗೂ ಅದು ಸಾಧ್ಯವಿಲ್ಲ, ಒಂದುದಿನ ನನ್ನ ಪತಿ ರಾಮನು ಬಂದು ನಿನ್ನನ್ನು ಸಂಹರಿಸುತ್ತಾನೆ ಎಂದು ಹೇಳುತ್ತಿದ್ದುದನ್ನು ನೋಡಿದ ಹನುಮನಿಗೆ ಈಕೆಯೇ ಸೀತೆ ಎಂಬುದು ಮನದಟ್ಟಾಗುತ್ತದೆ. ರಾವಣನು ಅಲ್ಲಿಂದ ತೆರಳಿದ ನಂತರ, ಮರದಿಂದ ಕೆಳಗಿಳಿದು ಬಂದು ಸೀತೆಗೆ ನಮಸ್ಕರಿಸಿ, ತನ್ನನ್ನು ರಾಮನ ಬಂಟ ಎಂದು ಪರಿಚಯಿಸಿಕೊಳ್ಳುತ್ತಾನೆ, ರಾಮ ಕಳುಹಿದ ಉಂಗುರವನ್ನು ನೋಡಿದ ಮೇಲೆ ಅವನ ಮೇಲೆ ನಂಬಿಕೆ ಬಂದ ಸೀತೆಯು ಬೇಗನೆ ರಾಮನು ಬಂದು ತನ್ನನ್ನು ಬಿಡಿಸಿಕೊಂಡು ಹೋಗಲು ಹೇಳು ಎಂದು ಕೇಳಿಕೊಳ್ಳುತ್ತಾಳೆ.

ಈ ಒಳ್ಳೆಯ ಸುದ್ದಿಯನ್ನು ಕೇಳಿದ ರಾಮನು ವಾನರ ಸೈನ್ಯದೊಡನೆ ಯುದ್ಧಕ್ಕೆ ಸನ್ನದ್ಧನಾಗುತ್ತಾನೆ. ಸಮುದ್ರತೀರವನ್ನು ತಲುಪಿದಾಗ ರಾಮನು ಸಮುದ್ರ ರಾಜನಿಗೆ ತನ್ನ ವಾನರರು ಈಜಲಾರರು. ದಾರಿತೋರು ಎಂದು ಪ್ರಾರ್ಥಿಸಿಕೊಳ್ಳುತ್ತಾನೆ. ಸಮುದ್ರರಾಜನ ಸಲಹೆಯಂತೆ ಕಲ್ಲು ಬಂಡೆಗಳ ಮೇಲೆ ರಾಮನ ಹೆಸರನ್ನು ಬರೆದು, ಅವನ್ನು ಶರಧಿಯಲ್ಲಿ ಬಿಸಾಕಿದಾಗ ಅವು ಮುಳುಗದೆ, ತೇಲುತ್ತವೆ. ಅದರ ಮೇಲೆ ಸಾಗಿ ಸೈನ್ಯವು ಲಂಕೆಯನ್ನು ತಲುಪುತ್ತದೆ. ಈ ಸುದ್ದಿಯನ್ನು ಗುಪ್ತಚರರು ಹೇಳಿದಾಗ, ಆ ಹುಲು ಮಾನವರು ನನ್ನನ್ನು ಏನೂ ಮಾಡಲು ಸಾಧ್ಯವಿಲ್ಲ. ನಾನು ಅಮರ ಎಂದು ಹತ್ತು ತಲೆಗಳನ್ನು ಕೊಡವಿಬಿಡುತ್ತಾನೆ. ಅವನ ತಮ್ಮ ವಿಭೀಷಣನು ರಾಮನಿಗೆ ಶರಣಾದುದನ್ನು ತಿಳಿಸಿದಾಗ, ಅವನು ಮೊದಲಿನಿಂದಲೂ ಧರ್ಮಭೀರು. ನನಗೆ ಅವನ ಸಹಾಯ ಬೇಕಿಲ್ಲ ಎನ್ನುತ್ತಾನೆ. ರಾವಣನ ಕುದುರೆ, ಆನೆಗಳ ಸೈನ್ಯಕ್ಕೆ ಸಮವಾಗದು ವಾನರರ ಸೈನ್ಯ. ಜೊತೆಗೆ ರಾತ್ರಿಯಲ್ಲಿ ರಾಕ್ಷಸರಿಗೆ ಬಲ ಹೆಚ್ಚು. ರಾವಣನ ಮಗ ಇಂದ್ರಜಿತನ ಸರ್ಪಾಸ್ತ್ರ, ಬ್ರಹ್ಮಾಸ್ತ್ರ, ಕುಂಭಕರ್ಣ, ಎಲ್ಲದರಿಂದಲೂ ಪಾರಾಗುತ್ತಾರೆ ವಾನರರು. ಕೊನೆಗೆ ರಾಮನ ಬಾಣಕ್ಕೆ ರಾವಣ ಕೆಳಗುರುಳುತ್ತಾನೆ. ದುಷ್ಟರಿಂದ ಭೂಮಿಯು ರಕ್ಷಿಸಲ್ಪಡುತ್ತದೆ. ವಿಭೀಷಣನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದ ರಾಮ, ಸೀತೆ, ಲಕ್ಷ್ಮಣರೊಡನೆ ಅಯೋಧ್ಯೆಗೆ ಹಿಂದಿರುಗುತ್ತಾನೆ. ಅವನ ಆಡಳಿತವನ್ನು ಭಾರತೀಯರು ಇಂದಿಗೂ 'ರಾಮರಾಜ್ಯ' ಎಂದು ಸ್ಮರಿಸುತ್ತಾರೆ.

ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಸುಧಾರಣೆ

ಮೈಸೂರಲ್ಲಿ ಹೋಟೆಲ್ ಉದ್ಯಮ ನಿರಾಳ

- ಶೇ.50ರಷ್ಟು ಸಿಲಿಂಡರ್ ಸರಬರಾಜು
- ನಿಟ್ಟುಸಿರು ಬಿಟ್ಟ ಹೋಟೆಲ್ ನೌಕರರು
- ಆದರೆ ತಿಂಡಿ ತಿನಿಸು ಬೆಲೆ ದುಬಾರಿ
- ಗ್ರಾಹಕರಿಗೆ ಮತ್ತೊಂದು ದೊಡ್ಡ ಹೊರೆ

ಮೈಸೂರು, ಏ.11(ಬಿಎಲ್‌ಯು)– ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಎಲ್‌ಪಿಜಿ ಗ್ಯಾಸ್ ವ್ಯತ್ಯಯದಿಂದ ಬಾಗಿಲು ಹಾಕಿದ್ದ ಮೈಸೂರಿನ ಹೋಟೆಲ್, ಸ್ವೀಟ್ ಅಂಗಡಿ, ಬೇಕರಿಗಳು ಈಗ ತೆರೆದಿವೆ.

ಹೋಟೆಲ್ ಸೇರಿದಂತೆ ಇತರೆ ವ್ಯಾಪಾರ–ವಹಿವಾಟು ಪುನಾರಂಭಗೊಂಡಿದ್ದರಿಂದ ಅದನ್ನೆ ನಂಬಿ ಕೆಲಸ ಮಾಡುತ್ತಿದ್ದ ನೌಕರರು ನಿಟ್ಟುಸಿರು ಬಿಟ್ಟಿದ್ದಾರೆ. ಅಲ್ಲದೆ ಊಟ, ತಿಂಡಿ ಸೇರಿದಂತೆ ಇತರೆ ತಿಂಡಿ–ತಿನಿಸು ಸಿಗದೆ ಕಂಗಾಲಾಗಿದ್ದ ಜನರು ಕೂಡ ಸಂತಸಗೊಂಡಿದ್ದಾರೆ.

ಇರಾನ್ ಹಾಗೂ ಅಮೆರಿಕ, ಇಸ್ರೇಲ್ ನಡುವಿನ ಯುದ್ಧದಿಂದ ಹಾರ್ಮೋಜ್ ಜಲಸಂಧಿ ಸಂಪೂರ್ಣವಾಗಿ ಮುಚ್ಚಿ ಎಲ್‌ಪಿಜಿ ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿತ್ತು. ಇದರಿಂದ ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆ ಸಂಪೂರ್ಣವಾಗಿ ಸ್ಥಗಿತವಾಗಿತ್ತು.

ಮಧ್ಯಪ್ರಾಚ್ಯ ಯುದ್ಧ ಫೆಬ್ರವರಿ 28ರಂದು ಆರಂಭಗೊಂಡು, ಒಂದು ವಾರದಲ್ಲೇ ಎಲ್‌ಪಿಜಿ ಸಿಲಿಂಡರ್ ವ್ಯತ್ಯಯ ಉಂಟಾಗಿತ್ತು. ಇದರಿಂದ ಮೈಸೂರಿನ ನೂರಾರು ಹೋಟೆಲ್, ಸ್ವೀಟ್ ಅಂಗಡಿ, ಬೇಕರಿ ಮಾಲೀಕರು ವಹಿವಾಟು ಬಂದ್ ಮಾಡಿದ್ದರು.


ಆದರೆ, ಈಗ ಭಾರತ ಹಾಗೂ ಇರಾನ್ ನಡುವೆ ಏರ್ಪಟ್ಟ ಮಾತುಕತೆ ಫಲಪ್ರದವಾದ ಹಿನ್ನೆಲೆಯಲ್ಲಿ ಹಾರ್ಮೋಜ್ ಜಲಸಂಧಿಯಿಂದ ಶೇಕಡ 50ರಷ್ಟು ತೈಲ ಹಾಗೂ ಗ್ಯಾಸ್ ಹೊತ್ತ ಹಡಗುಗಳು ಭಾರತಕ್ಕೆ ಸಂಚಾರ ಆರಂಭಿಸಿವೆ. ಆದರೂ ಎಲ್‌ಪಿಜಿ ಗ್ಯಾಸ್‌ಗಳ ಪೂರೈಕೆ ಸಮರ್ಪಕವಾಗಿಲ್ಲ. ಗ್ಯಾಸ್ ವಿತರಣೆಯಲ್ಲಿ ಸರ್ಕಾರ ಹಲವು ನಿಯಮಗಳನ್ನು ರೂಪಿಸಿದೆ.

ಅಧಿಕೃತ ಗ್ಯಾಸ್ ಡೀಲರ್‌ಗಳ ಬಳಿಯೇ ಗ್ಯಾಸ್ ಸಿಲಿಂಡರ್ ಖರೀದಿಸಬೇಕು. ಇದಕ್ಕಾಗಿ ಹೋಟೆಲ್‌ನ ಲೈಸೆನ್ಸ್, ಜಿಎಸ್‌ಟಿ ಸಂಖ್ಯೆ ಸೇರಿದಂತೆ ಇತರೆ ವಿವರವಿರುವ ಅರ್ಜಿಯನ್ನು ಅಧಿಕೃತ ಗ್ಯಾಸ್ ಡೀಲರ್‌ಗೆ ಸಲ್ಲಿಸಬೇಕಿದೆ. ಹೀಗೆ ಸಲ್ಲಿಸಿದ ಅರ್ಜಿಯನ್ನು ಡೀಲರ್ಸ್ ತೈಲ ಕಂಪನಿಗಳಿಗೆ ಕಳುಹಿಸಿ ಅವರಿಂದ ಅನುಮೋದನೆಗೊಂಡ ಹೋಟೆಲ್, ಸ್ವೀಟ್ ಅಂಗಡಿ, ಬೇಕರಿ ಸೇರಿದಂತೆ ಇತರೆ ವ್ಯಾಪಾರಸ್ಥರಿಗೆ ಸಿಲಿಂಡರ್ ನೀಡಲಾಗುತ್ತಿದೆ



ಖಾಸಗಿ ಕಂಪನಿಗಳ ದುಬಾರಿ ಬೆಲೆ ಸಿಲಿಂಡರ್‌ಗೆ ಮೊರೆ

ಅಧಿಕೃತ ಡೀಲರ್‌ಗಳಿಂದ ಸಿಲಿಂಡರ್ ಪಡೆಯಲು ದಾಖಲಾತಿ ಇಲ್ಲದ ವ್ಯಾಪಾರಸ್ಥರು ಖಾಸಗಿ ಕಂಪನಿಗಳ ಮೊರೆ ಹೋಗಿದ್ದಾರೆ. ದುಬಾರಿಯಾದರೂ ವ್ಯಾಪಾರಸ್ಥರು ಅನಿವಾರ್ಯವಾಗಿ ಖರೀದಿ ಮಾಡುತ್ತಿದ್ದಾರೆ. ಭಾರತ ಸರ್ಕಾರಿ ಸ್ವಾಮ್ಯದ ಬಿಪಿಸಿಎಲ್, ಹೆಚ್ ಪಿಸಿಎಲ್ ಹಾಗೂ ಐಒಸಿಎಲ್ ನಲ್ಲಿ 19 ಕೆ.ಜಿ. ಸಿಲಿಂಡರ್‌ಗೆ 2,141 ರೂಪಾಯಿ ಬೆಲೆ. ಆದರೆ ಖಾಸಗಿ ಕಂಪನಿಗಳ ಗ್ಯಾಸ್ ಸಿಲಿಂಡರ್ ಬೆಲೆ ದುಬಾರಿಯಾಗಿದೆ. 17 ಕೆ.ಜಿ. ಗ್ಯಾಸ್ ಸಿಲಿಂಡರ್‌ಗೆ 4,585 ರೂಪಾಯಿಗಳಾಗಿದೆ. ಆದರೆ ಕಡಿಮೆ ಬೆಲೆಗೆ ಅಧಿಕೃತ ಡೀಲರ್‌ಗಳಿಂದ ಸಿಲಿಂಡರ್ ಪಡೆಯಲು ಲೈಸೆನ್ಸ್, ಜಿಎಸ್‌ಟಿ ಸೇರಿದಂತೆ ಇತರೆ ದಾಖಲಾತಿ ಇಲ್ಲದ ಕಾರಣ ಹಲವು ವ್ಯಾಪಾರಸ್ಥರು ಖಾಸಗಿ ಕಂಪನಿಗಳ ಗ್ಯಾಸ್ ಸಿಲಿಂಡರ್‌ಗಳನ್ನು ಅನಿವಾರ್ಯವಾಗಿ ಖರೀದಿ ಮಾಡುತ್ತಿದ್ದಾರೆ. ಆದರೆ ಇದರ ಹೊರೆಯನ್ನು ವ್ಯಾಪಾರಸ್ಥರು ತಾವು ಹೊರದೆ ಗ್ರಾಹಕರ ಮೇಲೆ ಹಾಕುತ್ತಿದ್ದಾರೆ. ಪ್ರತಿಯೊಂದು ತಿಂಡಿ ತಿನಿಸುಗಳ ಬೆಲೆಯನ್ನು 5ರಿಂದ 15 ರೂಪಾಯಿಗೆ ಹೆಚ್ಚಳ ಮಾಡಿದ್ದಾರೆ. ಅಲ್ಲದೆ ಊಟದ ಬೆಲೆ 20 ರಿಂದ 30 ರೂಪಾಯಿ ಹೆಚ್ಚಿಸಿದ್ದಾರೆ. ಅಷ್ಟೆ ಅಲ್ಲದೆ ಕಾಫಿ, ಟೀ ಸೇರಿದಂತೆ ಇತರೆ ಬೆಲೆ ಕೂಡ ಏರಿಕೆ ಮಾಡಿದ್ದಾರೆ. ಯಾವುದೇ ತೊಂದರೆ ಎದುರಾಗಲಿ ಅಂತಿಮವಾಗಿ ಜನ ಸಾಮಾನ್ಯರೆ ಹೊರಬೇಕಾಗುತ್ತದೆ ಎಂಬುದಕ್ಕೆ ಬೆಲೆ ಏರಿಕೆ ಸ್ಪಷ್ಟ ನಿದರ್ಶನವಾಗಿದೆ.



> “ಗ್ಯಾಸ್ ಸಿಲಿಂಡರ್ ಬೆಲೆ ದುಬಾರಿಯಾಗಿರುವ ಹಿನ್ನೆಲೆಯಲ್ಲಿ ತಿಂಡಿ ತಿನಿಸುಗಳ ಬೆಲೆ ಏರಿಕೆ ಕೂಡ ಅನಿವಾರ್ಯವಾಗಿದೆ. ಸರ್ಕಾರಿ ಸ್ವಾಮ್ಯ ಹಾಗೂ ಖಾಸಗಿ ಕಂಪನಿಗಳ ಗ್ಯಾಸ್ ಸಿಲಿಂಡರ್ ಬೆಲೆಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಆದರೂ, ಅನಿವಾರ್ಯವಾಗಿ ಖರೀದಿ ಮಾಡಿದ್ದು, ಇದನ್ನು ಸರಿದೂಗಿಸಲು ಬೆಲೆ ಹೆಚ್ಚಳ ಮಾಡಲಾಗಿದೆ.
>
> –ಸಿ.ನಾರಾಯಣ ಗೌಡ, ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ

ಕಾವೇರಿ ಆಯುರ್ವೇದ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣೆ

ಮೈಸೂರು, ಏ.11(ಎಂಟಿವೈ)– ಮೈಸೂರಿನ ದೇವೇಗೌಡ ವೃತ್ತದ ಬಳಿಯಿರುವ ಕಾವೇರಿ ಆಯುರ್ವೇದ ಆಸ್ಪತ್ರೆಯಲ್ಲಿ ಏ.13 ಮತ್ತು 14ರಂದು ಉಚಿತ ಆಯುರ್ವೇದ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ ಎಂದು ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಪೂರ್ಣಿಮಾ ಕೃಷ್ಣಮೂರ್ತಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ಆಯುರ್ವೇದ ಆಸ್ಪತ್ರೆ ವತಿಯಿಂದ ನಡೆಸುತ್ತಿರುವ ಆರೋಗ್ಯ ತಪಾಸಣಾ ಶಿಬಿರದಲ್ಲಿ ಜೀರ್ಣಕ್ರಿಯೆ ಸಮಸ್ಯೆ, ಕೀಲು ನೋವು, ಸೊಂಟ, ಬೆನ್ನು ನೋವು, ಚರ್ಮ ವ್ಯಾಧಿ, ತಲೆ ನೋವು, ಬೊಜ್ಜು, ಮಧುಮೇಹ ಮುಂತಾದ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಾಗುವುದು. ಮಾಹಿತಿಗೆ ಮೊ.ಸಂ. 97317 99317 ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ವೈದ್ಯೆ ಶ್ರುತಿ ಇದ್ದರು.

ಕನ್ನಡ ಚಲನಚಿತ್ರ ಗೀತೆಗಳ ಗಾಯನ

ಮೈಸೂರು,ಏ.11(ಎಂಟಿವೈ)–ಮೈಸೂರಿನ ಕುವೆಂಪುನಗರದ ಗಾನಭಾರತಿ ವೀಣೆ ಶೇಷಣ್ಣ ಭವನದಲ್ಲಿ ಏ.12ರಂದು ಸಂಜೆ 4ಕ್ಕೆ 'ಗಾನಮೃತ ಸೀಸನ್ 15' ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸ್ಟ್ಯಾನ್ಲಿ ಪಾರ್ಕರ್ ಸ್ಕೂಲ್ ಆಫ್ ಮ್ಯೂಸಿಕ್ ಶಾಲೆಯ ಸ್ಥಾಪಕ ಸ್ಟ್ಯಾನ್ಲಿ ಪಾರ್ಕರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಟ್ಯಾನ್ಲಿ ಪಾರ್ಕರ್ ಸ್ಕೂಲ್ ಆಫ್ ಮ್ಯೂಸಿಕ್ ಸ್ಕೂಲ್ ವತಿಯಿಂದ ಆಯೋಜಿಸಿರುವ 'ಗಾನಮೃತ ಸೀಸನ್ 15' ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮದಲ್ಲಿ 19 ಹವ್ಯಾಸಿ ಗಾಯಕರು 40ಕ್ಕೂ ಅಧಿಕ ಕನ್ನಡ ಚಲನಚಿತ್ರ ಗೀತೆಗಳನ್ನು ಹಾಡಲಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹವ್ಯಾಸಿ ಗಾಯಕರಾದ ದೇಮಪ್ಪ ತಿಪ್ಪಯ್ಯ, ಅಮರ್, ಡಾ.ಸುಮಾ, ನಿರೂಪಕ ಮನು ಯಾದವ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಮೈಸೂರು ಪಾರಂಪರಿಕ ಕಟ್ಟಡಗಳ

ಪರಂಪರೆ ಸಾರಿ... ಸಾರಿ... ಹೇಳಬೇಕಿದ್ದ ಮಾಹಿತಿ ಫಲಕಗಳ ದುಸ್ಥಿತಿ


●ಹಲವು ಕಟ್ಟಡಗಳ ಮುಂದಿವೆ ಬಣ್ಣ ಮಾಸಿ, ಅಕ್ಷರ ಅಳಿಸಿದ ಫಲಕಗಳು ●ತುಕ್ಕು ಹಿಡಿದ ತಗಡಿನ ರೀತಿಯ ಇವುಗಳಿಂದ ಮಾಹಿತಿ ಅಲಭ್ಯ ●ಮೈಸೂರು ಮಹಾನಗರ ಪಾಲಿಕೆ-ಪ್ರವಾಸೋದ್ಯಮ ಸೇರಿ ಸಂಬಂಧಿತ ಸರ್ಕಾರಿ ವ್ಯವಸ್ಥೆಗಳ ನಿರ್ಲಕ್ಷ್ಯಕ್ಕೆ ಸಾಕ್ಷಿ



ಕಾಡಾ ಕಚೇರಿ ಫಲಕ



ಚಾಮುಂಡಿ ಗೆಸ್ಟ್‌ಹೌಸ್ ಫಲಕ



ನಗರ ಪಾಲಿಕೆ ಕಟ್ಟಡದ ಫಲಕ


ಪುರಭವನ ಕಟ್ಟಡದ ಫಲಕ

ಮೈಸೂರು,ಏ.11(ಪಿಎಂ)- ಮೈಸೂರು ಪಾರಂಪರಿಕ ಕಟ್ಟಡಗಳ ನೆಲವೀಡು. ಮೈಸೂರಿನ ಮಹಾರಾಜರ ಕಾಲದಲ್ಲಿ ನಿರ್ಮಾಣಗೊಂಡು ಇಂದಿಗೂ ಸದೃಢವಾಗಿರುವ ಅದೆಷ್ಟೋ ಕಟ್ಟಡಗಳು ಅಂದಿನ ಗತವೈಭವದ ಪ್ರತೀಕವಾಗಿವೆ.

ಅಂತಹ ಕಟ್ಟಡಗಳ ಭವ್ಯ ಪರಂಪರೆ ಅನಾವರಣಗೊಳಿಸಿ ವೀಕ್ಷಕರಿಗೆ ಅವುಗಳ ಹಿನ್ನೆಲೆ, ವೈಶಿಷ್ಟ್ಯ ತಿಳಿಸುವಲ್ಲಿ ಮಾಹಿತಿ ಫಲಕಗಳು ಮಹತ್ವದ ಪಾತ್ರ ವಹಿಸುತ್ತವೆ. ಹಾಗಾಗಿಯೇ ಪಾರಂಪರಿಕ ನಗರಿಯ ಮೈಸೂರಿನ ಪಾರಂಪರಿಕ ಕಟ್ಟಡಗಳ ಎದುರು ಮಾಹಿತಿ ಫಲಕಗಳನ್ನು ಅಳವಡಿಸಿದ್ದು, ಆ ಮೂಲಕ ಪ್ರವಾಸಿಗರಿಗೆ ಮಾತ್ರವಲ್ಲದೆ, ಸ್ಥಳೀಯರಿಗೂ ಅವುಗಳ ಐತಿಹಾಸಿಕ ಹಿನ್ನೆಲೆಯೊಂದಿಗೆ ನಿರ್ಮಾಣದ ವರ್ಷ ಸೇರಿದಂತೆ ಹತ್ತು ಹಲವು ಸಂಗತಿಗಳನ್ನು ಸಂಕ್ಷಿಪ್ತವಾಗಿ ಒದಗಿಸುವ ಉದ್ದೇಶ ಹೊಂದಲಾಗಿದೆ. ಇದು ಉತ್ತಮ ಕಾರ್ಯವೇನು ಸರಿ.

ಆದರೆ ಹಲವು ಪಾರಂಪರಿಕ ಕಟ್ಟಡಗಳ ಎದುರು ಅಳವಡಿಸಿರುವ ಮಾಹಿತಿ ಫಲಕಗಳ ಪರಿಸ್ಥಿತಿ ದುಸ್ಥಿತಿಯಲ್ಲಿದ್ದು, ಅವುಗಳ ಬಣ್ಣ ಮಾಸಿದ್ದು, ಅಕ್ಷರಗಳು ಅಳಸಿ ಹೋಗಿ ಮಾಹಿತಿಯೇ ತಿಳಿಯದಾಗಿದೆ. ಆ ಮೂಲಕ ಅವುಗಳನ್ನು ಅಳವಡಿಸಿರುವ ಉದ್ದೇಶವೇ ನಿರರ್ಥಕ ಎಂಬಂತಾಗಿದೆ ಹೀಗೆ ಪರಂಪರೆ ಪ್ರತಿಬಿಂಬಿಸಬೇಕಿದ್ದ ಫಲಕಗಳು ತುಕ್ಕು ಹಿಡಿಯುತ್ತಿವೆ.

ಬಣ್ಣ ಮಾಸಿದೆ: ಚೌಕಾಕಾರದಲ್ಲಿ ಇರುವ ಈ ಫಲಕಗಳಲ್ಲಿ 'ಪಾರಂಪರಿಕ ಕಟ್ಟಡ' ಎಂಬ ಶೀರ್ಷಿಕೆಯಡಿ ಹಾಗೂ 'ನಗರಪಾಲಿಕೆ, ಮೈಸೂರು' ಅಡಿಬರಹ ಉಲ್ಲೇಖಿಸಿದ್ದು, ಮಧ್ಯಭಾಗದಲ್ಲಿ ಆಯಾಯ ಕಟ್ಟಡಗಳ ಮಾಹಿತಿಯನ್ನು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಪ್ರಕಟಿಸಲಾಗಿದೆ. ಆದರೆ ಹಲವು ಕಟ್ಟಡ ಮುಂದಿರುವ ಫಲಕಗಳಲ್ಲಿ ಅಕ್ಷರ-ಬಣ್ಣ ಮಾಸಿ ಹೋಗಿ ಮಾಹಿತಿಯೇ ಅಲಭ್ಯವಾಗಿದೆ. ಹೀಗೆ ಕೇವಲ ಕಬ್ಬಿಣದ ತಗಡಿನ ರೀತಿಯಲ್ಲಿ ಮಾತ್ರ ಅವುಗಳ ಅಸ್ತಿತ್ವ ಈಗ ಉಳಿದುಕೊಂಡಿದೆ.

ಈ ಫಲಕಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಿದ್ದರೆ ಪ್ರವಾಸಿಗರಿಗೆ ಮಾತ್ರವಲ್ಲ ಸ್ಥಳೀಯರಿಗೂ ಆಯಾ ಪಾರಂಪರಿಕ ಕಟ್ಟಡಗಳ ಮಾಹಿತಿ ಅರಿಯಲು ಸಹಕಾರಿಯಾಗುತ್ತಿತ್ತು. ಇದೇ ಉದ್ದೇಶದಿಂದಲೇ ಫಲಕ ಅಳವಡಿಸಿದ್ದರೂ ಅವುಗಳ ನಿರ್ವಹಣೆ ಮರೆತು ಹೋದ ಕಾರಣ ಅವು ದುಸ್ಥಿತಿ ತಲುಪಿವೆ. ಇವುಗಳ ನಿರ್ವಹಣೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ನಿರ್ಲಕ್ಷ್ಯ ಎದ್ದು ಕಾಣುವಂತಾಗಿದೆ. ಅತ್ತ ಪ್ರವಾಸೋದ್ಯಮ ಉತ್ತೇಜಿಸುವ ಜವಾಬ್ದಾರಿ ಹೊತ್ತ ಪ್ರವಾಸೋದ್ಯಮ ಇಲಾಖೆ ಸಹ ಇವುಗಳತ್ತ ತಿರುಗಿ ನೋಡಿಲ್ಲ.

ಪಾಲಿಕೆ ಫಲಕವೂ ಮಾಸುತ್ತಿದೆ: ಮೈಸೂರು ಮಹಾನಗರ ಪಾಲಿಕೆ ಕಟ್ಟಡಕ್ಕೆ ಸಂಬಂಧಿಸಿದ ಫಲಕದಲ್ಲಿ ಮಾಹಿತಿಯು ಅಷ್ಟೇನೂ ಮಾಸಿ ಹೋಗಿಲ್ಲ. ಹಾಗೆಂದ ಮಾತ್ರಕ್ಕೆ ಪಾಲಿಕೆ ನಿರ್ವಹಣೆ ಇದಕ್ಕೆ ಕಾರಣ ಎಂದಲ್ಲ! ಅಲ್ಲಿ ಫಲಕವಿರುವ ಆವರಣದಲ್ಲಿ ಮರದ ನೆರಳು ಇರುವುದೇ ಇದಕ್ಕೆ ಕಾರಣವೆಂದು ಅಲ್ಲಿ ನೋಡಿದ ಯಾರೂ ಬೇಕಾದರೂ ಹೇಳಬಹುದು.

ಸಂಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿಯ ಈ ಕಟ್ಟಡದ ಮಾಹಿತಿ ಫಲಕ ಹೊರತಾಗಿ ಮೈಸೂರಿನ ಹೃದಯ ಭಾಗದಲ್ಲಿರುವ ಹಲವು ಪಾರಂಪರಿಕ ಕಟ್ಟಡಗಳ ಫಲಕಗಳಲ್ಲಿ ಮಾಹಿತಿ ಗೋಚರಿಸದೇ ಕೇವಲ ಕಬ್ಬಿಣದ ತಗಡಿನ ರೂಪದಲ್ಲಿ ಪ್ರವಾಸಿಗರಿಗೆ ದರ್ಶನ ನೀಡುತ್ತಿವೆ.

ಮಹಾನಗರ ಪಾಲಿಕೆ ಕಟ್ಟಡದ ಮಾಹಿತಿ ಫಲಕ ಸಂಪೂರ್ಣ ಮಾಸಿ ಹೋಗಿಲ್ಲ. ವೀಕ್ಷಕರು ಓದಿ ಕಟ್ಟದ ಬಗ್ಗೆ ಮಾಹಿತಿ ತಿಳಿದುಕೊಳ್ಳಬಹುದು. ಆದರೆ ಇನ್ನು ಕೆಲವು ದಿನಗಳಲ್ಲಿ ಇಲ್ಲಿರುವ ಮಾಹಿತಿಯೂ ಮಾಸಿ ಹೋಗುವ ಸ್ಥಿತಿಯಿದೆ. 'ನಗರ ಸಭೆ ಕಚೇರಿ ಉಪಯೋಗಕ್ಕಾಗಿ 1921ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಈ ಕಟ್ಟಡ ನಿರ್ಮಿಸಿದರು' ಎಂಬಿತ್ಯಾದಿ ಮಾಹಿತಿ ಈ ಫಲಕದಿಂದ ಲಭ್ಯವಾಗಲಿದೆ.

ಕೃಷ್ಣ ವಿಲಾಸ ರಸ್ತೆಯಲ್ಲಿರುವ ಪಾರಂಪರಿಕ ಕಟ್ಟಡದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಕಾರ್ಯನಿರ್ವಹಿಸುತ್ತಿದ್ದು, ಈ ಕಟ್ಟಡದ ಫಲಕದ ಮಾಹಿತಿ ಮಾಸಿ ಹೋಗಿದೆ. ಅಂಬಲ್ ನರಸಿಂಹ ಅಯ್ಯಂಗಾರ್ ಅವರ ಪ್ರಯತ್ನದ ಫಲವಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ನಿರ್ಮಾಣ ಗೊಂಡ ಶಾಲೆಯ ಕಟ್ಟಡದಲ್ಲೀಗ ಮಹಾರಾಣಿ ಪಿಯು ಕಾಲೇಜು ಹಾಗೂ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪ ನಿರ್ದೇಶಕರ ಕಚೇರಿ ಕಾರ್ಯನಿರ್ವಹಿಸುತ್ತಿವೆ. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಅಂದು ನಿರ್ಮಿಸಿದ ಮಹತ್ವದ ಇತಿಹಾಸ ಸಾರಬೇಕಿದ್ದ ಈ ಕಟ್ಟಡದ ಫಲಕವೂ ಕಳೆಗುಂದಿ ಹೋಗಿದೆ.

ಕಾಡಾ ಕಚೇರಿ ಕಟ್ಟಡದ ಫಲಕದಲ್ಲಿ ಬಿಟ್ಟ ಕಣ್ಣು ಬಿಟ್ಟಂತೆ ನೋಡಿದರೆ ಅಲ್ಲೊಂದು ಇಲ್ಲೊಂದು ಅಕ್ಷರಗಳು ಮಾತ್ರವೇ ಕಾಣಿಸುತ್ತವೆ. ಇದರ ಹೊರತಾಗಿ ಬೇರೆನೂ ಮಾಹಿತಿಯ ಸಿಗುವುದಿಲ್ಲ. ಪುರಭವನದ ಆವರಣದಲ್ಲಿ ಅಳವಡಿಸಿರುವ ಫಲಕವನ್ನು ಎಲ್ಲಿದೆ ಎಂದು ಹುಡುಕುವಂತಹ ಸ್ಥಳದಲ್ಲಿ ಅಳವಡಿಸಲಾಗಿದೆ. ಇನ್ನು ಹುಡುಕಿ ನೋಡಿದರೂ ಅದರಲ್ಲಿಯೂ ಯಾವುದೇ ಮಾಹಿತಿ ಉಳಿದಿಲ್ಲ. ಎಲ್ಲವೂ ಮಾಸಿ ಹೋಗಿ ಎಷ್ಟೋ ದಿನಗಳು ಉರುಳಿವೆ.

ಇನ್ನು ಜೆಎಲ್‌ಬಿ ರಸ್ತೆಯ ಚಾಮುಂಡಿ ಗೆಸ್ಟ್‌ಹೌಸ್ ಕಟ್ಟಡದ್ದು ಇದೇ ಪರಿಸ್ಥಿತಿ. ಸಂಸ್ಕೃತ ಪಾಠಶಾಲಾ ಆವರಣದಲ್ಲಿ ಫಲಕವೇ ಇಲ್ಲ. ಇನ್ನು ಇತರೆ ಪಾರಂಪರಿಕ ಕಟ್ಟಡಗಳ ಮುಂದಿರುವ ಫಲಕಗಳದ್ದೂ ಇದೇ ಪರಿಸ್ಥಿತಿ ಇರುತ್ತದೆ ಎಂಬುದ ಊಹಿಸಲು ಕಷ್ಟವೇನಲ್ಲ. ಇದೊಂದು ರೀತಿಯಲ್ಲಿ ಎಲ್ಲಾ ಪಾರಂಪರಿಕ ಕಟ್ಟಡಗಳ ಮುಂದೆ ಕಬ್ಬಿಣದ ತುಕ್ಕು ಹಿಡಿದ ತಗಡು ಅಳವಡಿಸಿದಂತೆ ಅಲ್ಲವೇ ಎನ್ನುವಂತಾಗಿದೆ.


ವಾಣಿಜ್ಯ ತೆರಿಗೆ ಇಲಾಖೆ ಕಚೇರಿ ಕಟ್ಟಡದ ಫಲಕ


ಮಹಾರಾಣಿ ಪಿಯು ಕಾಲೇಜು ಕಟ್ಟಡದ ಫಲಕ

ವೈಬ್ರೆಂಟ್ ಸಿಎನ್‌ಎಂ ಪದವಿ ಪೂರ್ವ ಕಾಲೇಜಿಗೆ ಉನ್ನತ ಫಲಿತಾಂಶ


ನಂದಿನಿ

ಮೈಸೂರು ಏ.11- ಮೈಸೂರು ತಾಲೂಕಿನ ಜಯಪುರ ಬಳಿಯ ಚಿಕ್ಕನಹಳ್ಳಿಯಲ್ಲಿರುವ ವೈಬ್ರೆಂಟ್ ಸಿಎನ್‌ಎಂ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಸಾಧನೆ ಮಾಡಿದ್ದಾರೆ.

ಪ್ರಸಕ್ತ ಸಾಲಿನ ವಿಜ್ಞಾನ ವಿಭಾಗದಲ್ಲಿ ನಂದಿನಿ.ಎನ್.ಎಂ 590/600 (ಶೇ.98.33) ಅಂಕಗಳಿಸಿ ರಾಜ್ಯಕ್ಕೆ 10 ನೇ ಸ್ಥಾನ ಪಡೆದಿದ್ದಾರೆ. ಸ್ನೇಹ.ಎಲ್ 586/600, ನಾಗು.ಜಿ 584/600, ಸಾನಿಕ.ಜಿ 584/600, ಅಮೃತ.ಜಿ 582/600, ಭಾಗ್ಯಲಕ್ಷ್ಮಿ.ಎಂ 579/600, ಎಸ್.ಜಿ.ಪ್ರತೀಕ್ಷಾ 578/600, ಮೇಘ 574/600, ಶಮನ.ಎಮ್.ಎಸ್ 573/600, ಯಶಸ್ವಿನಿ.ಆರ್ 573/600, ಮನೋಜ್.ಎ.ಎಲ್ 571/600, ಸಂಜನ.ಕೆ.ಎಸ್ 571/600, ವೈಷ್ಣವಿ.ಎನ್ 571/600 ಸೇರಿ 63 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಹಾಗೂ 47 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.11- ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಬೆಂಗಳೂರಿನ ಸೌಂದರ್ಯ ಸಂಯುಕ್ತ ಪದವಿಪೂರ್ವ ಕಾಲೇಜು ವಿದ್ಯಾರ್ಥಿ ಬಿ.ಆರ್.ಇಶನ್, 600ಕ್ಕೆ 591 (ಶೇ.98.50) ಅಂಕಗಳಿಸಿ, ರಾಜ್ಯಕ್ಕೆ 9ನೇ ರ್‍ಯಾಂಕ್ ಪಡೆಯುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಕರ್ನಾಟಕ ಲೋಕಾಯುಕ್ತ ಚೀಫ್ ಇಂಜಿನಿಯರ್, ಮಂಡ್ಯ ಮೂಲದ ಬಿ.ವಿ.ರಮೇಶ್ ಹಾಗೂ ಕೆ.ಬಿ.ಪುಷ್ಪಲತಾ ಅವರ ಪುತ್ರನಾಗಿದ್ದು, ಕನ್ನಡ ವಿಷಯದಲ್ಲಿ 98, ಇಂಗ್ಲಿಷ್ 97, ಭೌತಶಾಸ್ತ್ರ 99, ರಾಸಾಯನ ಶಾಸ್ತ್ರ 98, ಗಣಿತ 99 ಹಾಗೂ ಕಂಪ್ಯೂಟರ್ ಸೈನ್ಸ್ 100 ಅಂಕ ಗಳಿಸಿದ್ದಾರೆ.

ಕೆಎನ್‌ಸಿ ಇನ್ನೋವೇಟಿವ್ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ

ಮೈಸೂರು ಏ.11- ನಗರದ ಹೆಬ್ಬಾಳ್‌ನಲ್ಲಿರುವ ಕೆಎನ್‌ಸಿ ಇನ್ನೋವೇಟಿವ್ ಪಿಯು ಕಾಲೇಜು 2026 ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದೆ. ಒಟ್ಟು 261 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 57 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 163 ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿದ್ದಾರೆ.

ಪ್ರಸಕ್ತ ಸಾಲಿನ ವಿಜ್ಞಾನ ವಿಭಾಗ : ಭವ್ಯ ಡಗಾ 582/600 (ಶೇ.97), ಗ್ರೀಷ್ಮಾ.ವಿ 580/600, ಶರಣ್ಯ.ಕೆ.ಎಂ 580/600, ಸೌಂದರ್ಯ.ಬಿ.ಎಸ್ 580/600, ಸಂಪ್ರೀತಾ.ಆರ್ 578/600

ವಾಣಿಜ್ಯ ವಿಭಾಗ: ಖುಷಿ ಭಾರಧ್ವಾಜ್ 579/600 (ಶೇ.96.5), ಸೋನು.ಎಸ್.576/600, ಕುಸುಮ.ಎಂ 563/600, ಪಿ.ಎಸ್.ಪ್ರತೀಕ್ಷಾ 546/600, ಶ್ರೇಯಸ್‌ರಾಜ್‌ಗೌಡ 542 ಅಂಕಗಳಿಸಿ ಅತ್ಯುನ್ನತ ಶೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಜಯಲಕ್ಷ್ಮೀಪುರಂನ ಸೇಂಟ್ ಜೋಸೆಫ್ ಪಿಯು ಕಾಲೇಜಿಗೆ ಶೇ.99 ರಷ್ಟು ಫಲಿತಾಂಶ



ಮೈಸೂರು ಏ.11-ನಗರದ ಜಯಲಕ್ಷ್ಮೀ ಪುರಂನಲ್ಲಿರುವ ಸೇಂಟ್ ಜೋಸೆಫ್ ಪಿಯು ಕಾಲೇಜು 2026ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ99 ರಷ್ಟು ಫಲಿತಾಂಶ ಪಡೆದು ಅತ್ಯುತ್ತಮ ಸಾಧನೆ ಮಾಡಿದೆ.

ಪ್ರಸಕ್ತ ಸಾಲಿನಲ್ಲಿ ವಾಣಿಜ್ಯ ವಿಭಾಗದಲ್ಲಿ ಸಹನಾ.ಎಂ 594 ಅಂಕಗಳಿಸಿ ರಾಜ್ಯಕ್ಕೆ 7 ನೇ ಸ್ಥಾನ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಸಹನಾ.ಬಿ.ಎಲ್. 567/600, ಕಲಾ ವಿಭಾಗದಲ್ಲಿ ಅಲೀಮಾ ಐಫಾ 581/600 ಅಂಕ ಗಳಿಸಿದ್ದಾರೆ.

ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿಗೆ ಶೇ.99 ರಷ್ಟು ಫಲಿತಾಂಶ

ಮೈಸೂರು ಏ.11- ನಗರದ ಮಾನಸಗಂಗೋತ್ರಿಯ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿರುವ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು 2026 ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.99 ರಷ್ಟು ಫಲಿತಾಂಶ ಪಡೆದಿದೆ.

ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿ ಅಂಕಿತಾ.ಎಂ.ಎನ್. 583/600 (ಪ್ರಥಮ), ವೈಷ್ಣವಿ 576/600, ಅಭಿಶೇಕ್ .ಪಿ 572/600, ನಂದನ್. ಆರ್ 563/600, ನಿಸರ್ಗ.ಎಂ.ಎನ್562/600 ಅಂಕಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಜೀನಿಯಸ್ ಕಾಲೇಜ್‌ಗೆ ಉತ್ತಮ ಫಲಿತಾಂಶ


ಶ್ವೇತಲ್

ಮೈಸೂರು, ಏ.11(ಎಂಟಿವೈ)- ಮೈಸೂರು- ಬನ್ನೂರು ರಸ್ತೆಯ ದೇವೇಗೌಡ ವೃತ್ತದಲ್ಲಿರುವ ಜೀನಿಯಸ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಶ್ವೇತಲ್ ಲೊಂಡೆ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 587 ಅಂಕ ಪಡೆದಿದ್ದಾರೆ. ಅಲ್ಲದೆ, ಕಾಲೇಜಿನ ಮೊಹಮ್ಮದ ಹಮ್ದದ್ ಮತ್ತು ಹೆಚ್.ಎಂ. ಶ್ರೀಯಾ 517 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಪರೀಕ್ಷೆಯಲ್ಲಿ ಕಾಲೇಜಿನ ಮೂವರು ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 16 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಸುರೇಖಾ ಪ್ರಭು ತಿಳಿಸಿದ್ದಾರೆ.

ಪರಿಸರ ಸ್ನೇಹಿ ಮೈಸೂರಿಗಾಗಿ ಚಿಣ್ಣರ ಹೆಜ್ಜೆ ಪರಿಸರ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ


ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಆರ್‌ಎಲ್‌ಹೆಚ್‌ಪಿ ಸಂಸ್ಥೆಯ ಆಯೋಜಿಸಿದ್ದ 'ಪರಿಸರ ಸ್ನೇಹಿ ಮೈಸೂರಿಗಾಗಿ ಚಿಣ್ಣರ ಹೆಜ್ಜೆ' ಜಾಗೃತಿ ಕಾರ್ಯಕ್ರಮಕ್ಕೆ ಪರಿಸರವಾದಿ ಪ್ರೊಯು. ಎನ್. ರವಿಕುಮಾರ್ ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿದರು.

ಮೈಸೂರು, ಏ.11(ಎಂಟಿವೈ)- ಪರಿಸರ ಸಂರಕ್ಷಣೆಯಲ್ಲಿ ಮಕ್ಕಳು ಮತ್ತು ಯುವಜನರು ಮುಂಚೂಣಿಯಲ್ಲಿದ್ದರೆ ಮಾತ್ರ ಪರಿಣಾಮಕಾರಿ ಬದಲಾವಣೆ ಸಾಧ್ಯ ಎಂದು ಪರಿಸರವಾದಿ ಪ್ರೊ.ಯು. ಎನ್. ರವಿಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಆರ್‌ಎಲ್‌ಹೆಚ್‌ಪಿ ಸಂಸ್ಥೆಯ ಆಯೋಜಿಸಿದ್ದ 'ಪರಿಸರ ಸ್ನೇಹಿ ಮೈಸೂರಿಗಾಗಿ ಚಿಣ್ಣರ ಹೆಜ್ಜೆ' ಪರಿಸರ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪರಿಸರದ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿವೆ. ಪರಿಸರಕ್ಕೆ ಹಾನಿ ಮಾಡುವಲ್ಲಿ ಮಾನವನ ಪಾತ್ರ ಹೆಚ್ಚಾಗಿದೆ. ಪರಿಸರ ಸಂರಕ್ಷಣೆ ಕೇವಲ ಮಾತಿಗೆ ಮಾತ್ರ ಸೀಮಿತವಾಗದೆ ನಿತ್ಯ ಜೀವನದಲ್ಲಿ ಪರಿಸರ ಸ್ನೇಹಿ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ. ಪ್ರತಿಯೊಬ್ಬರೂ ಕನಿಷ್ಠ ಐದು ಗಿಡಗಳನ್ನು ನೆಟ್ಟರೆ ಅದು ಒಂದು ಕಾಡಿನ ನಿರ್ಮಾಣಕ್ಕೆ ಕಾರಣವಾಗಬಹುದು ಎಂದರು.

'ಪರಿಸರಕ್ಕಾಗಿ ನಾವು' ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಮಾತನಾಡಿ, ಪ್ಲಾಸ್ಟಿಕ್ ಅತಿಯಾದ ಬಳಕೆ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಎಲ್ಲರೂ ಬಟ್ಟೆಯ ಚೀಲಗಳನ್ನು ಬಳಸಬೇಕು. ಮನೆಯಿಂದಲೇ ನೀರಿನ ಬಾಟಲ್ ತೆಗೆದುಕೊಂಡು ಹೋಗುವ ಅಭ್ಯಾಸ ಬೆಳೆಸಿಕೊಳ್ಳಬೇಕು. ತಾವು ಮಾತ್ರ ಜಾಗೃತರಾಗುವುದಕ್ಕಿಂತ ಇತರರಲ್ಲಿಯೂ ಅರಿವು ಮೂಡಿಸುವುದು ಮುಖ್ಯ ಎಂದು ಅಭಿಪ್ರಾಯಪಟ್ಟರು.

ಇದಕ್ಕೂ ಮುನ್ನ ಆರ್‌ಎಲ್‌ಹೆಚ್‌ಪಿ ಸಂಸ್ಥೆಯ ನಿರ್ದೇಶಕರಾದ ಸರಸ್ವತಿ ಮಾತನಾಡಿ, ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ(ಆರ್‌ಎಲ್‌ಹೆಚ್‌ಪಿ) ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯಾಗಿದ್ದು, ಕಳೆದ 40 ವರ್ಷಗಳಿಂದ ಮಕ್ಕಳಾಭಿವೃದ್ಧಿ, ಯುವ ಜನರ ಸಬಲೀಕರಣ, ಮಹಿಳಾಭಿವೃದ್ಧಿ ಹಾಗೂ ಸಮುದಾಯ ಆರೋಗ್ಯ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ. ಮೈಸೂರು, ಗುಂಡ್ಲುಪೇಟೆ, ಗುಲ್ಬರ್ಗ ಮತ್ತು ಬೀದರ್‌ನಲ್ಲೂ 40 ಯುವಕರ ಗುಂಪುಗಳನ್ನು ರಚಿಸಿದ್ದು, ರಾಜ್ಯ ಮಟ್ಟದಲ್ಲಿ 'ಕರ್ನಾಟಕ ರಾಜ್ಯ ಯೂತ್ ನೆಟ್ವರ್ಕ್' ನಿರ್ಮಿಸಿದೆ. ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಸಾವಯವ ಗೊಬ್ಬರ ಬಳಕೆ, ಪ್ಲಾಸ್ಟಿಕ್ ನಿಷೇಧ, ಘನತ್ಯಾಜ್ಯ ನಿರ್ವಹಣೆ, ಜಾಗತಿಕ ತಾಪಮಾನ ಮತ್ತು ಪ್ರಕೃತಿ ವಿಕೋಪಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಗಳನ್ನು ವಿವಿಧ ಇಲಾಖೆಗಳ ಸಹಯೋಗದಲ್ಲಿ ನಡೆಸುತ್ತಿದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಮಕ್ಕಳಿಗಾಗಿ ಪರಿಸರ ಜಾಗೃತಿ ಕಾರ್ಯಕ್ರಮ ಹಾಗೂ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ವಿವಿಧ ಗ್ರಾಮಗಳು ಮತ್ತು ಜಿಲ್ಲೆಗಳಿಂದ 200ಕ್ಕೂ ಹೆಚ್ಚು ಮಕ್ಕಳು ಮತ್ತು ಯುವಜನರು ಭಾಗವಹಿಸಿದರು.

ಬಿಟಿಎಲ್ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಸಾಧನೆ


ಶೆಹ್ನಾಜ್


ರಾಬಿಯಾ


ಸಾಕಿಬ್


ನೂರ್ ಆಯಿಷಾ


ಹಿಬಾ ಎರಮ್


ಹಸ್ನೇನ್


ಮೊ. ಅದ್ನಾನ್


ಅರ್ಬಾ ಶೆರಿಫ್


ಅಫ್ರೀನ್ ತಾಜ್

ಮೈಸೂರು, ಏ.11-ಕೆಸರೆಯ ಬಿಟಿಎಲ್ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಕಳೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮೆರೆದಿದ್ದಾರೆ.

ಶೆಹ್ನಾಜ್ ಬೇಗಂ-600ಕ್ಕೆ 508, ರಾಬಿಯಾ ಬಸ್ರಿ-600ಕ್ಕೆ 507, ಸಾಕಿಬ್ ಪಾಷಾ-600ಕ್ಕೆ 448, ನೂರ್ ಆಯಿಷಾ 600ಕ್ಕೆ 423, ಹಿಬಾ ಎರಮ್-600ಕ್ಕೆ 394, ಹಸ್ನೇನ್ ಖಾನ್-600ಕ್ಕೆ 391, ಮೊಹಮ್ಮದ್ ಅದ್ನಾನ್-600ಕ್ಕೆ 383, ಅರ್ಬಾ ಶೆರಿಫ್-600ಕ್ಕೆ 369 ಹಾಗೂ ಅಫ್ರೀನ್ ತಾಜ್-600ಕ್ಕೆ 366 ಅಂಕ ಗಳಿಸಿದ್ದಾರೆ. ಕಾಲೇಜಿನ ಅಧ್ಯಕ್ಷೆ ಶ್ರೀಮತಿ ಅಪೂರ್ವ ಲಕ್ಷ್ಮಣ, ವಿದ್ಯಾರ್ಥಿಗಳ ಸಾಧನೆಯನ್ನು ಕೊಂಡಾಡಿ ಅಭಿನಂದಿಸಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.11(ಎಂಟಿವೈ)- ಮೈಸೂರಿನ ಮಹದೇವಪುರ ಬಡಾವಣೆಯಲ್ಲಿರುವ ಸಿಎನ್‌ಎಂ ವೈಬ್ರೆಂಟ್ ಪಿಯು ಕಾಲೇಜಿನ ವಿದ್ಯಾರ್ಥಿನಿ ಯಶಸ್ವಿನಿ ಆರ್. ಅವರು ವಿಜ್ಞಾನ ವಿಭಾಗದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಅವರು 600ಕ್ಕೆ 573 ಅಂಕ (95.50%) ಪಡೆಯುವ ಮೂಲಕ ಸಾಧನೆ ಮೆರೆದಿದ್ದಾರೆ. ಇವರು ಹಿರಿಯ ಪುಟ ವಿನ್ಯಾಸಗಾರ ಜಿ.ಎ. ರಮೇಶ್ ಹಾಗೂ ಕಲ್ಪ ಎಂ.ವಿ. ದಂಪತಿ ಪುತ್ರಿ

ಪ್ರಖ್ಯಾತ್ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು,ಏ.11- ಕುವೆಂಪುನಗರದ ಎಂಎಎಸ್‌ವಿಎಸ್ ಗುರುಕುಲ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಕೆ.ಎಸ್.ಪ್ರಖ್ಯಾತ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.93 (558) ಅಂಕದೊಂದಿಗೆ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಈತ ಬಿಜೆಪಿ ಹಿರಿಯ ಮುಖಂಡ ಎಂ.ಎನ್.ಸತ್ಯಾನಂದ ವಿಟ್ಟು ಹಾಗೂ ಕಮಲಾಕ್ಷಿ ಎಸ್.ವಿಟ್ಟು ಅವರ ಪುತ್ರ

ಶಾಸಕ ಕೆ.ಹರೀಶ್‌ಗೌಡ ನೇತೃತ್ವದಲ್ಲಿ

ಲೋಕನಾಯಕನಗರ ವಾರ್ಡ್ 4ರ ಕಾಂಗ್ರೆಸ್‌ಗೆ ಪದಾಧಿಕಾರಿಗಳ ಆಯ್ಕೆ

ಮೈಸೂರು,ಏ.11(ಪಿಎಂ)- ಚಾಮರಾಜ ವಿಧಾನಸಭಾ ಕ್ಷೇತ್ರದ ಲೋಕನಾಯಕನಗರ ವಾರ್ಡ್ 4ರ ಕಾಂಗ್ರೆಸ್‌ಗೆ ಪದಾಧಿಕಾರಿಗಳನ್ನು ಶನಿವಾರ ಆಯ್ಕೆ ಮಾಡಲಾಯಿತು.

ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಹರೀಶ್ ಗೌಡ ಅವರ ನೇತೃತ್ವ ಹಾಗೂ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಅಧ್ಯಕ್ಷತೆಯಲ್ಲಿ ನಡೆದ ಈ ಪ್ರಕ್ರಿಯೆಯಲ್ಲಿ ಅಧ್ಯಕ್ಷರಾಗಿ ಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಜಯರಾಮೇಗೌಡ, ಉಪಾಧ್ಯಕ್ಷರಾಗಿ ಕಾಲೋನಿ ಶ್ರೀನಿವಾಸ ಅವರನ್ನು ಆಯ್ಕೆ ಮಾಡಲಾಯಿತು.


ಶಾಸಕ ಕೆ.ಹರೀಶ್‌ಗೌಡ ಅವರ ನೇತೃತ್ವದಲ್ಲಿ ಲೋಕನಾಯಕನಗರ ವಾರ್ಡ್ 4ರ ಕಾಂಗ್ರೆಸ್‌ಗೆ ಪದಾಧಿಕಾರಿಗಳನ್ನು ಶನಿವಾರ ಆಯ್ಕೆ ಮಾಡಲಾಯಿತು.

ಇದೇ ವೇಳೆ ಮಾತನಾಡಿದ ಕೆ.ಹರೀಶ್ ಗೌಡ, ಪಕ್ಷದ ಸಂಘಟನೆಯಲ್ಲಿ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಪಾತ್ರ ಮಹತ್ವದ್ದಾಗಿದೆ. ಇದುವರೆಗೆ ಅಧ್ಯಕ್ಷರಾಗಿ ಕೆಲಸ ಮಾಡಿದ ಕೇಬಲ್ ನಾಗಣ್ಣ ನವರಿಗೆ ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಥವಾ ಬ್ಲಾಕ್ ಕಾಂಗ್ರೆಸ್ ಸಮಿತಿಯಲ್ಲಿ ಸ್ಥಾನಮಾನ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಪ್ರತಿಯೊಂದು ವಾರ್ಡಿನಲ್ಲೂ ವಾರ್ಡ್ ಸಮಿತಿ, ಬೂತ್ ಸಮಿತಿ ಸೇರಿದಂತೆ ವಿವಿಧ ಸಮಿತಿಗಳು ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಆ ಮೂಲಕ ಮುಂಬರುವ ವಿವಿಧ ಚುನಾವಣೆಗಳಲ್ಲಿ ಪಕ್ಷದ ಗೆಲುವಿಗೆ ಶ್ರಮಿಸಬೇಕು. ಪಕ್ಷದಲ್ಲಿ ವಾರ್ಡ್ ಅಧ್ಯಕ್ಷ ಸ್ಥಾನ ಅತ್ಯಂತ ಜವಾಬ್ದಾರಿ ಹೊಂದಿದೆ. ಪಕ್ಷದಲ್ಲಿ ಯಾವುದೇ ಶಾಸಕರು ವಾರ್ಡ್‌ಗಳಿಗೆ ಭೇಟಿ ನೀಡುವ ಮುನ್ನ ಆಯಾ ವಾರ್ಡ್ ಅಧ್ಯಕ್ಷರಿಗೆ ಮಾಹಿತಿ ನೀಡುವ ಪರಿಪಾಠ ಇದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಹ ವಾರ್ಡ್ ಮತ್ತು ಬ್ಲಾಕ್ ಅಧ್ಯಕ್ಷರಾಗಿ ಪಕ್ಷಕ್ಕಾಗಿ ದುಡಿದು ಇಂದು ಪಕ್ಷ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ. ಹಾಗಾಗಿ ಪಕ್ಷದಲ್ಲಿ ನೀಡುವ ಸ್ಥಾನಮಾನದ ಮಹತ್ವವನ್ನು ಅರಿಯಬೇಕು ಎಂದು ಹೇಳಿದರು.

ಪಾಲಿಕೆ ಮಾಜಿ ಸದಸ್ಯ ಶ್ರೀನಿವಾಸ್ ಮಾತನಾಡಿ, ಶಾಸಕರು ನಮ್ಮ ಲೋಕನಾಯಕನಗರದ ಎಲ್ಲಾ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ಒದಗಿಸಿಕೊಟ್ಟಿದ್ದಾರೆ. ಅಲ್ಲದೆ, ಇಡೀ ಕ್ಷೇತ್ರದ ಅಭಿವೃದ್ಧಿಗೆ ಅವರು ಶ್ರಮಿಸುತ್ತಿದ್ದಾರೆ ಎಂದರು. ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಮಾತನಾಡಿ, ಕಾರ್ಯಕರ್ತರು, ಪದಾಧಿಕಾರಿಗಳು ಪಕ್ಷದ ಸಂಘಟನೆಗೆ ಹೆಚ್ಚು ಸಮಯ ನೀಡಬೇಕು ಎಂದು ತಿಳಿಸಿದರು. ಪಕ್ಷದ ಮುಖಂಡರಾದ ಕೇಬಲ್ ನಾಗರಾಜು, ಕೇಬಲ್ ಮಹೇಶ್, ಸುಪ್ರೀಂ ಮಂಜು, ಯುವ ಕಾಂಗ್ರೆಸ್ ದಿನೇಶ್ ಮತ್ತಿತರರು ಹಾಜರಿದ್ದರು.

ಏ.15ರಿಂದ ಮಕ್ಕಳಿಗಾಗಿ ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್ ಕಾರ್ಯಕ್ರಮ

ಮೈಸೂರು, ಏ.11- 92ನೇ ವರ್ಷದ ಸಂಭ್ರಮದಲ್ಲಿರುವ ಮೈಸೂರು ಆಕಾಶವಾಣಿ ಕೇಂದ್ರವು ಏ.15ರಿಂದ ಪ್ರತಿ ದಿನ ಬೆಳಗ್ಗೆ 8.30ಕ್ಕೆ ಮತ್ತು ಸಂಜೆ 5.30ಕ್ಕೆ ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್ ಶಿಶು ಗೀತೆಗಳ ಕಾರ್ಯಕ್ರಮ ಪ್ರಸಾರ ಮಾಡಲಿದೆ. ಪರಿಕಲ್ಪನೆ : ಕೇಂದ್ರ ಬಾಲಸಾಹಿತ್ಯ ಪುರಸ್ಕಾರಕ್ಕೆ ಭಾಜನರಾಗಿದ್ದ ಡಾ. ಆನಂದ್ ವಿ. ಪಾಟೀಲ್. ನಿರ್ಮಾಣ : ಜಿ.ಶಾಂತಕುಮಾರ್. ಪ್ರಸ್ತುತಿ : ಉಷಾಲತಾ .ಎಸ್ ಅವರದು.

ಎನ್.ಆರ್ ಕ್ಷೇತ್ರದ ಗ್ಯಾರಂಟಿ ಕಚೇರಿ ನಾಳೆ ಉದ್ಘಾಟನೆ

ಮೈಸೂರು.ಏ.11- ಮೈಸೂರು ಮಹಾನಗರ ಪಾಲಿಕೆ, ವಲಯ ಕಚೇರಿ 9ರ ಕಟ್ಟಡದಲ್ಲಿ ನರಸಿಂಹರಾಜ ಕ್ಷೇತ್ರ ಗ್ಯಾರಂಟಿಗಳ ಅನುಷ್ಠಾನ ಸಮಿತಿಯ ಕಚೇರಿ ಉದ್ಘಾಟನಾ ಕಾರ್ಯಕ್ರಮವನ್ನು ಏ.13, ಸೋಮವಾರ, ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಕಚೇರಿ ಉದ್ಘಾಟನೆಯನ್ನು ನರಸಿಂಹರಾಜ ಕ್ಷೇತ್ರದ ಶಾಸಕರೂ, ಮಾಜಿ ಸಚಿವ ತನ್ವೀರ್ ಸೇಠ್ ನೆರವೇರಿಸಲಿದ್ದಾರೆ.


ಮೈಸೂರು ಪಾರಂಪರಿಕ ಕಟ್ಟಡಗಳ

ಪರಂಪರೆ ಸಾರಿ... ಸಾರಿ... ಹೇಳಬೇಕಿದ್ದ ಮಾಹಿತಿ ಫಲಕಗಳ ದುಸ್ಥಿತಿ


● ಹಲವು ಕಟ್ಟಡಗಳ ಮುಂದಿವೆ ಬಣ್ಣ ಮಾಸಿ, ಅಕ್ಷರ ಅಳಿಸಿದ ಫಲಕಗಳು ● ತುಕ್ಕು ಹಿಡಿದ ತಗಡಿನ ರೀತಿಯ ಇವುಗಳಿಂದ ಮಾಹಿತಿ ಅಲಭ್ಯ ● ಮೈಸೂರು ಮಹಾನಗರ ಪಾಲಿಕೆ-ಪ್ರವಾಸೋದ್ಯಮ ಸೇರಿ ಸಂಬಂಧಿತ ಸರ್ಕಾರಿ ವ್ಯವಸ್ಥೆಗಳ ನಿರ್ಲಕ್ಷ್ಯಕ್ಕೆ ಸಾಕ್ಷಿ



ಕಾಡಾ ಕಚೇರಿ ಫಲಕ



ಚಾಮುಂಡಿ ಗೆಸ್ಟ್‌ಹೌಸ್ ಫಲಕ



ನಗರ ಪಾಲಿಕೆ ಕಟ್ಟಡದ ಫಲಕ


ಪುರಭವನ ಕಟ್ಟಡದ ಫಲಕ

ಮೈಸೂರು,ಏ.11(ಪಿಎಂ)- ಮೈಸೂರು ಪಾರಂಪರಿಕ ಕಟ್ಟಡಗಳ ನೆಲವೀಡು. ಮೈಸೂರಿನ ಮಹಾರಾಜರ ಕಾಲದಲ್ಲಿ ನಿರ್ಮಾಣಗೊಂಡು ಇಂದಿಗೂ ಸದೃಢವಾಗಿರುವ ಅದೆಷ್ಟೋ ಕಟ್ಟಡಗಳು ಅಂದಿನ ಗತವೈಭವದ ಪ್ರತೀಕವಾಗಿವೆ.

ಅಂತಹ ಕಟ್ಟಡಗಳ ಭವ್ಯ ಪರಂಪರೆ ಅನಾವರಣಗೊಳಿಸಿ ವೀಕ್ಷಕರಿಗೆ ಅವುಗಳ ಹಿನ್ನೆಲೆ, ವೈಶಿಷ್ಟ್ಯ ತಿಳಿಸುವಲ್ಲಿ ಮಾಹಿತಿ ಫಲಕಗಳು ಮಹತ್ವದ ಪಾತ್ರ ವಹಿಸುತ್ತವೆ. ಹಾಗಾಗಿಯೇ ಪಾರಂಪರಿಕ ನಗರಿಯ ಮೈಸೂರಿನ ಪಾರಂಪರಿಕ ಕಟ್ಟಡಗಳ ಎದುರು ಮಾಹಿತಿ ಫಲಕಗಳನ್ನು ಅಳವಡಿಸಿದ್ದು, ಆ ಮೂಲಕ ಪ್ರವಾಸಿಗರಿಗೆ ಮಾತ್ರವಲ್ಲದೆ, ಸ್ಥಳೀಯರಿಗೂ ಅವುಗಳ ಐತಿಹಾಸಿಕ ಹಿನ್ನೆಲೆಯೊಂದಿಗೆ ನಿರ್ಮಾಣದ ವರ್ಷ ಸೇರಿದಂತೆ ಹತ್ತು ಹಲವು ಸಂಗತಿಗಳನ್ನು ಸಂಕ್ಷಿಪ್ತವಾಗಿ ಒದಗಿಸುವ ಉದ್ದೇಶ ಹೊಂದಲಾಗಿದೆ. ಇದು ಉತ್ತಮ ಕಾರ್ಯವೇನು ಸರಿ.

ಆದರೆ ಹಲವು ಪಾರಂಪರಿಕ ಕಟ್ಟಡಗಳ ಎದುರು ಅಳವಡಿಸಿರುವ ಮಾಹಿತಿ ಫಲಕಗಳ ಪರಿಸ್ಥಿತಿ ದುಸ್ಥಿತಿಯಲ್ಲಿದ್ದು, ಅವುಗಳ ಬಣ್ಣ ಮಾಸಿದ್ದು, ಅಕ್ಷರಗಳು ಅಳಸಿ ಹೋಗಿ ಮಾಹಿತಿಯೇ ತಿಳಿಯದಾಗಿದೆ. ಆ ಮೂಲಕ ಅವುಗಳನ್ನು ಅಳವಡಿಸಿರುವ ಉದ್ದೇಶವೇ ನಿರರ್ಥಕ ಎಂಬಂತಾಗಿದೆ ಹೀಗೆ ಪರಂಪರೆ ಪ್ರತಿಬಿಂಬಿಸಬೇಕಿದ್ದ ಫಲಕಗಳು ತುಕ್ಕು ಹಿಡಿಯುತ್ತಿವೆ.

ಬಣ್ಣ ಮಾಸಿದೆ: ಚೌಕಾಕಾರದಲ್ಲಿ ಇರುವ ಈ ಫಲಕಗಳಲ್ಲಿ 'ಪಾರಂಪರಿಕ ಕಟ್ಟಡ' ಎಂಬ ಶೀರ್ಷಿಕೆಯಡಿ ಹಾಗೂ 'ನಗರಪಾಲಿಕೆ, ಮೈಸೂರು' ಅಡಿಬರಹ ಉಲ್ಲೇಖಿಸಿದ್ದು, ಮಧ್ಯಭಾಗದಲ್ಲಿ ಆಯಾಯ ಕಟ್ಟಡಗಳ ಮಾಹಿತಿಯನ್ನು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಪ್ರಕಟಿಸಲಾಗಿದೆ. ಆದರೆ ಹಲವು ಕಟ್ಟಡ ಮುಂದಿರುವ ಫಲಕಗಳಲ್ಲಿ ಅಕ್ಷರ-ಬಣ್ಣ ಮಾಸಿ ಹೋಗಿ ಮಾಹಿತಿಯೇ ಅಲಭ್ಯವಾಗಿದೆ. ಹೀಗೆ ಕೇವಲ ಕಬ್ಬಿಣದ ತಗಡಿನ ರೀತಿಯಲ್ಲಿ ಮಾತ್ರ ಅವುಗಳ ಅಸ್ತಿತ್ವ ಈಗ ಉಳಿದುಕೊಂಡಿದೆ.

ಈ ಫಲಕಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಿದ್ದರೆ ಪ್ರವಾಸಿಗರಿಗೆ ಮಾತ್ರವಲ್ಲ ಸ್ಥಳೀಯರಿಗೂ ಆಯಾ ಪಾರಂಪರಿಕ ಕಟ್ಟಡಗಳ ಮಾಹಿತಿ ಅರಿಯಲು ಸಹಕಾರಿಯಾಗುತ್ತಿತ್ತು. ಇದೇ ಉದ್ದೇಶದಿಂದಲೇ ಫಲಕ ಅಳವಡಿಸಿದ್ದರೂ ಅವುಗಳ ನಿರ್ವಹಣೆ ಮರೆತು ಹೋದ ಕಾರಣ ಅವು ದುಸ್ಥಿತಿ ತಲುಪಿವೆ. ಇವುಗಳ ನಿರ್ವಹಣೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ನಿರ್ಲಕ್ಷ್ಯ ಎದ್ದು ಕಾಣುವಂತಾಗಿದೆ. ಅತ್ತ ಪ್ರವಾಸೋದ್ಯಮ ಉತ್ತೇಜಿಸುವ ಜವಾಬ್ದಾರಿ ಹೊತ್ತ ಪ್ರವಾಸೋದ್ಯಮ ಇಲಾಖೆ ಸಹ ಇವುಗಳತ್ತ ತಿರುಗಿ ನೋಡಿಲ್ಲ.

ಪಾಲಿಕೆ ಫಲಕವೂ ಮಾಸುತ್ತಿದೆ: ಮೈಸೂರು ಮಹಾನಗರ ಪಾಲಿಕೆ ಕಟ್ಟಡಕ್ಕೆ ಸಂಬಂಧಿಸಿದ ಫಲಕದಲ್ಲಿ ಮಾಹಿತಿಯು ಅಷ್ಟೇನೂ ಮಾಸಿ ಹೋಗಿಲ್ಲ. ಹಾಗೆಂದ ಮಾತ್ರಕ್ಕೆ ಪಾಲಿಕೆ ನಿರ್ವಹಣೆ ಇದಕ್ಕೆ ಕಾರಣ ಎಂದಲ್ಲ! ಅಲ್ಲಿ ಫಲಕವಿರುವ ಆವರಣದಲ್ಲಿ ಮರದ ನೆರಳು ಇರುವುದೇ ಇದಕ್ಕೆ ಕಾರಣವೆಂದು ಅಲ್ಲಿ ನೋಡಿದ ಯಾರೂ ಬೇಕಾದರೂ ಹೇಳಬಹುದು.

ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿಯ ಈ ಕಟ್ಟಡದ ಮಾಹಿತಿ ಫಲಕ ಹೊರತಾಗಿ ಮೈಸೂರಿನ ಹೃದಯ ಭಾಗದಲ್ಲಿರುವ ಹಲವು ಪಾರಂಪರಿಕ ಕಟ್ಟಡಗಳ ಫಲಕಗಳಲ್ಲಿ ಮಾಹಿತಿ ಗೋಚರಿಸದೇ ಕೇವಲ ಕಬ್ಬಿಣದ ತಗಡಿನ ರೂಪದಲ್ಲಿ ಪ್ರವಾಸಿಗರಿಗೆ ದರ್ಶನ ನೀಡುತ್ತಿವೆ.

ಮಹಾನಗರ ಪಾಲಿಕೆ ಕಟ್ಟಡದ ಮಾಹಿತಿ ಫಲಕ ಸಂಪೂರ್ಣ ಮಾಸಿ ಹೋಗಿಲ್ಲ. ವೀಕ್ಷಕರು ಓದಿ ಕಟ್ಟದ ಬಗ್ಗೆ ಮಾಹಿತಿ ತಿಳಿದುಕೊಳ್ಳಬಹುದು. ಆದರೆ ಇನ್ನು ಕೆಲವು ದಿನಗಳಲ್ಲಿ ಇಲ್ಲಿರುವ ಮಾಹಿತಿಯೂ ಮಾಸಿ ಹೋಗುವ ಸ್ಥಿತಿಯಿದೆ. 'ನಗರ ಸಭೆ ಕಚೇರಿ ಉಪಯೋಗಕ್ಕಾಗಿ 1921ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಈ ಕಟ್ಟಡ ನಿರ್ಮಿಸಿದರು' ಎಂಬಿತ್ಯಾದಿ ಮಾಹಿತಿ ಈ ಫಲಕದಿಂದ ಲಭ್ಯವಾಗಲಿದೆ.

ಕೃಷ್ಣ ವಿಲಾಸ ರಸ್ತೆಯಲ್ಲಿರುವ ಪಾರಂಪರಿಕ ಕಟ್ಟಡದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಕಾರ್ಯನಿರ್ವಹಿಸುತ್ತಿದ್ದು, ಈ ಕಟ್ಟಡದ ಫಲಕದ ಮಾಹಿತಿ ಮಾಸಿ ಹೋಗಿದೆ. ಅಂಬಲ್ ನರಸಿಂಹ ಅಯ್ಯಂಗಾರ್ ಅವರ ಪ್ರಯತ್ನದ ಫಲವಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ನಿರ್ಮಾಣ ಗೊಂಡ ಶಾಲೆಯ ಕಟ್ಟಡದಲ್ಲೀಗ ಮಹಾರಾಣಿ ಪಿಯು ಕಾಲೇಜು ಹಾಗೂ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರ ಕಚೇರಿ ಕಾರ್ಯನಿರ್ವಹಿಸುತ್ತಿವೆ. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಅಂದು ನಿರ್ಮಿಸಿದ ಮಹತ್ವದ ಇತಿಹಾಸ ಸಾರಬೇಕಿದ್ದ ಈ ಕಟ್ಟಡದ ಫಲಕವೂ ಕಳೆಗುಂದಿ ಹೋಗಿದೆ.

ಕಾಡಾ ಕಚೇರಿ ಕಟ್ಟಡದ ಫಲಕದಲ್ಲಿ ಬಿಟ್ಟ ಕಣ್ಣು ಬಿಟ್ಟಂತೆ ನೋಡಿದರೆ ಅಲ್ಲೊಂದು ಇಲ್ಲೊಂದು ಅಕ್ಷರಗಳು ಮಾತ್ರವೇ ಕಾಣಿಸುತ್ತವೆ. ಇದರ ಹೊರತಾಗಿ ಬೇರೆನೂ ಮಾಹಿತಿಯು ಸಿಗುವುದಿಲ್ಲ. ಪುರಭವನದ ಆವರಣದಲ್ಲಿ ಅಳವಡಿಸಿರುವ ಫಲಕವನ್ನು ಎಲ್ಲಿದೆ ಎಂದು ಹುಡುಕುವಂತಹ ಸ್ಥಳದಲ್ಲಿ ಅಳವಡಿಸಲಾಗಿದೆ. ಇನ್ನು ಹುಡುಕಿ ನೋಡಿದರೂ ಅದರಲ್ಲಿಯೂ ಯಾವುದೇ ಮಾಹಿತಿ ಉಳಿದಿಲ್ಲ. ಎಲ್ಲವೂ ಮಾಸಿ ಹೋಗಿ ಎಷ್ಟೋ ದಿನಗಳು ಉರುಳಿವೆ.

ಇನ್ನು ಜೆಎಲ್‌ಬಿ ರಸ್ತೆಯ ಚಾಮುಂಡಿ ಗೆಸ್ಟ್‌ಹೌಸ್ ಕಟ್ಟಡದ್ದು ಇದೇ ಪರಿಸ್ಥಿತಿ. ಸಂಸ್ಕೃತ ಪಾಠಶಾಲಾ ಆವರಣದಲ್ಲಿ ಫಲಕವೇ ಇಲ್ಲ. ಇನ್ನು ಇತರೆ ಪಾರಂಪರಿಕ ಕಟ್ಟಡಗಳ ಮುಂದಿರುವ ಫಲಕಗಳದ್ದೂ ಇದೇ ಪರಿಸ್ಥಿತಿ ಇರುತ್ತದೆ ಎಂಬುದ ಊಹಿಸಲು ಕಷ್ಟವೇನಲ್ಲ. ಇದೊಂದು ರೀತಿಯಲ್ಲಿ ಎಲ್ಲಾ ಪಾರಂಪರಿಕ ಕಟ್ಟಡಗಳ ಮುಂದೆ ಕಬ್ಬಿಣದ ತುಕ್ಕು ಹಿಡಿದ ತಗಡು ಅಳವಡಿಸಿದಂತೆ ಅಲ್ಲವೇ ಎನ್ನುವಂತಾಗಿದೆ.


ವಾಣಿಜ್ಯ ತೆರಿಗೆ ಇಲಾಖೆ ಕಚೇರಿ ಕಟ್ಟಡದ ಫಲಕ


ಮಹಾರಾಣಿ ಪಿಯು ಕಾಲೇಜು ಕಟ್ಟಡದ ಫಲಕ

ವೈಬ್ರೆಂಟ್ ಸಿಎನ್‌ಎಂ ಪದವಿ ಪೂರ್ವ ಕಾಲೇಜಿಗೆ ಉನ್ನತ ಫಲಿತಾಂಶ

ಮೈಸೂರು ಏ.11- ಮೈಸೂರು ತಾಲೂಕಿನ ಜಯಪುರ ಬಳಿಯ ಚಿಕ್ಕನಹಳ್ಳಿಯಲ್ಲಿರುವ ವೈಬ್ರೆಂಟ್ ಸಿಎನ್‌ಎಂ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಸಾಧನೆ ಮಾಡಿದ್ದಾರೆ.


ನಂದಿನಿ

ಪ್ರಸಕ್ತ ಸಾಲಿನ ವಿಜ್ಞಾನ ವಿಭಾಗದಲ್ಲಿ ನಂದಿನಿ.ಎನ್.ಎಂ 590/600 (ಶೇ.98.33) ಅಂಕಗಳಿಸಿ ರಾಜ್ಯಕ್ಕೆ 10 ನೇ ಸ್ಥಾನ ಪಡೆದಿದ್ದಾರೆ. ಸ್ನೇಹ.ಎಲ್ 586/600, ನಾಗು.ಜಿ 584/600, ಸಾನಿಕ.ಜಿ 584/600, ಅಮೃತ.ಜಿ 582/600, ಭಾಗ್ಯಲಕ್ಷ್ಮಿ.ಎಂ 579/600, ಎಸ್.ಜಿ.ಪ್ರತೀಕ್ಷಾ 578/600, ಮೇಘ 574/600, ಶಮನ.ಎಮ್.ಎಸ್ 573/600, ಯಶಸ್ವಿನಿ.ಆರ್ 573/600, ಮನೋಜ್.ಎ.ಎಲ್ 571/600, ಸಂಜನ.ಕೆ.ಎಸ್ 571/600, ವೈಷ್ಣವಿ.ಎನ್ 571/600 ಸೇರಿ 63 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಹಾಗೂ 47 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.11- ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಬೆಂಗಳೂರಿನ ಸೌಂದರ್ಯ ಸಂಯುಕ್ತ ಪದವಿಪೂರ್ವ ಕಾಲೇಜು ವಿದ್ಯಾರ್ಥಿ ಬಿ.ಆರ್.ಇಶನ್, 600ಕ್ಕೆ 591 (ಶೇ.98.50) ಅಂಕ ಗಳಿಸಿ, ರಾಜ್ಯಕ್ಕೆ 9ನೇ ರ‍್ಯಾಂಕ್ ಪಡೆಯುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಕರ್ನಾಟಕ ಲೋಕಾಯುಕ್ತ ಚೀಫ್ ಇಂಜಿನಿಯರ್, ಮಂಡ್ಯ ಮೂಲದ ಬಿ.ವಿ.ರಮೇಶ್ ಹಾಗೂ ಕೆ.ಬಿ.ಪುಷ್ಪಲತಾ ಅವರ ಪುತ್ರನಾಗಿದ್ದು, ಕನ್ನಡ ವಿಷಯದಲ್ಲಿ 98, ಇಂಗ್ಲಿಷ್ 97, ಭೌತಶಾಸ್ತ್ರ 99, ರಾಸಾಯನ ಶಾಸ್ತ್ರ 98, ಗಣಿತ 99 ಹಾಗೂ ಕಂಪ್ಯೂಟರ್ ಸೈನ್ಸ್ 100 ಅಂಕ ಗಳಿಸಿದ್ದಾರೆ.

ಕೆಎನ್‌ಸಿ ಇನ್ನೋವೇಟಿವ್ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ

ಮೈಸೂರು ಏ.11- ನಗರದ ಹೆಬ್ಬಾಳ್‌ನಲ್ಲಿರುವ ಕೆಎನ್‌ಸಿ ಇನ್ನೋವೇಟಿವ್ ಪಿಯು ಕಾಲೇಜು 2026 ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದೆ. ಒಟ್ಟು 261 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 57 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 163 ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿದ್ದಾರೆ.

ಪ್ರಸಕ್ತ ಸಾಲಿನ ವಿಜ್ಞಾನ ವಿಭಾಗ : ಭವ್ಯ ಡಗಾ 582/600 (ಶೇ.97), ಗ್ರೀಷ್ಮಾ.ವಿ 580/600, ಶರಣ್ಯ.ಕೆ.ಎಂ 580/600, ಸೌಂದರ್ಯ.ಬಿ.ಎಸ್ 580/600, ಸಂಪ್ರೀತಾ.ಆರ್ 578/600

ವಾಣಿಜ್ಯ ವಿಭಾಗ: ಋಷಿ ಭಾರದ್ವಾಜ್ 579/600 (ಶೇ.96.5), ಸೋನು.ಎಸ್.576/600, ಕುಸುಮ.ಎಂ 563/600, ಪಿ.ಎಸ್.ಪ್ರತೀಕ್ಷಾ 546/600, ಶ್ರೇಯಸ್‌ರಾಜ್‌ಗೌಡ 542 ಅಂಕಗಳಿಸಿ ಅತ್ಯುನ್ನತ ಶೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಜಯಲಕ್ಷ್ಮೀಪುರಂನ ಸೇಂಟ್ ಜೋಸೆಫ್ ಪಿಯು ಕಾಲೇಜಿಗೆ ಶೇ.99 ರಷ್ಟು ಫಲಿತಾಂಶ

ಮೈಸೂರು ಏ.11-ನಗರದ ಜಯಲಕ್ಷ್ಮೀ ಪುರಂನಲ್ಲಿರುವ ಸೇಂಟ್ ಜೋಸೆಫ್ ಪಿಯು ಕಾಲೇಜು 2026ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ99 ರಷ್ಟು ಫಲಿತಾಂಶ ಪಡೆದು ಅತ್ಯುತ್ತಮ ಸಾಧನೆ ಮಾಡಿದೆ.



ಪ್ರಸಕ್ತ ಸಾಲಿನಲ್ಲಿ ವಾಣಿಜ್ಯ ವಿಭಾಗದಲ್ಲಿ ಸಹನಾ.ಎಂ 594 ಅಂಕಗಳಿಸಿ ರಾಜ್ಯಕ್ಕೆ 7 ನೇ ಸ್ಥಾನ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಸಹನಾ.ಬಿ.ಎಲ್. 567/600, ಕಲಾ ವಿಭಾಗದಲ್ಲಿ ಅಲೀಮಾ ಐಫಾ 581/600 ಅಂಕ ಗಳಿಸಿದ್ದಾರೆ.

ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿಗೆ ಶೇ.99 ರಷ್ಟು ಫಲಿತಾಂಶ

ಮೈಸೂರು ಏ.11- ನಗರದ ಮಾನಸಗಂಗೋತ್ರಿಯ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿರುವ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು 2026 ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.99 ರಷ್ಟು ಫಲಿತಾಂಶ ಪಡೆದಿದೆ.

ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿ ಅಂಕಿತಾ.ಎಂ.ಎನ್. 583/600 (ಪ್ರಥಮ), ವೈಷ್ಣವಿ 576/600, ಅಭಿಶೇಕ್ .ಪಿ 572/600, ನಂದನ್. ಆರ್ 563/600, ನಿಸರ್ಗ.ಎಂ.ಎನ್562/600 ಅಂಕಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಜೀನಿಯಸ್ ಕಾಲೇಜ್‌ಗೆ ಉತ್ತಮ ಫಲಿತಾಂಶ


ಶ್ವೇತಲ್

ಮೈಸೂರು, ಏ.11(ಎಂಟಿವೈ)- ಮೈಸೂರು- ಬನ್ನೂರು ರಸ್ತೆಯ ದೇವೇಗೌಡ ವೃತ್ತದಲ್ಲಿರುವ ಜೀನಿಯಸ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಶ್ವೇತಲ್ ಲೊಂಡೆ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 587 ಅಂಕ ಪಡೆದಿದ್ದಾರೆ. ಅಲ್ಲದೆ, ಕಾಲೇಜಿನ ಮೊಹಮ್ಮದ ಹಮ್ದದ್ ಮತ್ತು ಹೆಚ್.ಎಂ. ಶ್ರೀಯಾ 517 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಪರೀಕ್ಷೆಯಲ್ಲಿ ಕಾಲೇಜಿನ ಮೂವರು ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 16 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಸುರೇಖಾ ಪ್ರಭು ತಿಳಿಸಿದ್ದಾರೆ.

ಪರಿಸರ ಸ್ನೇಹಿ ಮೈಸೂರಿಗಾಗಿ ಚಿಣ್ಣರ ಹೆಜ್ಜೆ ಪರಿಸರ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ


ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಆರ್‌ಎಲ್‌ಹೆಚ್‌ಪಿ ಸಂಸ್ಥೆಯ ಆಯೋಜಿಸಿದ್ದ 'ಪರಿಸರ ಸ್ನೇಹಿ ಮೈಸೂರಿಗಾಗಿ ಚಿಣ್ಣರ ಹೆಜ್ಜೆ' ಜಾಗೃತಿ ಕಾರ್ಯಕ್ರಮಕ್ಕೆ ಪರಿಸರವಾದಿ ಪ್ರೊಯು. ಎನ್. ರವಿಕುಮಾರ್ ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿದರು.

ಮೈಸೂರು, ಏ.11(ಎಂಟಿವೈ)- ಪರಿಸರ ಸಂರಕ್ಷಣೆಯಲ್ಲಿ ಮಕ್ಕಳು ಮತ್ತು ಯುವಜನರು ಮುಂಚೂಣಿಯಲ್ಲಿದ್ದರೆ ಮಾತ್ರ ಪರಿಣಾಮಕಾರಿ ಬದಲಾವಣೆ ಸಾಧ್ಯ ಎಂದು ಪರಿಸರವಾದಿ ಪ್ರೊ.ಯು. ಎನ್. ರವಿಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಆರ್‌ಎಲ್‌ಹೆಚ್‌ಪಿ ಸಂಸ್ಥೆಯ ಆಯೋಜಿಸಿದ್ದ 'ಪರಿಸರ ಸ್ನೇಹಿ ಮೈಸೂರಿಗಾಗಿ ಚಿಣ್ಣರ ಹೆಜ್ಜೆ' ಪರಿಸರ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪರಿಸರದ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿವೆ. ಪರಿಸರಕ್ಕೆ ಹಾನಿ ಮಾಡುವಲ್ಲಿ ಮಾನವನ ಪಾತ್ರ ಹೆಚ್ಚಾಗಿದೆ. ಪರಿಸರ ಸಂರಕ್ಷಣೆ ಕೇವಲ ಮಾತಿಗೆ ಮಾತ್ರ ಸೀಮಿತವಾಗದೆ ನಿತ್ಯ ಜೀವನದಲ್ಲಿ ಪರಿಸರ ಸ್ನೇಹಿ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ. ಪ್ರತಿಯೊಬ್ಬರೂ ಕನಿಷ್ಠ ಐದು ಗಿಡಗಳನ್ನು ನೆಟ್ಟರೆ ಅದು ಒಂದು ಕಾಡಿನ ನಿರ್ಮಾಣಕ್ಕೆ ಕಾರಣವಾಗಬಹುದು ಎಂದರು.

'ಪರಿಸರಕ್ಕಾಗಿ ನಾವು' ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಮಾತನಾಡಿ, ಪ್ಲಾಸ್ಟಿಕ್ ಅತಿಯಾದ ಬಳಕೆ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಎಲ್ಲರೂ ಬಟ್ಟೆಯ ಚೀಲಗಳನ್ನು ಬಳಸಬೇಕು. ಮನೆಯಿಂದಲೇ ನೀರಿನ ಬಾಟಲ್ ತೆಗೆದುಕೊಂಡು ಹೋಗುವ ಅಭ್ಯಾಸ ಬೆಳೆಸಿಕೊಳ್ಳಬೇಕು. ತಾವು ಮಾತ್ರ ಜಾಗೃತರಾಗುವುದಕ್ಕಿಂತ ಇತರರಲ್ಲಿಯೂ ಅರಿವು ಮೂಡಿಸುವುದು ಮುಖ್ಯ ಎಂದು ಅಭಿಪ್ರಾಯಪಟ್ಟರು.

ಇದಕ್ಕೂ ಮುನ್ನ ಆರ್‌ಎಲ್‌ಹೆಚ್‌ಪಿ ಸಂಸ್ಥೆಯ ನಿರ್ದೇಶಕರಾದ ಸರಸ್ವತಿ ಮಾತನಾಡಿ, ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ(ಆರ್‌ಎಲ್‌ಹೆಚ್‌ಪಿ) ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯಾಗಿದ್ದು, ಕಳೆದ 40 ವರ್ಷಗಳಿಂದ ಮಕ್ಕಳಾಭಿವೃದ್ಧಿ, ಯುವ ಜನರ ಸಬಲೀಕರಣ, ಮಹಿಳಾಭಿವೃದ್ಧಿ ಹಾಗೂ ಸಮುದಾಯ ಆರೋಗ್ಯ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ. ಮೈಸೂರು, ಗುಂಡ್ಲುಪೇಟೆ, ಗುಲ್ಬರ್ಗ ಮತ್ತು ಬೀದರ್‌ನಲ್ಲೂ 40 ಯುವಕರ ಗುಂಪುಗಳನ್ನು ರಚಿಸಿದ್ದು, ರಾಜ್ಯ ಮಟ್ಟದಲ್ಲಿ 'ಕರ್ನಾಟಕ ರಾಜ್ಯ ಯೂತ್ ನೆಟ್ವರ್ಕ್' ನಿರ್ಮಿಸಿದೆ. ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಸಾವಯವ ಗೊಬ್ಬರ ಬಳಕೆ, ಪ್ಲಾಸ್ಟಿಕ್ ನಿಷೇಧ, ಘನತ್ಯಾಜ್ಯ ನಿರ್ವಹಣೆ, ಜಾಗತಿಕ ತಾಪಮಾನ ಮತ್ತು ಪ್ರಕೃತಿ ವಿಕೋಪಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಗಳನ್ನು ವಿವಿಧ ಇಲಾಖೆಗಳ ಸಹಯೋಗದಲ್ಲಿ ನಡೆಸುತ್ತಿದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಮಕ್ಕಳಿಗಾಗಿ ಪರಿಸರ ಜಾಗೃತಿ ಕಾರ್ಯಕ್ರಮ ಹಾಗೂ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ವಿವಿಧ ಗ್ರಾಮಗಳು ಮತ್ತು ಜಿಲ್ಲೆಗಳಿಂದ 200ಕ್ಕೂ ಹೆಚ್ಚು ಮಕ್ಕಳು ಮತ್ತು ಯುವಜನರು ಭಾಗವಹಿಸಿದರು.

ಬಿಟಿಎಲ್ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಸಾಧನೆ


ಶೆಹ್ನಾಜ್ ರಾಬಿಯಾ ಸಾಕಿಬ್ ನೂರ್ ಆಯಿಷಾ ಹಿಬಾ ಎರಮ್

ಹಸ್ನೇನ್ ಮೊ. ಅದ್ನಾನ್ ಅರ್ಬಾ ಶೆರಿಫ್ ಅಫ್ರೀನ್ ತಾಜ್

ಮೈಸೂರು, ಏ.11-ಕೆಸರೆಯ ಬಿಟಿಎಲ್ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಕಳೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮೆರೆದಿದ್ದಾರೆ.

ಶೆಹ್ನಾಜ್ ಬೇಗಂ-600ಕ್ಕೆ 508, ರಾಬಿಯಾ ಬಸ್ರಿ-600ಕ್ಕೆ 507, ಸಾಕಿಬ್ ಪಾಷಾ-600ಕ್ಕೆ 448, ನೂರ್ ಆಯಿಷಾ 600ಕ್ಕೆ 423, ಹಿಬಾ ಎರಮ್-600ಕ್ಕೆ 394, ಹಸ್ನೇನ್ ಖಾನ್-600ಕ್ಕೆ 391, ಮೊಹಮ್ಮದ್ ಅದ್ನಾನ್-600ಕ್ಕೆ 383, ಅರ್ಬಾ ಶೆರಿಫ್-600ಕ್ಕೆ 369 ಹಾಗೂ ಅಫ್ರೀನ್ ತಾಜ್-600ಕ್ಕೆ 366 ಅಂಕ ಗಳಿಸಿದ್ದಾರೆ. ಕಾಲೇಜಿನ ಅಧ್ಯಕ್ಷೆ ಶ್ರೀಮತಿ ಅಪೂರ್ವ ಲಕ್ಷ್ಮಣ, ವಿದ್ಯಾರ್ಥಿಗಳ ಸಾಧನೆಯನ್ನು ಕೊಂಡಾಡಿ ಅಭಿನಂದಿಸಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.11(ಎಂಟಿವೈ)- ಮೈಸೂರಿನ ಮಹದೇವಪುರ ಬಡಾವಣೆಯಲ್ಲಿರುವ ಸಿಎನ್‌ಎಂ ವೈಬ್ರೆಂಟ್ ಪಿಯು ಕಾಲೇಜಿನ ವಿದ್ಯಾರ್ಥಿನಿ ಯಶಸ್ವಿನಿ ಆರ್. ಅವರು ವಿಜ್ಞಾನ ವಿಭಾಗದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಅವರು 600ಕ್ಕೆ 573 ಅಂಕ (95.50%) ಪಡೆಯುವ ಮೂಲಕ ಸಾಧನೆ ಮೆರೆದಿದ್ದಾರೆ. ಇವರು ಹಿರಿಯ ಪುಟ ವಿನ್ಯಾಸಗಾರ ಜಿ.ಎ. ರಮೇಶ್ ಹಾಗೂ ಕಲ್ಪ ಎಂ.ವಿ. ದಂಪತಿ ಪುತ್ರಿ.

ಪ್ರಖ್ಯಾತ್ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು,ಏ.11- ಕುವೆಂಪುನಗರದ ಎಂಎಎಸ್‌ವಿಎಸ್ ಗುರುಕುಲ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಕೆ.ಎಸ್.ಪ್ರಖ್ಯಾತ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.93 (558) ಅಂಕದೊಂದಿಗೆ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಈತ ಬಿಜೆಪಿ ಹಿರಿಯ ಮುಖಂಡ ಎಂ.ಎನ್.ಸತ್ಯಾನಂದ ವಿಟ್ಟು ಹಾಗೂ ಕಮಲಾಕ್ಷಿ ಎಸ್.ವಿಟ್ಟು ಅವರ ಪುತ್ರ

ಶಾಸಕ ಕೆ.ಹರೀಶ್‌ಗೌಡ ನೇತೃತ್ವದಲ್ಲಿ

ಲೋಕನಾಯಕನಗರ ವಾರ್ಡ್ 4ರ ಕಾಂಗ್ರೆಸ್‌ಗೆ ಪದಾಧಿಕಾರಿಗಳ ಆಯ್ಕೆ

ಮೈಸೂರು,ಏ.11(ಪಿಎಂ)- ಚಾಮರಾಜ ವಿಧಾನಸಭಾ ಕ್ಷೇತ್ರದ ಲೋಕನಾಯಕನಗರ ವಾರ್ಡ್ 4ರ ಕಾಂಗ್ರೆಸ್‌ಗೆ ಪದಾಧಿಕಾರಿಗಳನ್ನು ಶನಿವಾರ ಆಯ್ಕೆ ಮಾಡಲಾಯಿತು.


ಶಾಸಕ ಕೆ.ಹರೀಶ್‌ಗೌಡ ಅವರ ನೇತೃತ್ವದಲ್ಲಿ ಲೋಕನಾಯಕನಗರ ವಾರ್ಡ್ 4ರ ಕಾಂಗ್ರೆಸ್‌ಗೆ ಪದಾಧಿಕಾರಿಗಳನ್ನು ಶನಿವಾರ ಆಯ್ಕೆ ಮಾಡಲಾಯಿತು.

ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಹರೀಶ್ ಗೌಡ ಅವರ ನೇತೃತ್ವ ಹಾಗೂ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಅಧ್ಯಕ್ಷತೆಯಲ್ಲಿ ನಡೆದ ಈ ಪ್ರಕ್ರಿಯೆಯಲ್ಲಿ ಅಧ್ಯಕ್ಷರಾಗಿ ಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಜಯರಾಮೇಗೌಡ, ಉಪಾಧ್ಯಕ್ಷರಾಗಿ ಕಾಲೋನಿ ಶ್ರೀನಿವಾಸ ಅವರನ್ನು ಆಯ್ಕೆ ಮಾಡಲಾಯಿತು.

ಇದೇ ವೇಳೆ ಮಾತನಾಡಿದ ಕೆ.ಹರೀಶ್ ಗೌಡ, ಪಕ್ಷದ ಸಂಘಟನೆಯಲ್ಲಿ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಪಾತ್ರ ಮಹತ್ವದ್ದಾಗಿದೆ. ಇದುವರೆಗೆ ಅಧ್ಯಕ್ಷ ರಾಗಿ ಕೆಲಸ ಮಾಡಿದ ಕೇಬಲ್ ನಾಗಣ್ಣ ನವರಿಗೆ ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಥವಾ ಬ್ಲಾಕ್ ಕಾಂಗ್ರೆಸ್ ಸಮಿತಿಯಲ್ಲಿ ಸ್ಥಾನಮಾನ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಪ್ರತಿಯೊಂದು ವಾರ್ಡಿನಲ್ಲೂ ವಾರ್ಡ್ ಸಮಿತಿ, ಬೂತ್ ಸಮಿತಿ ಸೇರಿದಂತೆ ವಿವಿಧ ಸಮಿತಿಗಳು ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಆ ಮೂಲಕ ಮುಂಬರುವ ವಿವಿಧ ಚುನಾವಣೆಗಳಲ್ಲಿ ಪಕ್ಷದ ಗೆಲುವಿಗೆ ಶ್ರಮಿಸಬೇಕು. ಪಕ್ಷದಲ್ಲಿ ವಾರ್ಡ್ ಅಧ್ಯಕ್ಷ ಸ್ಥಾನ ಅತ್ಯಂತ ಜವಾಬ್ದಾರಿ ಹೊಂದಿದೆ. ಪಕ್ಷದಲ್ಲಿ ಯಾವುದೇ ಶಾಸಕರು ವಾರ್ಡ್‌ಗಳಿಗೆ ಭೇಟಿ ನೀಡುವ ಮುನ್ನ ಆಯಾ ವಾರ್ಡ್ ಅಧ್ಯಕ್ಷರಿಗೆ ಮಾಹಿತಿ ನೀಡುವ ಪರಿಪಾಠ ಇದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಹ ವಾರ್ಡ್ ಮತ್ತು ಬ್ಲಾಕ್ ಅಧ್ಯಕ್ಷರಾಗಿ ಪಕ್ಷಕ್ಕಾಗಿ ದುಡಿದು ಇಂದು ಪಕ್ಷ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ. ಹಾಗಾಗಿ ಪಕ್ಷದಲ್ಲಿ ನೀಡುವ ಸ್ಥಾನಮಾನದ ಮಹತ್ವವನ್ನು ಅರಿಯಬೇಕು ಎಂದು ಹೇಳಿದರು.

ಪಾಲಿಕೆ ಮಾಜಿ ಸದಸ್ಯ ಶ್ರೀನಿವಾಸ್ ಮಾತನಾಡಿ, ಶಾಸಕರು ನಮ್ಮ ಲೋಕನಾಯಕನಗರದ ಎಲ್ಲಾ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ಒದಗಿಸಿಕೊಟ್ಟಿದ್ದಾರೆ. ಅಲ್ಲದೆ, ಇಡೀ ಕ್ಷೇತ್ರದ ಅಭಿವೃದ್ಧಿಗೆ ಅವರು ಶ್ರಮಿಸುತ್ತಿದ್ದಾರೆ ಎಂದರು. ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಮಾತನಾಡಿ, ಕಾರ್ಯಕರ್ತರು, ಪದಾಧಿಕಾರಿಗಳು ಪಕ್ಷದ ಸಂಘಟನೆಗೆ ಹೆಚ್ಚು ಸಮಯ ನೀಡಬೇಕು ಎಂದು ತಿಳಿಸಿದರು. ಪಕ್ಷದ ಮುಖಂಡ ರಾದ ಕೇಬಲ್ ನಾಗರಾಜು, ಕೇಬಲ್ ಮಹೇಶ್, ಸುಪ್ರೀಂ ಮಂಜು, ಯುವ ಕಾಂಗ್ರೆಸ್ ದಿನೇಶ್ ಮತ್ತಿತರರು ಹಾಜರಿದ್ದರು.

ಏ.15ರಿಂದ ಮಕ್ಕಳಿಗಾಗಿ ಚೂಟಿ ಚೂಟಿ ಚುಟುಕ್ ಗುಳಂ ಗುಟಕ್ ಕಾರ್ಯಕ್ರಮ

ಮೈಸೂರು, ಏ.11- 92ನೇ ವರ್ಷದ ಸಂಭ್ರಮದಲ್ಲಿರುವ ಮೈಸೂರು ಆಕಾಶವಾಣಿ ಕೇಂದ್ರವು ಏ.15ರಿಂದ ಪ್ರತಿ ದಿನ ಬೆಳಗ್ಗೆ 8.30ಕ್ಕೆ ಮತ್ತು ಸಂಜೆ 5.30ಕ್ಕೆ ಚೂಟಿ ಚೂಟಿ ಚುಟುಕ್ ಗುಳುಂ ಗುಟಕ್ ಶಿಶು ಗೀತೆಗಳ ಕಾರ್ಯಕ್ರಮ ಪ್ರಸಾರ ಮಾಡಲಿದೆ. ಪರಿಕಲ್ಪನೆ : ಕೇಂದ್ರ ಬಾಲಸಾಹಿತ್ಯ ಪುರಸ್ಕಾರಕ್ಕೆ ಭಾಜನರಾಗಿದ್ದ ಡಾ. ಆನಂದ್ ವಿ. ಪಾಟೀಲ್. ನಿರ್ಮಾಣ : ಜಿ.ಶಾಂತಕುಮಾರ್. ಪ್ರಸ್ತುತಿ : ಉಷಾಲತಾ .ಎಸ್ ಅವರದು.

ಎನ್.ಆರ್ ಕ್ಷೇತ್ರದ ಗ್ಯಾರಂಟಿ ಕಚೇರಿ ನಾಳೆ ಉದ್ಘಾಟನೆ

ಮೈಸೂರು.ಏ.11- ಮೈಸೂರು ಮಹಾನಗರ ಪಾಲಿಕೆ, ವಲಯ ಕಚೇರಿ 9ರ ಕಟ್ಟಡದಲ್ಲಿ ನರಸಿಂಹರಾಜ ಕ್ಷೇತ್ರ ಗ್ಯಾರಂಟಿಗಳ ಅನುಷ್ಠಾನ ಸಮಿತಿಯ ಕಚೇರಿ ಉದ್ಘಾಟನಾ ಕಾರ್ಯಕ್ರಮವನ್ನು ಏ.13, ಸೋಮವಾರ, ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಕಚೇರಿ ಉದ್ಘಾಟನೆಯನ್ನು ನರಸಿಂಹರಾಜ ಕ್ಷೇತ್ರದ ಶಾಸಕರೂ, ಮಾಜಿ ಸಚಿವ ತನ್ವೀರ್ ಸೇಠ್ ನೆರವೇರಿಸಲಿದ್ದಾರೆ.

ತಂತ್ರಜ್ಞಾನ ಬಳಸಿ, ಕುಲಕಸುಬ ಉದ್ಯಮವಾಗಿ ಬೆಳೆಸಿ

ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನಮೂರ್ತಿ ಸಲಹೆ

ಮಂಡ್ಯ, ಏ.11– ವಿಶ್ವಕರ್ಮ ಸಮುದಾಯದವರು ತಂತ್ರಜ್ಞಾನ ಬಳಕೆ ಮೂಲಕ ತಮ್ಮ ಕುಲಕಸುಬನ್ನು ಉದ್ಯಮವಾಗಿ ಬೆಳೆಸಬೇಕು ಎಂದು ರಾಜ್ಯ ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನಮೂರ್ತಿ ಸಲಹೆ ನೀಡಿದರು.

ನಗರದ ಗಾಂಧಿಭವನದಲ್ಲಿ ಜಿಲ್ಲಾ ಭುವನ ವಿಶ್ವಕರ್ಮ ಸಮಾಜದ ವತಿಯಿಂದ ಆಯೋಜಿಸಿದ್ದ ಸಂಘಟನೆಯ ಕಚೇರಿ ಉದ್ಘಾಟನೆ, ತಾಲೂಕು ಪದಾಧಿಕಾರಿಗಳ ಪದಗ್ರಹಣ ಹಾಗೂ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರವು ಅಭಿವೃದ್ಧಿ ನಿಗಮಕ್ಕೆ 50 ಕೋಟಿ ರೂ. ನೀಡಿದೆ ಇಂಜಿನಿಯರಿಂಗ್, ವೈದ್ಯಕೀಯ ಅಥವಾ ವಿದೇಶದಲ್ಲಿ ವ್ಯಾಸಂಗ ಮಾಡುವ ಸಮುದಾಯದ ವಿದ್ಯಾರ್ಥಿಗಳು 2ರಿಂದ 10ಲಕ್ಷ ರೂ.ವರೆಗೆ ಶೈಕ್ಷಣಿಕ ಸಾಲ ಪಡೆಯಬಹುದು. ವಿಶ್ವಕರ್ಮ ವೃತ್ತಿಗೆ ಉತ್ತೇಜನ ನೀಡುವ ಹಲವು ಯೋಜನೆಗಳಿದ್ದು, ಅರ್ಹರು ಸದುಪಯೋಗಪಡಿಸಿಕೊಳ್ಳಬೇಕು. ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಮೀಸಲಿಟ್ಟಿರುವ ಅನುದಾನದಲ್ಲಿ ವಿಶ್ವಕರ್ಮ ಸಮುದಾಯ ಪಾಲು ಬಂದೇ ಬರುತ್ತದೆ ಎಂದು ತಿಳಿಸಿದರು.



ಜಿಲ್ಲಾ ಭುವನ ವಿಶ್ವಕರ್ಮ ಸಮಾಜ ಆಯೋಜಿಸಿದ್ದ ಪದಾಧಿಕಾರಿಗಳ ಪದಗ್ರಹಣ ಹಾಗೂ ಅಭಿನಂದನಾ ಸಮಾರಂಭದಲ್ಲಿ ಸಮಾಜದ ಹಿರಿಯ ಮುಖಂಡ ಎನ್.ಬಸವರಾಜು ಅವರನ್ನು ಅಭಿನಂದಿಸಲಾಯಿತು.

ಸಾಮಾಜಿಕ ಜೀವನಕ್ಕೆ ಪೂರಕವಾದ ವಿಶ್ವಕರ್ಮ ಸಮಾಜದ ಪಂಚ ಕಸುಬುಗಳು, ಪಾರಂಪರಿಕ ಹಿನ್ನೆಲೆಯನ್ನು ಒಳಗೊಂಡಿವೆ. ಆದಾಗ್ಯೂ ಆಧುನಿಕತೆಗೆ ತಕ್ಕಂತೆ ತಂತ್ರಜ್ಞಾನ, ಕಂಪ್ಯೂಟರ್ ಡಿಸೈನ್‌ಗಳ ಸಹಕಾರದ ಮೂಲಕ ಕಸುಬನ್ನು ಉದ್ಯಮವಾಗಿ ಪರಿವರ್ತಿಸಲು ಪ್ರಯತ್ನಿಸಬೇಕು. ಪರಸ್ಪರ ಸಹಕಾರದೊಂದಿಗೆ ಆರ್ಥಿಕ ಪ್ರಗತಿ ಸಾಧಿಸಬೇಕು. ಉದ್ಯಮಗಳನ್ನು ಸ್ಥಾಪಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಭುವನ ವಿಶ್ವಕರ್ಮ ಸಮಾಜದ ಅಧ್ಯಕ್ಷ ಎನ್.ಬಸವರಾಜು ಮಾತನಾಡಿ, ಒಗ್ಗಟ್ಟಿದ್ದರೆ ವಿಶ್ವಕರ್ಮ ಸಮುದಾಯ ಎಲ್ಲವನ್ನು ಸಾಧಿಸಬಹುದು. ಮುಖ್ಯವಾಗಿ ಸಮುದಾಯ ರಾಜಕೀಯ ಶಕ್ತಿ ಬೆಳೆಸಿಕೊಳ್ಳಬೇಕು. ಸಮುದಾಯದ ಅಭಿವೃದ್ಧಿಗೆ ಒಮ್ಮತದಿಂದ ಶ್ರಮಿಸಬೇಕು. ಮುಂದಿನ ದಿನಗಳಲ್ಲಿ ಸಮುದಾಯವನ್ನು ಸಂಘಟಿಸಿ, ಶೈಕ್ಷಣಿಕ, ಸಾಮಾಜಿಕ ಮತ್ತು ರಾಜಕೀಯ, ಆರ್ಥಿಕವಾಗಿ ಪ್ರಗತಿ ಸಾಧಿಸಲು ಯೋಜನೆಗಳನ್ನು ರೂಪಿಸೋಣ. ಇದಕ್ಕೆ ಪ್ರತಿಯೊಬ್ಬರ ಸಹಕಾರ ಅಗತ್ಯ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಭುವನ ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷ ಬೇವಿನಹಳ್ಳಿ ಬಿ.ವಿ.ಸೋಮು, ನಿವೃತ್ತ ಮುಖ್ಯಶಿಕ್ಷಕ ಅರಕೇಶ್ವರ, ಉಪಾಧ್ಯಕ್ಷ ಅನಿಲ್‌ಕುಮಾರ್, ಕಾರ್ಯದರ್ಶಿ ಕಟ್ಟೆ ಕೃಷ್ಣಸ್ವಾಮಿ, ಖಜಾಂಚಿ ಶ್ರೀನಿವಾಸ, ಗೋವಿಂದರಾಜು, ಈರಣ್ಣ, ಸೇರಿದಂತೆ ನಿರ್ದೇಶಕರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಮೈಕ್ರೋ ಫೈನಾನ್ಸ್ ಹಾವಳಿ ತಡೆಗೆ ಆಗ್ರಹಿಸಿ ಪ್ರತಿಭಟನೆ



ಮೈಕ್ರೋ ಫೈನಾನ್ಸ್‌ಗಳ ಹಾವಳಿ ತಡೆಗೆ ಆಗ್ರಹಿಸಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಮತ್ತು ಕರ್ನಾಟಕ ರಾಜ್ಯ ರೈತ ಸಂಘ ಭಾರತೀನಗರದಲ್ಲಿ ಪ್ರತಿಭಟನೆ ನಡೆಸಿದವು.

ಭಾರತಿನಗರ,ಏ.11–ದಿನೇ–ದಿನೆ ಹೆಚ್ಚುತ್ತಿರುವ ಮೈಕ್ರೋ ಫೈನಾನ್ಸ್‌ಗಳ ಹಾವಳಿಯನ್ನು ಸರ್ಕಾರ ಮಟ್ಟ ಹಾಕಬೇಕೆಂದು ಒತ್ತಾಯಿಸಿ, ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಮತ್ತು ಕರ್ನಾಟಕ ರಾಜ್ಯ ರೈತ ಸಂಘ ಭಾರತೀನಗರದಲ್ಲಿ ಪ್ರತಿಭಟನೆ ನಡೆಸಿದರು.

ಹಲಗೂರು ವೃತ್ತದಲ್ಲಿ ಜಮಾಯಿಸಿದ್ದ ಸಂಘಟನೆಗಳ ಕಾರ್ಯಕರ್ತರು, ಸರ್ಕಾರ ಮತ್ತು ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿ, ಪ್ರತಿಭಟಿಸಿದರು.

ಈ ವೇಳೆ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಜಿಲ್ಲಾಧ್ಯಕ್ಷ ವಿ.ಸಿ.ಉಮಾಶಂಕರ ಮಾತನಾಡಿ, ಮೈಕ್ರೋ ಫೈನಾನ್ಸ್‌ಗಳು ವಾಹನ ಸಾಲ, ಗೃಹ ಸಾಲ, ಮತ್ತು ವಾಣಿಜ್ಯ ವ್ಯಾಪಾರಗಳಿಗೆ ಸಾಲ ನೀಡಿದ ನಂತರ ವಿವಿಧ ಬಡ್ಡಿ ವಿಧಿಸಿ, ಸಾಲ ಪಡೆದವರನ್ನು ಹಿಂಸಿಸುತ್ತಿವೆ. ಮನೆಗಳ ಬಳಿ ಗಲಾಟೆ ಮಾಡಿ, ಕಿರುಕುಳ ನೀಡಿ ನಂತರ ನ್ಯಾಯಾಲಯದಲ್ಲಿ ದಾವೆ ಹೂಡಿ, ಮನೆಯನ್ನೂ ಹರಾಜು ಮಾಡುವ ಮೂಲಕ ಬೀದಿಪಾಲು ಮಾಡುತ್ತಿವೆ. ಅದೆಷ್ಟೋ ಕುಟುಂಬಗಳು ಮನನೊಂದು ಗ್ರಾಮಗಳನ್ನೇ ತೊರೆದಿವೆ. ಆದ್ದರಿಂದ ಇದಕ್ಕೆಲ್ಲಾ ಕಡಿವಾಣ ಹಾಕಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ರೈತ ಮುಖಂಡ ರಾಮಲಿಂಗಯ್ಯ ಮಾತನಾಡಿ, ಕೃಷಿ ಚಟುವಟಿಕೆ ವೇಳೆ ಏನಾದರೂ ಅವಘಡ ಸಂಭವಿಸಿದರೆ ರೈತ ಸಂಜೀವಿನಿ ಕಾರ್ಯಕ್ರಮದಡಿ ನೀಡುವ ಒಂದು ಲಕ್ಷ ರೂ. ಪರಿಹಾರವನ್ನು 5 ಲಕ್ಷ ರೂ.ಗೆ ಹೆಚ್ಚಿಸಬೇಕೆಂದು ಇದೇ ವೇಳೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಕೆ.ಜಿ.ಉಮೇಶ್, ಮಲ್ಲೇಶ್, ಪುಟ್ಟಸ್ವಾಮಿ, ಬಿಳಿಯಪ್ಪ, ತಮ್ಮಯ್ಯ, ಮರಿಲಿಂಗು, ಕಸ್ತೂರಿ ಕರ್ನಾಟಕ ಜನಪರ ವೇದಿಕೆ ತಾಲೂಕು ಪ್ರಧಾನ ಕಾರ್ಯದರ್ಶಿ ಸೋಂಪುರ ಉಮೇಶ್, ಯುವ ಘಟಕದ ಅಧ್ಯಕ್ಷ ವಿಶ್ವಾಸ್, ಕಾರ್ಯದರ್ಶಿ ಗಗನಗೌಡ, ಗೌರವಾಧ್ಯಕ್ಷ ಪಟೇಲ್ ಹರೀಶ್, ಎಸ್.ಎಲ್. ಉಮೇಶ್, ವಿ.ಪಿ.ವರದರಾಜು ಮತ್ತಿತರರು ಪಾಲ್ಗೊಂಡಿದ್ದರು.

ಮಾದಾಪುರದಲ್ಲಿ ರಾಮಸ್ಮರಣೆ

ಕಿಕ್ಕೇರಿ, ಏ.11– ವಿಪ್ರ ವೃಂದ ಅಸೋಸಿಯೇಷನ್ ವತಿಯಿಂದ ಮಾದಾಪುರ ಗ್ರಾಮದಲ್ಲಿ ಶ್ರೀ ರಾಮ ಪಟ್ಟಾಭಿಷೇಕ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮದಲ್ಲಿ ರಾಮನಾಮ ಪಾರಾಯಣ, ರಾಮತಾರಕ ನಾಮ ಪಠಣೆ, ಉಪನ್ಯಾಸ, ಪಂಚಾಮೃತ ಅಭಿಷೇಕ, ಮಂಗಳ ದ್ರವ್ಯಗಳಿಂದ ಆರಾಧನೆ, ಮಹಿಳೆಯರಿಂದ ಭಜನೆ, ಕೀರ್ತನೆ, ಧೂಪ, ದೀಪ ಪೂಜೆ, ನಿತ್ಯ ಪೂಜೆ, ಅಷ್ಟಾವಧಾನ ಸೇವೆ, ಪಂಚಾಮೃತ ಅಭಿಷೇಕ, ನೈವೇದ್ಯ ಸಮರ್ಪಣೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಸೇರಿದಂತೆ ಸರ್ವ ಪೂಜಾ ಕೈಂಕರ್ಯಗಳಿಗೆ ಅಪಾರ ಭಕ್ತರು ಸಾಕ್ಷಿಯಾದರು. ಇದೇ ವೇಳೆ ಪಟ್ಟಾಭಿರಾಮದೇವರ ಫೋಟೋವನ್ನು ಸುಗಂಧ ಪುಷ್ಪಗಳಿಂದ ಅಲಂಕರಿಸಿ, ಮಂಗಳವಾದ್ಯ ಸಹಿತ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.



ಮಾದಾಪುರದಲ್ಲಿ ವಿಪ್ರವೃಂದ ಅಸೋಸಿಯೇಷನ್ ವತಿಯಿಂದ ಶನಿವಾರ ರಾಮ ಪಟ್ಟಾಭಿಷೇಕ ಕಾರ್ಯಕ್ರಮ ಜರುಗಿತು.

ಸೇವಾರ್ಥದಾರರಾದ ಸರೋಜಮ್ಮ ನಾಗಪ್ಪ ಕುಟುಂಬದ ಸಹಕಾರದೊಂದಿಗೆ ವಿಪ್ರವೃಂದ ಅಸೋಸಿಯೇಷನ್ ಅಚ್ಚುಕಟ್ಟಾಗಿ ಕಾರ್ಯಕ್ರಮ ನಡೆಸಿ, ಭಕ್ತರಿಗೆ ಅನ್ನ ಸಂತರ್ಪಣೆ ಮಾಡಲಾಯಿತು.

ಮಹಿಳೆಯರು ಸ್ವಾವಲಂಬಿಗಳಾದರೆ ಕುಟುಂಬಕ್ಕೆ ಶಕ್ತಿ

ಮಂಡ್ಯ, ಏ.11– ಮಹಿಳೆಯರು ಸ್ವಾವಲಂಬಿಗಳಾದರೆ ಸಮಾಜದ ಆರ್ಥಿಕ ಪ್ರಗತಿಗೆ ಸಹಕಾರಿ ಎಂದು ಶಾಸಕ ಪಿ.ರವಿಕುಮಾರ್‌ಗೌಡ ಹೇಳಿದರು.

ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ವತಿಯಿಂದ ತಾಲೂಕಿನ ಕೆರಗೋಡು ಗ್ರಾಮದಲ್ಲಿ ಆಯೋಜಿಸಿದ್ದ ಸ್ತ್ರೀ ಸಂಭ್ರಮ ಹಾಗೂ ವಿವಿಧ ಸ್ಪರ್ಧೆಗಳ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕುಟುಂಬದ ಜವಾಬ್ದಾರಿ ಮರೆತು ಕೆಲ ಪುರುಷರು ಮದ್ಯಪಾನ, ಜೂಜು ಇನ್ನಿತರ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರು ಆರ್ಥಿಕವಾಗಿ ಸದೃಢರಾಗುವ ನಿಟ್ಟಿನಲ್ಲಿ ಮುಂದುವರೆಯುವುದು ಅವಶ್ಯ ಎಂದರು.

ಮಹಿಳೆಯರನ್ನು ಸ್ವಾವಲಂಬಿಯಾಗಿಸುವ ದೊಡ್ಡಮಟ್ಟದ ಕಾರ್ಯಕ್ರಮ ರೂಪಿಸಲಾಗುತ್ತಿದೆ ಇನ್ನು 2 ತಿಂಗಳಲ್ಲಿ 25 ಸಾವಿರ ಮಹಿಳೆಯರನ್ನು ಒಗ್ಗೂಡಿಸಿ, ಮಂಡ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯಕ್ರಮ ಆಯೋಜಿಸಲಾಗುವುದು. ಆ ಮೂಲಕ ಮಹಿಳೆಯರ ಸ್ವ–ಉದ್ಯೋಗಕ್ಕೆ ಉತ್ತೇಜನ ನೀಡಿ, ಶಕ್ತಿ ತುಂಬಲಾಗುವುದು ಎಂದು ತಿಳಿಸಿದರು.



ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಬಳಿಕ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಶುಭದಾನಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಮಹಿಳಾ ಸಬಲೀಕರಣದೊಂದಿಗೆ ಅವರ ಆರ್ಥಿಕ ಪ್ರಗತಿಗೆ ಆದ್ಯತೆ ನೀಡಿದೆ. ಪ್ರತಿ ಮನೆಯ ಯಜಮಾನಿಗೆ ಮಾಸಿಕ 2000 ರೂ., ಎಲ್ಲಾ ಮಹಿಳೆಯರಿಗೂ ಉಚಿತ ಸಾರಿಗೆ ಸೌಲಭ್ಯ ಸೇರಿದಂತೆ ಸರ್ಕಾರದ ಪಂಚ ಗ್ಯಾರಂಟಿ ಕಾರ್ಯಕ್ರಮಗಳ ಮೂಲಕ ಸ್ತ್ರೀ ಸಬಲೀಕರಣಕ್ಕೆ ಒತ್ತಾಸೆಯಾಗಿದೆ. ಈ ಕಾರ್ಯಕ್ರಮಗಳ ಜೊತೆಗೆ ಅಭಿವೃದ್ಧಿ ಕಾರ್ಯಗಳೂ ಆಗುತ್ತಿವೆ ಎಂದರು.

ಸ್ಥಳೀಯ ಕಾಂಗ್ರೆಸ್ ಮುಖಂಡ ವಸಂತ ಕುಮಾರ್ ಮಾತನಾಡಿ, ಕೆರಗೋಡು ಹೋಬಳಿ ಅಭಿವೃದ್ಧಿಗಾಗಿ ಶಾಸಕರು ಸುಮಾರು 1,100 ಕೋಟಿ ರೂ. ಅನುದಾನ ತಂದಿದ್ದಾರೆ. ರಸ್ತೆ, ಚರಂಡಿ, ನಾಲೆ, ಕೆರೆ ಅಭಿವೃದ್ಧಿ ಕಾಮಗಾರಿ ನಡೆಸಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಬದ್ಧತೆ ಇರುವ ಶಾಸಕರು, ಮುಂದಿನ ದಿನಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಲಿ ಎಂಬುದು ಜನರ ಆಶಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸ್ಥಳೀಯ ಮುಖಂಡರಾದ ಪ್ರಶಾಂತ್‌ಬಾಬು, ವಿಜಯಲಕ್ಷ್ಮಿ ರಘುನಂದನ್, ಶಿವನಾಗರಾಜ ಶೈಲೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ವಿಜೃಂಭಣೆಯ ಶ್ರೀ ಲಕ್ಷ್ಮೀದೇವಿ ಬ್ರಹ್ಮ ರಥೋತ್ಸವ

ಕೆ.ಆರ್.ಪೇಟೆ: ತಾಲೂಕಿನ ಕಸಬಾ ಹೋಬಳಿಯ ಅಗ್ರಹಾರಬಾಚಹಳ್ಳಿಯಲ್ಲಿ ಗ್ರಾಮದೇವತೆ ಶ್ರೀ ಲಕ್ಷ್ಮೀದೇವಿ(ಬಾಚಳ್ಳಮ್ಮ) ಅಮ್ಮನವರ ಬ್ರಹ್ಮ ರಥೋತ್ಸವ ಸಡಗರ ಸಂಭ್ರಮದಿಂದ ಜರುಗಿತು.

ಐದು ಅಂತಸ್ತಿನ ರಥವನ್ನು ಭಗವಾಧ್ವಜಗಳು, ಬಣ್ಣ ಬಣ್ಣದ ವಸ್ತ್ರಗಳು ಹಾಗೂ ಬಗೆ ಬಗೆಯ ಹೂವುಗಳಿಂದ ಸಿಂಗರಿಸಲಾಗಿತ್ತು. ರಥದ ತುತ್ತ ತುದಿಯಲ್ಲಿ ಪ್ರತಿಷ್ಠಾಪಿಸಲಾಗಿದ್ದ ಕಂಚಿನ ಕಳಶವು ಎಲ್ಲರ ಗಮನ ಸೆಳೆಯಿತು. ಗ್ರಾಮದ ಯಜಮಾನರು ರಥಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ಶ್ರೀ ಲಕ್ಷ್ಮೀದೇವಿ ಅಮ್ಮನವರನ್ನು ಪ್ರತಿಷ್ಠಾಪಿಸಿದ್ದ ಸುಮಾರು 40 ಅಡಿ ಎತ್ತರದ ಸರ್ವಾಲಂಕಾರದ ರಥವನ್ನು ಭಕ್ತಾದಿಗಳು ಶ್ರದ್ಧಾಭಕ್ತಿಯಿಂದ ಎಳೆದರು. ಈ ವೇಳೆ ಶ್ರೀ ಲಕ್ಷ್ಮೀದೇವಮ್ಮನಿಗೆ ಉಘೇ... ಉಘೇ... ಶ್ರೀ ಬಾಚಳ್ಳಮ್ಮನಿಗೆ ಉಘೇ... ಉಘೇ... ಘೋಷಣೆ ಮುಗಿಲು ಮುಟ್ಟಿತ್ತು. ರಥದ ಕಳಶಕ್ಕೆ ಹಣ್ಣು–ಜವನ ಎಸೆಯುವ ಮೂಲಕ ದೇವಿಯ ಕೃಪಾಶೀರ್ವಾದ ಬೇಡಿದರು.

ತಮಟೆ ಮತ್ತು ಮಂಗಳವಾದ್ಯದ ಸದ್ದಿನೊಂದಿಗೆ ಅರಳೀಕಟ್ಟೆ ಬಳಿಯಿಂದ ಆರಂಭವಾದ ಅಮ್ಮನವರ ರಥೋತ್ಸವ, ದೇವಾಲಯ ಹಾಗೂ ಸರ್ಕಾರಿ ಶಾಲೆ ಹಿಂಭಾಗದ ಬೀದಿಗಳು, ಹೊಲ–ಗದ್ದೆ ಬಯಲಿನ ಮೂಲಕ ಬ್ರಾಹ್ಮಣರ ಬೀದಿ, ರಂಗದ ಬೀದಿಯಲ್ಲಿ ಸಾಗಿ ರಂಗಸ್ಥಳದಲ್ಲಿ ಸಂಪನ್ನಗೊಂಡಿತು.



ಅಗ್ರಹಾರಬಾಚಹಳ್ಳಿ ಗ್ರಾಮದೇವತೆ ಶ್ರೀ ಲಕ್ಷ್ಮೀದೇವಿ(ಬಾಚಳ್ಳಮ್ಮ) ಅಮ್ಮನವರ ಬ್ರಹ್ಮ ರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ತಾಲೂಕಿನ ಅಗ್ರಹಾರಬಾಚಹಳ್ಳಿ, ಚಿಕ್ಕೋಸಹಳ್ಳಿ, ಹರಿರಾಯನಹಳ್ಳಿ, ಮಡುವಿನಕೋಡಿ, ಬೇಲದಕೆರೆ, ಚಿಲ್ಲದಹಳ್ಳಿ, ನಗರೂರು, ಮಾರ್ಗೋನಹಳ್ಳಿ, ಪಿರಿಯಾಪಟ್ಟಣ, ದಡಿಘಟ್ಟ, ಕೆ.ಆರ್.ಪೇಟೆ, ಮೆಣಸ, ಬೊಮ್ಮನಾಯಕನಹಳ್ಳಿ ಸೇರಿದಂತೆ ವಿವಿಧೆಡೆಯಿಂದ ಸಾವಿರಾರು ಭಕ್ತರು ಆಗಮಿಸಿ, ರಥೋತ್ಸವವನ್ನು ಕಣ್ತುಂಬಿಕೊಂಡು ಪುನೀತರಾದರು.

ರಥೋತ್ಸವದ ಅಂಗವಾಗಿ ರಂಗ ಕುಣಿತ, ಹೂವಿನ ತೇರು, ಸಿಡಿ, ಬಾಯಿಬೀಗ, ಕೊಂಡೋತ್ಸವ, ಎಡೆ–ಮಡೆ ಉತ್ಸವ, ಸಿಡಿಮದ್ದು ಪ್ರದರ್ಶನ, ಕಳಸ ಪ್ರದಾನ, ಸೋಮನ ಕುಣಿತ, ಕೋಲಾಟ, ಜಾತ್ರೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ರಥೋತ್ಸವಕ್ಕೆ ಆಗಮಿಸಿದ್ದ ಭಕ್ತರಿಗೆ ಅಗ್ರಹಾರಬಾಚಹಳ್ಳಿ ಗ್ರಾಮದ ಸರ್ಕಾರಿ ನೌಕರರ ಸಂಘದ ವತಿಯಿಂದ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು.

ಒಂದನೇ ಪುಟದಿಂದ

ಭೂಮಿ ಕಬಳಿಸುವವರಿಗೆ ಅನುಕೂಲಕಾರಿ!

ಮಾರುಕಟ್ಟೆ ದರದಲ್ಲಿ ಜಮೀನು ಖರೀದಿಸಲಿ ಎಂದು ಅಭಿಪ್ರಾಯಪಟ್ಟರಲ್ಲದೆ, ರಾಷ್ಟ್ರೋತ್ಥಾನ ಪರಿಷತ್ ಶಾಲೆ ಕಟ್ಟುವ ನೆಪದಲ್ಲಿ ಹತ್ತಾರು ಕೋಟಿ ಬೆಲೆಬಾಳುವ ಭೂಮಿ ಮಂಜೂರಿಗೆ ಅರ್ಜಿ ಸಲ್ಲಿಸುತ್ತದೆ. ಇಂತಹ ಅಕ್ರಮಗಳ ಕುರಿತು ಹಲವು ಲೇಖನಗಳು ಈ ಪುಸ್ತಕದಲ್ಲಿವೆ ಎಂದರು. ಬಿಜೆಪಿ ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ ಭೂ ಕಬಳಿಕೆ ನಡೆಯುತ್ತಿದೆ ಎಂದು ಆಗ ಈಗಿನ ಸಿಎಂ, ಡಿಸಿಎಂ ಬೀದಿಗಿಳಿದು ಹೋರಾಟ ಮಾಡಿದ್ದರು. ಆಗ ಹೋರಾಟ ಮಾಡಿದ್ದವರೇ ಈಗ ಅಧಿಕಾರದಲ್ಲಿದ್ದಾರೆ. ಕಾನೂನು ಬಾಹಿರವಾಗಿ ಹಂಚಿಕೆಯಾದ ನಿವೇಶನಗಳನ್ನು ವಾಪಸ್ಸು ಪಡೆಯುವ ಸಾಹಸ ಮಾಡುತ್ತಿಲ್ಲ. ಮುಂದುವರೆದು ಕಾಂಗ್ರೆಸ್ ಭವನ ಟ್ರಸ್ಟ್ ಹೆಸರಿನಲ್ಲಿ ನೂರಾರು ಕೋಟಿ ಮೌಲ್ಯಗಳನ್ನು ಭೂಮಿ ಮಂಜೂರಾಗುತ್ತಿವೆ. ಕಡಿಮೆ ಬೆಲೆಗೆ ಮಂಜೂರಾಗುತ್ತಿರುವ ಸಿಎ ನಿವೇಶಗಳನ್ನು ಸಿಎಂ, ಡಿಸಿಎಂ ಮಂಜೂರು ಮಾಡಿಸಿದ್ದಾರೆ. ಈ ಅಕ್ರಮದ ವಿರುದ್ಧವೂ ಹಲವು ಲೇಖನಗಳನ್ನು ಪ್ರಕಟಿಸಲಾಗಿದೆ.

ಮತ್ತೊಂದೆಡೆ ಸಂಘರ್ಷಕ್ಕೆ ಸನ್ನದ್ಧ

ಯುಎಇಯ ಫುಜೈರಾ ಬಂದರಿನಿಂದ ಅಮೆರಿಕದ ಬೃಹತ್ ಯುದ್ಧನೌಕೆಯೊಂದು ಹಾರ್ಮುಜ್ ಜಲಸಂಧಿಯತ್ತ ವೇಗವಾಗಿ ನುಗ್ಗಿದ್ದು, ಇದನ್ನು ಗಮನಿಸಿದ ಇರಾನ್ ತಕ್ಷಣ ಎಚ್ಚೆತ್ತುಕೊಂಡಿದೆ. ಈ ಬಗ್ಗೆ ಪಾಕಿಸ್ತಾನದಲ್ಲಿರುವ ಮಧ್ಯಸ್ಥಿಕೆಗಾರರಿಗೆ ಮಾಹಿತಿ ರವಾನಿಸಿದ್ದಲ್ಲದೆ ಅಮೆರಿಕ ಯುದ್ಧನೌಕೆ ಮುಂದೆ ಬಂದರೆ 30 ನಿಮಿಷಗಳಲ್ಲಿ ಹೊಡೆದುರುಳಿಸುತ್ತೇವೆ ಎಂದು ಎಚ್ಚರಿಸಿದೆ. ಬಳಿಕ ಅಮೆರಿಕ ಯುದ್ಧನೌಕೆ ತನ್ನ ಪಥ ಬದಲಿಸಿ, ವಾಪಸ್ಸಾಗಿದೆ.

ದಾಳಿ ಮುಂದುವರೆಸಿದ ಇಸ್ರೇಲ್: ಶಾಂತಿ ಸಭೆ ನಡೆಯುತ್ತಿದ್ದರೆ, ಇದಕ್ಕೂ ನಮಗೂ ಸಂಬಂಧವಿಲ್ಲ ಎಂಬಂತೆ ಇಸ್ರೇಲ್ ಲೆಬನಾನ್ ಮೇಲಿನ ತನ್ನ ದಾಳಿಯನ್ನು ಮುಂದುವರೆಸಿದೆ. ಕಳೆದ ಕೆಲ ಗಂಟೆಗಳಲ್ಲಿ ತನ್ನ ವಾಯುಪಡೆಯು ಲೆಬನಾನ್‌ನಲ್ಲಿರುವ ಇರಾನ್ ಬೆಂಬಲಿತ ಉಗ್ರಗಾಮಿ ಗುಂಪಿನ ಮೂಲಸೌಕರ್ಯವನ್ನು ನಾಶಪಡಿಸಿರುವುದಾಗಿ ಇಸ್ರೇಲ್ ಸೇನೆ ಹೇಳಿಕೊಂಡಿದೆ. ಪಾಕಿಸ್ತಾನದಲ್ಲಿ ಶನಿವಾರ ಪ್ರಾರಂಭವಾದ ಮೂರು ದೇಶಗಳ ಮಾತುಕತೆಯಲ್ಲಿ ಹೆಜ್ಬೊಲ್ಲಾ ಮೇಲೆ ಇಸ್ರೇಲಿ ದಾಳಿಗಳನ್ನು ನಿಲ್ಲಿಸುವಂತೆ ಟೆಹ್ರಾನ್ ಒತ್ತಾಯಿಸುತ್ತಿರುವಾಗಲೇ ಇಸ್ರೇಲ್ ಈ ಹೇಳಿಕೆ ನೀಡಿರುವುದು ಭೀತಿ ಹೆಚ್ಚಿಸಿದೆ.

ಇರಾನ್ ದೊಡ್ಡ ಮಟ್ಟದಲ್ಲಿ ಸೋಲುತ್ತಿದೆ

ಮಾತುಕತೆ ನಡುವೆಯೇ ಟ್ರಂಪ್ ಘೋಷಣೆ

ವಾಷಿಂಗ್‌ಟನ್: ಸಂಘರ್ಷದ ಬಗ್ಗೆ ಪಾಕಿಸ್ತಾನದಲ್ಲಿ ಎರಡೂ ಪಕ್ಷಗಳು ಮಾತುಕತೆ ನಡೆಸುತ್ತಿದ್ದರೂ, ಸಾಮಾಜಿಕ ಜಾಲತಾಣದ ಮೂಲಕ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಹತ್ವದ ಘೋಷಣೆಯನ್ನು ಪ್ರಕಟಿಸಿದ್ದಾರೆ. ಟ್ರಂಪ್ ಅವರು ತಮ್ಮ 'ಟ್ರೂತ್ ಸೋಶಿಯಲ್' ಖಾತೆಯಲ್ಲಿ ಇರಾನ್ ದೊಡ್ಡ ಮಟ್ಟದಲ್ಲಿ ಸೋಲುತ್ತಿದೆ ಎಂದು ಹೇಳುವ ಸಂದೇಶವನ್ನು ಪ್ರಕಟಿಸಿ, ಕುತೂಹಲ ಸೃಷ್ಟಿಸಿದ್ದಾರೆ.

ಇರಾನ್ ಗೆಲ್ಲುತ್ತಿದೆ ಎಂಬಂತೆ ತೋರುವ ಕೆಲವು ಸುದ್ದಿವಾಹಿನಿಗಳ ವರದಿಗಳು ಈ ಪ್ರತಿಕ್ರಿಯೆಗೆ ಕಾರಣವಾಗಿವೆ ಎಂದು ತೋರುತ್ತದೆ. ವಾಸ್ತವದಲ್ಲಿ ಎಲ್ಲರಿಗೂ ಗೊತ್ತಿರುವುದು, ಅವರು ಸೋಲುತ್ತಿದ್ದಾರೆ, ಅದೂ ಭಾರೀ ಸೋಲು! ಎಂದು ಬರೆದಿರುವ ಟ್ರಂಪ್, ಇರಾನ್‌ಗೆ ಈಗ ನೌಕಾಪಡೆ, ವಾಯುಪಡೆ ಅಥವಾ ವಾಯುರಕ್ಷಣಾ ವ್ಯವಸ್ಥೆ ಉಳಿದಿಲ್ಲ ಎಂದು ಹೇಳಿದ್ದಾರೆ. ಅತ್ಯಂತ ಮುಖ್ಯವಾಗಿ, ಅವರ ದೀರ್ಘಕಾಲದ ನಾಯಕರು ಈಗ ನಮ್ಮೊಂದಿಗಿಲ್ಲ. ಇರಾನ್ ಗೆಲ್ಲುತ್ತಿದೆ ಎಂಬ ವರದಿಗಳನ್ನು ಪ್ರಕಟಿಸುವ ಎಲ್ಲಾ ಮಾಧ್ಯಮಗಳನ್ನು ಅವರು ತಮ್ಮ ಪದಪ್ರಯೋಗದಂತೆ ಫೇಕ್ ನ್ಯೂಸ್ ಮೀಡಿಯಾ ಎಂದು ಕರೆದಿದ್ದಾರೆ. ಇತರ ದೇಶಗಳಾದ ಚೀನಾ, ಜಪಾನ್, ಫ್ರಾನ್ಸ್, ಜರ್ಮನಿಗೆ ಧೈರ್ಯವಿಲ್ಲದ ಕಾರಣ ನಾವೇ ಹಾರ್ಮುಜ್ ಜಲಸಂಧಿಯನ್ನು ಮುಕ್ತ ಮಾಡುವ ಪ್ರಕ್ರಿಯೆ ಆರಂಭಿಸಿದ್ದೇವೆ ಎಂದು ತಿಳಿಸಿದ್ದಾರೆ.

ಜಮೀರ್ ಸಚಿವ ಸ್ಥಾನಕ್ಕೆ ಕುತ್ತು?

ದ್ದಾರೆ. ಇನ್ನು ಜಮೀರ್ 'ತಲೆದಂಡ'ವಾಗುವುದು ಬಹುತೇಕ ನಿಶ್ಚಿತ ಎಂಬ ಮಾತುಗಳು ಕೈ ಪಾಳಯದಲ್ಲಿ ಕೇಳಿಬರುತ್ತಿವೆ. ಮತ್ತೊಂದೆಡೆ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಹಾಗೂ ಎಂಎಲ್‌ಸಿ ನಸೀರ್ ಅಹ್ಮದ್ ಅವರಿಗೂ ರಾಜೀನಾಮೆ ನೀಡಲು ಹೈಕಮಾಂಡ್ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಜಬ್ಬಾರ್ ರಾಜೀನಾಮೆ : ವಿವಾದದ ಬೆನ್ನಲ್ಲೇ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ಎಂಎಲ್‌ಸಿ ಆಗಿರುವ ಅಬ್ದುಲ್ ಜಬ್ಬಾರ್ ರಾಜೀನಾಮೆ ಸಲ್ಲಿಸಿದ್ದಾರೆ.

ವರಿಷ್ಠರು ತನ್ನನ್ನು ಸಸ್ಪೆಂಡ್ ಮಾಡುತ್ತಾರೆ ಎಂಬ ಸೂಚನೆ ಸಿಗುತ್ತಿದ್ದಂತೆಯೇ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಮತ್ತು ಎಂಎಲ್‌ಸಿ ಅಬ್ದುಲ್ ಜಬ್ಬಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಸಾಮಾಜಿಕ ನ್ಯಾಯ ಜಪ

ಮರೆಯಲು ಸಾಧ್ಯವಿಲ್ಲ. ಕಾಂಗ್ರೆಸ್ ಪಕ್ಷದ ವಿಶ್ವಾಸ ದ್ರೋಹದಿಂದಲೇ ಜೆಡಿಎಸ್ ಪಕ್ಷ ಎನ್‌ಡಿಎ ಮೈತ್ರಿಕೂಟ ಸೇರುವಂತಾಯಿತು ಎಂದು ಮಾಜಿ ಪ್ರಧಾನಿಗಳು ಹೇಳಿದರು.

ದರಿದ್ರ ನಾರಾಯಣ ರ‍್ಯಾಲಿಗೆ ಸಿದ್ದರಾಮಯ್ಯ ಬರಲಿಲ್ಲ: ನಮ್ಮದು ಕುಟುಂಬ ಪಕ್ಷವಲ್ಲ. ಈ ಪಕ್ಷದಿಂದ ಯಾರು ಯಾರು ಎತ್ತರಕ್ಕೆ ಬೆಳೆದಿದ್ದಾರೆ ಎಂಬುದನ್ನು ನಾನು ಇಲ್ಲಿ ಬಿಡಿಸಿ ಹೇಳುವುದಿಲ್ಲ. ಆದರೆ ಈ ರಾಜ್ಯದಲ್ಲಿ ಸಾಮಾಜಿಕ ನ್ಯಾಯ ಎಂಬುದಕ್ಕೆ ಶಕ್ತಿ ತುಂಬಿದವನು ನಾನು. ಇದರ ಬಗ್ಗೆ ಯಾವುದೇ ವೇದಿಕೆ ಯಲ್ಲಿ ಚರ್ಚೆ ನಡೆಸಲು ನಾನು ಸಿದ್ಧನಿದ್ದೇನೆ. ಒಬ್ಬ ಮುಸ್ಲಿಂ ವ್ಯಕ್ತಿಯನ್ನು ಚುನಾವಣೆಯಲ್ಲಿ ಗೆಲ್ಲಿಸಲು ದರಿದ್ರ ನಾರಾಯಣ ರ‍್ಯಾಲಿ ಮಾಡಿದೆವು ಆ ಸಮಾವೇಶಕ್ಕೆ ಇವತ್ತಿನ ಅಹಿಂದ ನಾಯಕ ಸಿದ್ದರಾಮಯ್ಯ ಬರಲೇ ಇಲ್ಲ. ವೇದಿಕೆ ಕಾರ್ಯಕ್ರಮ ಮುಗಿಯುವ ಕೊನೆ ಹಂತದಲ್ಲಿ ಅವರು ಬಂದರು. ಇದು ಅವರಿಗಿರುವ ಸಾಮಾಜಿಕ ನ್ಯಾಯದ ಕುರಿತ ಬದ್ಧತೆ ಎಂದು ಮಾಜಿ ಪ್ರಧಾನಿ ಗಳು ಕಿಡಿಕಾರಿದರು.

ಇದು ಅತ್ಯಂತ ಕೆಟ್ಟ ಸರ್ಕಾರ: ನನ್ನ 60 ವರ್ಷಗಳ ರಾಜಕೀಯ ಜೀವನದಲ್ಲಿ ಕರ್ನಾಟಕದಲ್ಲಿ ಈಗ ಇರುವಷ್ಟು ಕೆಟ್ಟ ಸರ್ಕಾರವನ್ನು ನಾನೆಂದೂ ನೋಡಿಲ್ಲ. ಆದರೂ ಮುಂದೆಯೂ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಮೆರೆಯುತ್ತಿದ್ದಾರೆ. ಈ ಸರ್ಕಾರದಿಂದ ಜನ ರೋಸಿ ಹೋಗಿದ್ದಾರೆ. ಇವರಿಗೆ ತಕ್ಕ ಪಾಠ ಕಲಿಸಲು ಜನರು ಕಾಯುತ್ತಿದ್ದಾರೆ ಎಂದು ದೇವೇಗೌಡರು ಗುಡುಗಿದರು.

ಕಾಂಗ್ರೆಸ್ ಏನು ಮಾಡಿದೆ ಎನ್ನುವುದನ್ನು ನಾನು ಹೇಳುವುದಿಲ್ಲ. ಆದರೆ ನಾವು ಏನು ಮಾಡಿದ್ದೇವೆ ಎನ್ನುವುದನ್ನು ನಾನು ಒತ್ತಿ ಹೇಳುತ್ತೇನೆ. ಮಹಿಳಾ ಮೀಸಲಾತಿ ಕೊಟ್ಟಿದ್ದು ನಾವು. ಹಿಂದೆ ಲೀಲಾದೇವಿ ಆರ್.ಪ್ರಸಾದ್ ಅವರು ಮಹಿಳಾ ಮೀಸಲು ವಿಷಯವನ್ನು ಎಲ್ಲಾ ಪಕ್ಷಗಳ ಪ್ರಣಾಳಿಕೆಯಲ್ಲಿ ಅಳವಡಿಸಲು ಮನವಿ ಮಾಡಿದ್ದರು. ಬೇರೆ ಯಾವ ಪಕ್ಷವೂ ಮಾಡಲಿಲ್ಲ. ನಾವು ಅದನ್ನು ಮಾಡಿದ್ದೇವೆ. ಸ್ವತಃ ನಾನೇ ಪ್ರಧಾನಿಯಾಗಿ ಸಂಸತ್ತಿನಲ್ಲಿ ಚರ್ಚೆ ಮಾಡಿದ್ದೇನೆ. ಆಗಲೇ ಮಹಿಳಾ ಮೀಸಲು ವಿಧೇಕವನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು. ಅದು ರಾಜ್ಯಸಭೆಯಲ್ಲಿ ಅಂಗೀಕಾರವಾಗಿ ಲೋಕಸಭೆಯಲ್ಲಿ ಬಿದ್ದುಹೋಯಿತು. ಅದಾದ 30 ವರ್ಷಗಳಿಗೆ ಪ್ರಧಾನಿ ಮೋದಿ ಅವರು ಸಾಧಿಸಿ ತೋರಿಸಿದ್ದಾರೆ ಎಂದು ದೇವೇಗೌಡರು ಹೇಳಿದರು.

ಮತ್ತೆ ಮಹಿಳಾ ಮೀಸಲಾತಿಯ ಬಗ್ಗೆ ಚರ್ಚಿಸಲು ಮೋದಿಯವರು ಮೂರು ದಿನಗಳ ಕಾಲ ಸಂಸತ್ತಿನ ವಿಶೇಷ ಅಧಿವೇಶನ ಕರೆದಿದ್ದಾರೆ. ನಾನು ಸಂತೋಷದಿಂದ ಕಲಾಪದಲ್ಲಿ ಭಾಗವಹಿಸುತ್ತೇನೆ.

ಗಂಡ–ಹೆಂಡತಿ ಜಗಳವನ್ನ ದಿನವಿಡೀ ತೋರುವುದು ತರವೇ?

- ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಕರ್ತರಲ್ಲಿ ಪ್ರಶ್ನೆ
- 40ನೇ ಪತ್ರಕರ್ತರ ರಾಜ್ಯ ಸಮ್ಮೇಳನಕ್ಕೆ ಚಾಲನೆ

ಬೆಂಗಳೂರು,ಏ.11(ಕೆಎಂಶಿ)–ಗಂಡ–ಹೆಂಡತಿ ಜಗಳವನ್ನು ಇಡೀ ದಿನ ತೋರಿಸಿದರೆ ಅದರಿಂದ ಸಮಾಜಕ್ಕೆ ಏನು ಪ್ರಯೋಜನ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಕರ್ತರನ್ನು ಪ್ರಶ್ನಿಸಿದ್ದಾರೆ.

40ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಊಹಾ ಪತ್ರಿಕೋದ್ಯಮ ಅತ್ಯಂತ ಅಪಾಯಕಾರಿಯಾದದ್ದು. ಕ್ಷುಲ್ಲಕ ವಿಚಾರವನ್ನು ದಿನವಿಡೀ ತೋರಿಸುವವರು, ಅದರ ಪರಿಣಾಮದ ಬಗ್ಗೆಯೂ ಯೋಚಿಸಬೇಕು. ಗಂಡ–ಹೆಂಡತಿ ಜಗಳವನ್ನು ಇಡೀ ದಿನ ತೋರಿಸಿದರೆ ಅದರಿಂದ ಸಮಾಜಕ್ಕೆ ಏನು ಪ್ರಯೋಜನ ಎಂದರು.

ಡಾ.ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧಿ ಇಬ್ಬರೂ ಪತ್ರಕರ್ತರಾಗಿ ಧ್ವನಿ ಇಲ್ಲದವರ ಧ್ವನಿಯಾಗಿದ್ದರು. ಸಮಾಜದಲ್ಲಿರುವ ನ್ಯೂನತೆಗಳನ್ನು ಹೋಗಲಾಡಿಸಿ ಸಮಾಜವನ್ನು ಕಟ್ಟುವ ಕಾಯಕವನ್ನು ಬಸವಾದಿ ಶರಣರು ಮಾಡಿದ್ದರು, ಶರಣರ ಆಶಯದ ಸಮಸಮಾಜ ಆಗದಿದ್ದರೆ, ಅಸಮಾನತೆ ಮುಂದುವರೆಯುತ್ತದೆ. ಮುಂದುವರೆಯಲಿ ಎನ್ನುವುದು ಪಟ್ಟಭದ್ರರ ಹಿತಾಸಕ್ತಿಯಾಗಿದೆ. ಬಸವಣ್ಣ ತಿರಸ್ಕರಿಸಿದ್ದ ಕರ್ಮಸಿದ್ಧಾಂತ ಪಾಲಿಸುವವರು ಈಗ ಹೆಚ್ಚಾಗಿದ್ದಾರೆ. ಈ ಮೌಢ್ಯ ಆಚರಿಸುವವರೆಲ್ಲಾ ವಿದ್ಯಾವಂತರೇ ಎನ್ನುವುದು ಬೇಸರದ ಸಂಗತಿ ಎಂದರು.



40ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಉದ್ಘಾಟಿಸಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ಕೆಲಸ ಮಾಡುತ್ತಿದ್ದೇವೆಯೇ ಎಂಬ ಕುರಿತು ಪತ್ರಕರ್ತರು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ವೈಚಾರಿಕತೆಯ ವೈಜ್ಞಾನಿಕ ಶಿಕ್ಷಣ ಪದ್ಧತಿ ಅಗತ್ಯವಿದೆ. ಯಾವ ದೇವರೂ ಯಾರನ್ನೂ ಕೂಡ ಅವಿದ್ಯಾವಂತನಾಗು, ಕೆಳಜಾತಿಯಲ್ಲೇ ಹುಟ್ಟು ಎಂದು ಬಯಸುವುದಿಲ್ಲ. ಈ ಅರಿವನ್ನು ಜನರಲ್ಲಿ ಹೆಚ್ಚಿಸುವ ಕೆಲಸ ಪತ್ರಕರ್ತರಿಂದ ಆಗಬೇಕು. ಪತ್ರಕರ್ತರು ಕೇವಲ ಮಾಹಿತಿ ಕೊಡುವವರಾಗದೆ, ಸಮಾಜ ಸುಧಾರಣೆಗೂ ಒತ್ತು ನೀಡಬೇಕು. ಡಾ.ಅಂಬೇಡ್ಕರ್ ಆಶಯದಂತೆ ಎಲ್ಲರಿಗೂ ಆರ್ಥಿಕ, ಸಾಮಾಜಿಕ ಶಕ್ತಿ ಕೊಡುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ 2013ರಲ್ಲೂ ಮಾಡಿತ್ತು, ಈಗಲೂ ಮುಂದುವರೆಸಿದ್ದೇವೆ. ನಾವು ಬಡವರ ಪರವಾದ ಯೂನಿವರ್ಸಲ್ ಬೇಸಿಕ್ ಇನ್‌ಕಂ ಆರ್ಥಿಕತೆ ಪಾಲಿಸುತ್ತಿದ್ದೇವೆ. ಇದನ್ನು ಪತ್ರಕರ್ತರು ಅರ್ಥ ಮಾಡಿಕೊಳ್ಳಬೇಕು. ಜಾತಿ ಸಮಾಜ ಚಲನೆ ಇಲ್ಲದ್ದು, ಸಮಾಜವನ್ನು ಚಲನಶೀಲಗೊಳಿಸಲು ವಸ್ತುನಿಷ್ಠ ವೃತ್ತಿಪರತೆಯನ್ನು ಪತ್ರಕರ್ತರು ಪಾಲಿಸಬೇಕು. ಕೆಲವು ಒಳ್ಳೆಯ ಪತ್ರಕರ್ತರೂ ಇದ್ದಾರೆ. ಆದರೆ ಬಹಳಷ್ಟು ಮಾಧ್ಯಮ ಸಂಸ್ಥೆಗಳು ಕಾರ್ಪೊರೇಟ್ ಹಿಡಿತಕ್ಕೆ ಒಳಪಟ್ಟಿವೆ. ಪತ್ರಕರ್ತರು ಸತ್ಯ ಬರೆದರೂ ಕೆಲವೊಮ್ಮೆ ಸಂಪಾದಕರು, ಮಾಲೀಕರ ಒತ್ತಡಕ್ಕೆ ಮಣಿದು ಬದಲಾಯಿಸಿಬಿಡುತ್ತಾರೆ. ನಾನು ಮಂತ್ರಿಯಾಗಿ 40 ವರ್ಷ ಆಯ್ತು, ನಮ್ಮ ಸರ್ಕಾರದ ಪರವಾಗಿ ಬರೆಯಿರಿ ಎಂಬುದಾಗಿ ಇವತ್ತಿನವರೆಗೂ ಯಾರನ್ನೂ ಕೇಳಿಲ್ಲ ಎಂದರು. ಜನಸಾಮಾನ್ಯರು ಇನ್ನೂ ಪತ್ರಿಕೆಗಳ ಮೇಲೆ ನಂಬಿಕೆ ಇಟ್ಟಿದ್ದಾರೆ. ನಾನೂ ಸಹ ನಂಬಿಕೆ ಇಟ್ಟಿದ್ದೇನೆ ಎಂದರು.

ಏ.21ರಿಂದ ಐತಿಹಾಸಿಕ ಪ್ರಸಿದ್ಧ ಮೈಸೂರು ಕರಗ ಉತ್ಸವ

ಮೈಸೂರು, ಏ.11(ಎಸ್‌ಪಿಎನ್)– ಮೈಸೂರು ಇಟ್ಟಿಗೆಗೂಡಿನ ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್ ವತಿಯಿಂದ ಏ.21ರಿಂದ 26ರವರೆಗೆ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರಿಗೆ ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿದ್ದು, ಏ.25ರಂದು ಶನಿವಾರ ರಾತ್ರಿ 8 ಗಂಟೆಗೆ ಐತಿಹಾಸಿಕ ಪ್ರಸಿದ್ಧ ಮೈಸೂರು ಕರಗ ಧಾರ್ಮಿಕ ವಿಧಿ–ವಿಧಾನದೊಂದಿಗೆ ಆರಂಭವಾಗಲಿದೆ.

ಏ.21ರಂದು ಮಂಗಳವಾರ ಬೆಳಗ್ಗೆ 6 ಗಂಟೆ ಪ್ರಾತಃಕಾಲದಲ್ಲಿ ಪ್ರಥಮ ಅಭಿಷೇಕವನ್ನು ನೆರವೇರಿಸಿ, ಊರಿನ ನಾಲ್ಕು ದಿಕ್ಕಿನಲ್ಲೂ ಕಂಕಣ ಕಟ್ಟಲಾಗುವುದು. ನಂತರ ಇಟ್ಟಿಗೆಗೂಡಿನ ನಾಗಲಕ್ಷ್ಮಿ ದೇವಸ್ಥಾನದಿಂದ ಹಾಲಿನ ಕೊಡವನ್ನು ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ತಂದು ಭಕ್ತಾದಿಗಳಿಂದಲೇ ದೇವರಿಗೆ ಹಾಲಿನ ಅಭಿಷೇಕ ನಡೆಯಲಿದೆ.

ಬಳಿಕ ಚಾಮುಂಡಿಬೆಟ್ಟಕ್ಕೆ ತೆರಳಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗವನ್ನು ಧಾರ್ಮಿಕ ವಿಧಿ–ವಿಧಾನ ನೆರವೇರಿಸಿ, ಮೆರವಣಿಗೆ ಮೂಲಕ ಇಟ್ಟಿಗೆಗೂಡಿನ ದೇವಸ್ಥಾನಕ್ಕೆ ತರಲಾಗುವುದು. ಮಧ್ಯಾಹ್ನದ ನಂತರ ಶ್ರೀ ಕೋಟೆ ಮಾರಿಯಮ್ಮನವರ ದೇವಸ್ಥಾನಕ್ಕೆ ತೆರಳಿ ಶ್ರೀ ಶಕ್ತಿ ಮತ್ತು ಕೋಟೆ ಶ್ರೀ ಮಾರಿಯಮ್ಮನವರ ಕರಗವನ್ನು ಮೆರವಣಿಗೆ ಮೂಲಕ ತಂದು ವಾಡಿಕೆಯಂತೆ ಪ್ರಥಮ ಪೂಜೆಯನ್ನು ದೇವಿಯ ತವರು ಮನೆಯಾದ ಮಡಿವಾಳರ ಮನೆಯಲ್ಲಿ ಸ್ವೀಕರಿಸಿ, ದೇವಸ್ಥಾನಕ್ಕೆ ತರಲಾಗುವುದು. ಮಂಗಳವಾರದಿಂದ ಶನಿವಾರದವರೆಗೆ ಇಟ್ಟಿಗೆಗೂಡಿನ ಎಲ್ಲಾ ಬೀದಿಗಳಲ್ಲಿ ಉತ್ಸವ ವಿಜೃಂಭಣೆಯಿಂದ ನೆರವೇರಲಿದೆ ಎಂದು ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್‌ನ ಪರವಾಗಿ ಜಿ.ಹರೀಶ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.25ರಂದು ಶನಿವಾರ ರಾತ್ರಿ 8 ಗಂಟೆಗೆ ನಗರ ಪ್ರದಕ್ಷಿಣೆಗಾಗಿ ದೇವಸ್ಥಾನದಿಂದ ಹೊರಟು ರಾತ್ರಿ 10ಕ್ಕೆ ಪ್ಯಾಲೇಸ್ ರಸ್ತೆ, 11ಕ್ಕೆ ನೂರಡಿ ರಸ್ತೆ, 12 ಗಂಟೆಗೆ ನಾರಾಯಣ ಶಾಸ್ತ್ರಿ ರಸ್ತೆ, 1 ಗಂಟೆಗೆ ನಲ್ಲಪ್ಪ ಠಾಣಾ ರಸ್ತೆ, ಶಿವರಾಂಪೇಟೆ, ಸಯ್ಯಾಜೀರಾವ್ ರಸ್ತೆ, 2 ಗಂಟೆಗೆ ಯಲ್ಲಾಂಭ ದೇವಸ್ಥಾನ, ಮಿಷನ್ ಆಸ್ಪತ್ರೆ ರಸ್ತೆ, ಕಬೀರ್ ರಸ್ತೆ, 3 ಗಂಟೆಗೆ ಕಾಳಮ್ಮ ಗುಡಿ ರಸ್ತೆ, ಮುಂಜಾನೆ 4ಕ್ಕೆ ಕುರುಬಗೇರಿ, ಕುಂಬಾರಗೇರಿ, ಬೆಳಗ್ಗೆ 5ಕ್ಕೆ ಅಶೋಕ ರಸ್ತೆ, 6ಕ್ಕೆ ನಜರ್‌ಬಾದ್, 8ಕ್ಕೆ ಮೃಗಾಲಯ ರಸ್ತೆ ಮಾರ್ಗವಾಗಿ ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಸಾಗಲಿದೆ.



ಮೈಸೂರು ಕರಗ ಮೆರವಣಿಗೆಯಲ್ಲಿ ಪೂಜಾ ಕುಣಿತ, ಕರಗಾಟ್ಟಂ, ದೊಣ್ಣೆ ವರಸೆ, ಬ್ಯಾಂಡ್ ಸೆಟ್, ಚನ್ನಪಣ್ಣಟ ತಮಟೆ, ಕಂಸಾಳೆ, ಕೊಂಬು, ಕಹಳೆ ಗಾರುಡಿ ಗೊಂಬೆ ಸೇರಿದಂತೆ ಜಾನಪದ ಕಲಾತಂಡಗಳು ಸಾಥ್ ನೀಡಲಿವೆ. ಅಂದು (ಭಾನುವಾರ) ಮಧ್ಯಾಹ್ನ ಓಕುಳಿ ಆಟ, ಅಂಬಲಿ ಪೂಜೆ, ತೊಂಬಿಟ್ಟು ಆರತಿ, ಉಯ್ಯಾಲೋತ್ಸವ ನಡೆಯಲಿವೆ. ಮರುದಿನ (ಸೋಮವಾರ) ಪ್ರಾತಃಕಾಲದಲ್ಲಿ ಕರಗವನ್ನು ಶ್ರೀರಂಗಪಟ್ಟಣ ಪಶ್ಚಿಮವಾಹಿನಿ ಯಲ್ಲಿ ವಿಸರ್ಜಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಕರಗ ಮಹೋತ್ಸವದಲ್ಲಿ ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷರೂ ಆದ ವಿಧಾನ ಪರಿಷತ್ ಮಾಜಿ ಸದಸ್ಯರಾದ ಸಂದೇಶ್ ನಾಗರಾಜು, ಉಪಾಧ್ಯಕ್ಷ ಪಿ.ನೀಲಕಂಠು, ಪ್ರಧಾನ ಕಾರ್ಯದರ್ಶಿ ಸಿ.ಶಿವಪ್ರಕಾಶ್, ಕಾರ್ಯದರ್ಶಿ ವಿ.ಸುಂದರ್, ಖಜಾಂಚಿ ಎಲ್.ಶಾಂಭವಮೂರ್ತಿ, ಜಂಟಿ ಕಾರ್ಯದರ್ಶಿ ಜಿ.ಹರೀಶ್‌ಕುಮಾರ್, ಕಾರ್ಯಕಾರಿಣಿ ಸದಸ್ಯರಾದ ಹೇಮು, ಚಿಕ್ಕಲಿಂಗಯ್ಯ, ಶ್ರೀಕಂಠಸ್ವಾಮಿ, ಎಂ.ಮಂಜು, ಪ್ರಧಾನ ಅರ್ಚಕ ಸುಬ್ರಹ್ಮಣ್ಯ ದೀಕ್ಷಿತ್, ಶ್ರೀಹರಿದೀಕ್ಷಿತ್, ನಾರಾಯಣ, ಬಾಬು, ಕಾರ್ತಿಕ್, ವ್ಯವಸ್ಥಾಪಕ ಕೆ.ನಾಗರಾಜು ಉಪಸ್ಥಿತರಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಮೊ:95352–80830 ಮೂಲಕ ಸಂಪರ್ಕಿಸಬಹುದು.

ರಾಮಕೃಷ್ಣ ವಿದ್ಯಾಕೇಂದ್ರಕ್ಕೆ ಉತ್ತಮ ಫಲಿತಾಂಶ



ರಾಮಕೃಷ್ಣ ವಿದ್ಯಾಕೇಂದ್ರದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಮೈಸೂರು,ಏ.11–ರಾಮಕೃಷ್ಣ ನಗರದ ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯು ಪರೀಕ್ಷೆಗೆ ಹಾಜರಾಗಿದ್ದ ವಿಜ್ಞಾನ ವಿಭಾಗದ 116 ವಿದ್ಯಾರ್ಥಿಗಳಲ್ಲಿ 41 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಮತ್ತು 57 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ವಾಣಿಜ್ಯ ವಿಭಾಗದ 54 ವಿದ್ಯಾರ್ಥಿಗಳಲ್ಲಿ 14 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 27 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಸಾನಿಧ್ಯ ಸಿ.ಎನ್ 586 (97.67) ಅಂಕಗಳಿಸಿ ಕಾಲೇಜಿಗೆ ಮೊದಲಿಗಳಾಗಿದ್ದಾಳೆ. ಕೀರ್ತನ ಶಿವರಾವ್ ಹೆಬ್ಬಾರ್ 584 (97.33) ಹಾಗೂ ಕೀರ್ತನ ಪಿ 581 (96.83) ಅಂಕಗಳೊಂದಿಗೆ ಅನುಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಬೀರೇಶ ಎನ್ 583 (97.17) ಅಂಕ ಗಳಿಸಿ ಕಾಲೇಜಿಗೆ ಮೊದಲಿಗರಾಗಿದ್ದಾರೆ. ಜೀವನ್ ಎಂ 571 (95.17) ಹಾಗೂ ಕೀರ್ತಶ್ರೀ ಕೆ ಆರ್ 564 (94.00) ಅಂಕಗಳೊಂದಿಗೆ ಅನುಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ಅಪೂರ್ವ ಸಾಧನೆ ಮಾಡಿರುವ ವಿದ್ಯಾರ್ಥಿಗಳನ್ನು ಶ್ರೀ ರಾಮಕೃಷ್ಣ ಸೇವಾ ಸಂಘದ ಗೌರವ ಅಧ್ಯಕ್ಷ ಎಂ.ಪಾಪೇಗೌಡ, ಅಧ್ಯಕ್ಷ ಪ್ರೊ.ಜಿ.ಚಂದ್ರಶೇಖರ್, ಕಾರ್ಯದರ್ಶಿ ಎಂ.ದೊರೆರಾಜು, ಖಜಾಂಚಿ ಹೆಚ್.ಜಿ.ರಮೇಶ್, ಪ್ರಾಚಾರ್ಯರಾದ ಶಿವಪ್ಪ ಸಿ ಹಾಗೂ ಬೋಧಕ–ಬೋಧಕೇತರರು ಮತ್ತು ಪ್ರಣಮ್ಯ ಎಜ್ಯುಕೇಷನಲ್ ಟ್ರಸ್ಟ್‌ನ ಅಧ್ಯಕ್ಷರಾದ ಸವಿತಾ ವಿ.ಪಿ ಹಾಗೂ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

ಅಭಿನಂದನೆ...



ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮೈಸೂರಿನ ಸದ್ವಿದ್ಯಾ ಸೆಮಿ ರೆಸಿಡೆನ್ಸಿಯಲ್ ಕಾಲೇಜಿನ ವಿಪ್ರ ವಿದ್ಯಾರ್ಥಿನಿ ಧನ್ವಿ ಡಿ.ಎಸ್. ವಿಜ್ಞಾನ ವಿಭಾಗದಲ್ಲಿ 597/600 ಅಂಕ ಪಡೆದು ರಾಜ್ಯಕ್ಕೆ 3ನೇ, ಜಿಲ್ಲೆಗೆ ಪ್ರಥಮ ಗಳಿಸಿದ್ದು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠಕುಮಾರ್, ಮೈಸೂರು ಜಿಲ್ಲಾ ಪ್ರತಿನಿಧಿ ಡಾ.ಕೆ.ವಿ.ಲಕ್ಷ್ಮೀದೇವಿ ಅಭಿನಂದಿಸಿದರು. ರಾಜ್ಯ ಸಮಿತಿ ಸದಸ್ಯರಾದ ಬಾಲಕೃಷ್ಣ, ನಾಗರಾಜು, ಶ್ರೀನಿವಾಸ ಪ್ರಸಾದ್, ಅರುಣ್, ರಾಜ್‌ಕುಮಾರ್, ಚಂಚಲಾಕ್ಷಿ, ಹೆಬ್ಬಾಳು ಬ್ರಾಹ್ಮಣ ಸಂಘದ ಅಧ್ಯಕ್ಷ ಮಂಜುನಾಥ್, ಪೋಷಕರಾದ ಸುಧನ್ವ, ಕುಸುಮಾ ಇದ್ದರು.

ಶಾರದಾವಿಲಾಸ ಕಾಲೇಜಿಗೆ 88.57% ಫಲಿತಾಂಶ

ಮೈಸೂರು,ಏ.11–ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಪದವಿಪೂರ್ವ ಕಾಲೇಜು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.88.57% ರಷ್ಟು ಫಲಿತಾಂಶ ಪಡೆದುಕೊಂಡಿದೆ. ಪರೀಕ್ಷೆಗೆ ಹಾಜ ರಾಗಿದ್ದ 210 ವಿದ್ಯಾರ್ಥಿಗಳ ಪೈಕಿ 186 ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. 36 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 120 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 26 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ, 4 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ.




ನವ್ಯ ಎಂ (578) ಭವೇಶ್ (577)

ವಾಣಿಜ್ಯ ವಿಭಾಗದಲ್ಲಿ ನವ್ಯ ಎಂ 600ಕ್ಕೆ 578 ಅಂಕಗಳನ್ನು ಪಡೆದು ಕಾಲೇಜಿಗೆ ಪ್ರಥಮಸ್ಥಾನ ಪಡೆದರೆ, ವಿಜ್ಞಾನ ವಿಭಾಗದಲ್ಲಿ ಭವೇಶ್ ಮಿತ್ತಲ್ 600ಕ್ಕೆ 577 ಅಂಕಗಳನ್ನು ಪಡೆದುಕೊಂಡಿದ್ದಾರೆ.

ಶ್ರಾವ್ಯ ಕೆ.ಎಸ್‌ಗೆ 579 ಅಂಕ



ಮೈಸೂರು,ಏ.11–ಶಾರದಾ ವಿದ್ಯಾನಿಕೇತನ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಕುಮಾರಿ ಶ್ರಾವ್ಯ ಕೆ.ಎಸ್ ರವರು 600 ಕ್ಕೆ 579 ಅಂಕಗಳನ್ನು ಪಡೆದು ಶೇ.96.50 ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಕನ್ನಡ 99, ಇಂಗ್ಲೀಷ್ 94, ಭೌತಶಾಸ್ತ್ರ 94, ರಸಾಯನಶಾಸ್ತ್ರ 95, ಗಣಿತಶಾಸ್ತ್ರ 98, ಗಣಕವಿಜ್ಞಾನ 99 ಅಂಕಗಳನ್ನು ಗಳಿಸಿರುವ ಇವರು ಬನ್ನೂರು ಹೋಬಳಿ ಕೊಡಗಹಳ್ಳಿ ಗ್ರಾಮದ ಪೋಸ್ಟ್ ಮಾಸ್ಟರ್ ಕೆ.ಎನ್.ಶ್ರೀನಿವಾಸ ದೀಕ್ಷಿತ್ ಹಾಗೂ ಶ್ರೀಮತಿ ಎಸ್.ಸುಮ ದಂಪತಿ ಪುತ್ರಿ.

ಮಹರ್ಷಿ ಪಪೂ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ








ಅನುಷಾ ತನುಶ್ರೀ ಪೂರ್ವಿಕಾ ಪ್ರೀತಲ್ ಚೈತನ್ಯ ಕುಸುಮಾ

ಮೈಸೂರು: ಮೈಸೂರಿನ ಮಹರ್ಷಿ ಪದವಿ ಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ, ಅನುಷಾ ಎಂ. ಶೇ.93.16 ಅಂಕ, ಸೈನ್ಸ್ ವಿಭಾಗದಲ್ಲಿ ತನುಶ್ರೀ ಜಿ , ಶೇ.89% ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಪೂರ್ವಿಕಾ ಹೆಚ್.ಎಲ್., ಶೇ.90.05, ಪ್ರೀತಲ್ ಆರ್, ಶೇ 88%, ಚೈತನ್ಯ ಎನ್, ಶೇ 85.67%, ಕುಸುಮಾ ಸಿ.ಯು., ಶೇ.85 ಅಂಕಗಳನ್ನು ಪಡೆದುಕೊಂಡಿದ್ದಾರೆ.

ನಾರಿಶಕ್ತಿ ವಂದನ್ ಜಾರಿಗೆ ಸಂಸತ್ ಅಧಿವೇಶನ

● ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾಹಿತಿ ● ಬಿಜೆಪಿಯಿಂದ ಮಹಿಳಾ ಅಭ್ಯರ್ಥಿಗಳ ಶೋಧ ಆರಂಭ



ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಬೆಂಗಳೂರು,ಏ.11(ಕೆಎಂಶಿ)–ಮಹಿಳಾ ಮೀಸಲಾತಿ ಮಸೂದೆ 'ನಾರಿ ಶಕ್ತಿ ವಂದನ್' ಜಾರಿ ಸಂಬಂಧ ಸಂಸತ್ ಅಧಿವೇಶನ ನಡೆಯಲಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾರಿ ಶಕ್ತಿ ವಂದನ್ ಮಸೂದೆ ಹಿನ್ನೆಲೆಯಲ್ಲಿ ಮಹಿಳೆಯರಿಗೆ ತಮ್ಮ ಹಕ್ಕಿನ ಕುರಿತು ಮುಂದಿನ 10 ದಿನಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲಾಗುವುದು ಎಂದರು. ಎಲ್ಲ ರಾಜಕೀಯ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆ ಬೆಂಬಲಿಸಬೇಕು, ವಿವಿಧ ಕ್ಷೇತ್ರಗಳ ಮಹಿಳಾ ದಿಗ್ಗಜರನ್ನು ಗುರುತಿಸಿ ಚುನಾವಣಾ ಟಿಕೆಟ್ ಕೊಡಬೇಕು, ಮಹಿಳಾ ಮೀಸಲಾತಿ ಜಾರಿಗೆ ಶ್ರಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಅರ್ಪಿಸುವುದಾಗಿ ತಿಳಿಸಿದರು.

ಮಹಿಳಾ ಮೀಸಲಾತಿ ಬಹಳ ವರ್ಷಗಳ ಬೇಡಿಕೆಯಾಗಿದ್ದು, ಈಡೇರುವ ಸಂಶಯವಿತ್ತು, 15 ವರ್ಷಗಳ ಹಿಂದೆ ಸಂಸತ್ತಿನಲ್ಲಿ ಚರ್ಚೆಗೆ ಬಂದಾಗ ಕೆಲವು ರಾಜಕೀಯ ಪಕ್ಷಗಳು ಮಸೂದೆ ಕರಡು ಹರಿದು ವಿರೋಧ ವ್ಯಕ್ತಪಡಿಸಿದ್ದವು.

ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ವಿರೋಧಿ ಮಾನಸಿಕತೆಯಿಂದ ಮಸೂದೆ ನನೆಗುದಿಗೆ ಬಿದ್ದಿತ್ತು. ಯುಪಿಎ 10 ವರ್ಷಗಳ ಅಧಿಕಾರದಲ್ಲಿ ಮಸೂದೆ ತರಲಿಲ್ಲ, ಮೋದಿ ಪ್ರಧಾನಿಯಾದ ನಂತರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದರು. ಕರ್ನಾಟಕದ ಗ್ರಾಮ ಪಂಚಾಯತ್‌ಗಳ ಪೈಕಿ ಮಹಿಳೆ ಅಧ್ಯಕ್ಷರಾಗಿರುವ ಕಡೆ ಉತ್ಕೃಷ್ಟ ಸಾಧನೆಗೆ ಪ್ರಶಸ್ತಿಯೂ ಲಭಿಸಿದೆ. ಸಂಸತ್ ಚುನಾವಣೆಗೆ ಟಿಕೆಟ್ ನೀಡಿಕೆ ವಿಚಾರದಲ್ಲಿ ಈಗಾಗಲೇ ಮಹಿಳಾ ಜನಪ್ರತಿನಿಧಿಗಳಿಗೆ ಎಲ್ಲ ಪಕ್ಷಗಳು ಆದ್ಯತೆ ಕೊಡಲಿವೆ ಎಂಬ ನಿರೀಕ್ಷೆ ಇದೆ. ಅರ್ಹ ಮಹಿಳಾ ಅಭ್ಯರ್ಥಿಗಳನ್ನು ಗುರುತಿಸುವ ಕಾರ್ಯ ಈಗಿನಿಂದಲೇ ನಡೆಯಬೇಕಿದೆ.

ಕಾಂಗ್ರೆಸ್ ಹಳದಿ ಬಣ್ಣದ ಕನ್ನಡಕ ಹಾಕಿಕೊಂಡಿದ್ದು, ಅದಕ್ಕೆ ಎಲ್ಲವೂ ಹಳದಿಯಾಗಿ ಗೋಚರಿಸುತ್ತಿದೆ, ಮಹಿಳಾ ಮೀಸಲಾತಿ ಮಸೂದೆ ರಾಜ್ಯ ವಿಧಾನಸಭೆಗಳ ಚುನಾವಣೆ ಮೇಲೆ ಪ್ರಭಾವ ಬೀರುವುದಿಲ್ಲ ಎಂಬುದು ತಮ್ಮ ಅಭಿಪ್ರಾಯ ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಹಿಳಾ ಮೀಸಲಾತಿ ಮಸೂದೆಗೆ ವಿರೋಧವೇ ಇಲ್ಲ ಚರ್ಚೆಗೆ ವಿರೋಧವೇ ಎಂಬುದನ್ನು ಸ್ಪಷ್ಟಪಡಿಸಬೇಕು.

ಮಹಿಳಾ ಸಮಾವೇಶ: ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಸಿ.ಮಂಜುಳಾ ಮಾತನಾಡಿ, ನಾರಿ ಶಕ್ತಿ ವಂದನ್ ಕಾಯ್ದೆ ತರಲು ಪ್ರಧಾನಿ ನರೇಂದ್ರ ಮೋದಿ ಶ್ರಮಿಸಿದ್ದು, ಎಲ್ಲ ಜಿಲ್ಲೆಗಳಲ್ಲಿ ಮಹಿಳಾ ಸಮಾವೇಶ ಆಯೋಜಿಸಲಾಗುವುದು ಎಂದರು. ರಾಜ್ಯಾದ್ಯಂತ ಸಹಿ ಸಂಗ್ರಹ ನಡೆಯಲಿದ್ದು, ನಾಳೆ ಕೆ.ಆರ್.ಪುರದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ನೇತೃತ್ವದಲ್ಲಿ ಸಹಿ ಸಂಗ್ರಹ ಆರಂಭವಾಗಲಿದೆ, ಮಸೂದೆ ಬೆಂಬಲಿಸಿ ಮಿಸ್ಡ್ ಕಾಲ್ ಅಭಿಯಾನ ನಡೆಸಲಾಗುತ್ತದೆ, ವಿಭಾಗಮಟ್ಟದಲ್ಲಿ ಪತ್ರಿಕಾ ಗೋಷ್ಠಿಗಳು, ಯುವಮೋರ್ಚಾದಿಂದ ಬೈಕ್, ಸ್ಕೂಟಿ ರ್‍ಯಾಲಿಗಳನ್ನು ಆಯೋಜಿಸಲಾಗುವುದು ಎಂದು ತಿಳಿಸಿದರು.

ಮೊಸಳೆ ಕಣ್ಣೀರಿಟ್ಟಿತ್ತು

"ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಯುಪಿಎ ನಿಯಂತ್ರಿಸುತ್ತಿದ್ದಾಗ ಮಹಿಳಾ ಮೀಸಲಾತಿ ಕುರಿತು ಚರ್ಚೆ ನಡೆಯಿತು. ಆಗ ಪಕ್ಷ ಮೊಸಳೆ ಕಣ್ಣೀರು ಸುರಿಸಿತ್ತು. ಆ ಪಕ್ಷಕ್ಕೆ ಮಹಿಳೆ ಎಂದರೆ ಪ್ರಿಯಾಂಕಾ ಗಾಂಧಿ ಮಾತ್ರ, ಬೇರೆ ಮಹಿಳೆಯರು ರಾಜಕೀಯಕ್ಕೆ ಬರುವುದು ಬೇಕಿಲ್ಲ. ಬೇರೆ ಮಹಿಳೆಯರಿಗೆ ಅವಕಾಶ ಬೇಡ ಎಂಬುದು ಕಾಂಗ್ರೆಸ್ಸಿನ ಮಾನಸಿಕತೆ. ಇಂದಿರಾ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಹೊರತುಪಡಿಸಿ ಸಾಮಾನ್ಯ ಮಹಿಳೆಯರು ಸಂಸತ್ತಿಗೆ ಬರುವುದು ಬೇಡ ಎಂಬ ಮಾನಸಿಕತೆ ಬದಲಿಸಿಕೊಳ್ಳಬೇಕು.

–ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಮೈಸೂರು ಡಿಬ್ರೂಗಢ ನಡುವೆ ಎರಡು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು



ಮೈಸೂರು, ಏ.11(ಬಿಎಲ್‌ಯು)– ಬೇಸಿಗೆ ವೇಳೆ ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ಹಿನ್ನೆಲೆಯಲ್ಲಿ ಮೈಸೂರು ಹಾಗೂ ಅಸ್ಸಾಂನ ಡಿಬ್ರೂಗಢ ನಡುವೆ ಎರಡು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲುಗಳು ಸಂಚರಿಸಲಿವೆ ಎಂದು ನೈರುತ್ಯ ರೈಲ್ವೆಯ ಮೈಸೂರು ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಗಿರೀಶ್ ಧರ್ಮರಾಜ್ ಕಲಗೊಂಡ ತಿಳಿಸಿದ್ದಾರೆ.


ಮೈಸೂರಿನಿಂದ ಏಪ್ರಿಲ್ 12 ಮತ್ತು 26ರಂದು ಬೆಳಿಗ್ಗೆ 8 ಗಂಟೆಗೆ ಹೊರಡುವ ರೈಲು ಬುಧವಾರ ಮಧ್ಯಾಹ್ನ 1.30 ಗಂಟೆಗೆ ದಿಬ್ರೂಗಢ ತಲುಪಲಿದೆ ಎಂದು ಹೇಳಿದ್ದಾರೆ. ಅತ್ತ ದಿಬ್ರೂಗಢದಿಂದ ಏ.16ರಂದು ಮತ್ತು 30ರಂದು ಮಧ್ಯಾಹ್ನ 1.30 ಗಂಟೆಗೆ ಹೊರಡುವ ರೈಲು ಶನಿವಾರ ಮಧ್ಯಾಹ್ನ 4.15 ಗಂಟೆಗೆ ಮೈಸೂರಿಗೆ ಆಗಮಿಸಲಿದೆ ಎಂದು ತಿಳಿಸಿದ್ದಾರೆ. ಮಂಡ್ಯ, ಮದ್ದೂರು, ಬೆಂಗಳೂರು, ಬಂಗಾರಪೇಟೆ, ಜೋಲಾರಪೇಟೆ, ಕಟ್ಪಾಡಿ, ರೇಣಿಗುಂಟಾ ಸೇರಿದಂತೆ ಹಲವು ಮಾರ್ಗಗಳ ಮೂಲಕ ರೈಲು ಸಂಚರಿಸಲಿದೆ. ಒಟ್ಟು 20 ಬೋಗಿ ಹೊಂದಿರುವ ಈ ರೈಲಿನಲ್ಲಿ 2 ಎಸಿ ಟು–ಟಯರ್, 4 ಎಸಿ ತ್ರಿ ಟಯರ್, 6 ಸ್ಲೀಪರ್ ವರ್ಗ, 6 ಸಾಮಾನ್ಯ ದ್ವಿತೀಯ ವರ್ಗ ಹಾಗೂ 2 ಎಸ್‌ಎಲ್‌ಡಿ ಬೋಗಿಗಳಿರುತ್ತವೆ ಎಂದು ಗಿರೀಶ್ ಮಾಹಿತಿ ನೀಡಿದ್ದಾರೆ.


ಕಾಂಚೀವರಂ ಸೀರೆಗಳ ಪ್ರದರ್ಶನ, ಮಾರಾಟ



ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಕಾಂಚೀವರಂ ಸಿಲ್ಕ್ ಸೀರೆಗಳ ಪ್ರದರ್ಶನ ಮತ್ತು ಮಾರಾಟ ಆರಂಭವಾಗಿದೆ. ಶುದ್ಧ ಹಾಗೂ ಗುಣಮಟ್ಟದ ಖಾತರಿಯನ್ನು ಗ್ರಾಹಕರಿಗೆ ಖಚಿತಪಡಿಸಲಾಗಿದೆ.

ಶ್ರೀ ಗುರು ಭೈರವೈಕ್ಯ ಮಂದಿರ ಲೋಕಾರ್ಪಣೆ ಕಾರ್ಯಕ್ರಮದ ಸ್ಥಳ ಪರಿಶೀಲನೆ...





ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಚುಂಚನಗಿರಿಯಲ್ಲಿ ನಿರ್ಮಿಸಿರುವ ಶ್ರೀ ಗುರು ಭೈರವೈಕ್ಯ ಮಂದಿರದ ಲೋಕಾರ್ಪಣೆಯನ್ನು ಏ.15ರಂದು ಪ್ರಧಾನಿ ನರೇಂದ್ರಮೋದಿ ನೆರವೇರಿಸಲಿರುವ ಹಿನ್ನೆಲೆಯಲ್ಲಿ ಶನಿವಾರ ಪೂಜ್ಯ ಶ್ರೀ ಡಾ॥ ನಿರ್ಮಲಾನಂದನಾಥ ಮಹಾ ಸ್ವಾಮೀಜಿ ಅವರೊಡನೆ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಶಾಸಕ ಜಿ.ಟಿ.ದೇವೇಗೌಡರು ಭೇಟಿ ನೀಡಿ, ಪರಿಶೀಲನೆ ನಡೆಸಿ, ನಂತರ ಶ್ರೀಗಳ ಆಶೀರ್ವಾದ ಪಡೆದರು.

ಏ.14ರಿಂದ ಮೈಸೂರಲ್ಲಿ 'ನೃತ್ಯ ಸಪ್ತಾಹ ಅಂತಾರಾಷ್ಟ್ರೀಯ ಹಬ್ಬ'

ಮೈಸೂರು,ಏ.11(ಎಂಟಿವೈ)–ಮೈಸೂರಿನ ಕುವೆಂಪುನಗರದಲ್ಲಿನ ಗಾನಭಾರತಿ ರಮಾಗೋವಿಂದ ಕಲಾ ವೇದಿಕೆಯಲ್ಲಿ ಏ.14ರಿಂದ 20ರವರೆಗೆ 'ನೃತ್ಯ ಸಪ್ತಾಹ ಅಂತಾರಾಷ್ಟ್ರೀಯ ಹಬ್ಬ'ವನ್ನು ಆಯೋಜಿಸಲಾಗಿದೆ ಎಂದು ಉಮಾ ಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್‌ನ ನಿರ್ದೇಶಕರಾದ ಟಿ.ಎಸ್.ಶ್ರೀಲಕ್ಷ್ಮಿ ಕುಮಾರ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆ.ಪಿ.ನಗರದ ಮೊದಲ ಹಂತದಲ್ಲಿರುವ ಉಮಾ ಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್‌ನ ಅಮೃತ ಮಹೋತ್ಸವ ಅಂಗವಾಗಿ ನೃತ್ಯ ಸಪ್ತಾಹ ಹಮ್ಮಿಕೊಳ್ಳಲಾಗಿದೆ. ಏ.14ರಂದು ಸಂಜೆ 6ಕ್ಕೆ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ವಸುಂಧರ ಪ್ರದರ್ಶನ ಕಲೆಗಳ ಕೇಂದ್ರದ ಸಂಸ್ಥಾಪಕರಾದ ಡಾ.ವಸುಂಧರಾ ದೊರೆಸ್ವಾಮಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಇದೇ ವೇಳೆ ಸೋಮಾಂಮೃತ ಯಾನ ಸ್ಮರಣಿಕೆ, ನಾಟ್ಯಯಾನ ಜೀವನ ಚರಿತ್ರೆ ಬಿಡುಗಡೆಗೊಳ್ಳಲಿವೆ. ಮುಖ್ಯ ಅತಿಥಿಗಳಾಗಿ ಉದ್ಯಮಿ ಡಾ.ಎಂ.ಜಗನ್ನಾಥ ಶೆಣೈ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ.ಕೆ.ರಾಮಮೂರ್ತಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಸಂಜೆ 7ಕ್ಕೆ ಕೃಷ್ಣಾನುಭವ ಏಕವ್ಯಕ್ತಿ ನೃತ್ಯ ಪ್ರದರ್ಶನವನ್ನು ಶಾರಿಕ ಕೌಶಿಕ್ ಪ್ರಸ್ತುತಪಡಿಸಲಿದ್ದಾರೆ ಎಂದರು.

ಏ.15ರಂದು ಸಂಜೆ 5.45ರಿಂದ ರಾತ್ರಿ 9 ಗಂಟೆವರೆಗೆ ನೃತ್ಯ, ಕಥಕ್ ಸೇರಿದಂತೆ ಇನ್ನಿತರ ಕಾರ್ಯಕ್ರಮ ಜರುಗಲಿದೆ. ಏ.16ರಂದು ಸಂಜೆ 5.45ರಿಂದ ರಾತ್ರಿ 9ರವರೆಗೆ ವಿವಿಧ ಕಾರ್ಯಕ್ರಮ ನಡೆಯಲಿದೆ ಏ.17ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ ಮೇಕಪ್ ಕಾರ್ಯಾಗಾರ, ಸಂಜೆ 5.45ಕ್ಕೆ ನೃತ್ಯ ಪ್ರದರ್ಶನ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. ಏ.18ರಂದು ಬೆಳಗ್ಗೆ 9.45ಕ್ಕೆ ಆಪ್ತರ ಅಂತರ ಧ್ವನಿ ಹಾಗೂ ಇನ್ನಿತರ ವಿಶಿಷ್ಟ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ ಎಂದಿನಂತೆ ವಿವಿಧ ನೃತ್ಯ ಪ್ರದರ್ಶನ ಇರಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಉಮಾ ಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್‌ನ ಕೃಷ್ಣಕುಮಾರ್, ಕೌಶಿಕ್, ಶಾರಿಕ ಕೌಶಿಕ್ ಇದ್ದರು.

ಮೈಸೂರಲ್ಲಿ ಡಾ.ಅಂಬೇಡ್ಕರ್ ಜಯಂತ್ಯೋತ್ಸವ ಅದ್ಧೂರಿ ಆಚರಣೆಗೆ ನಿರ್ಧಾರ

● ಮೆರವಣಿಗೆ ವೇಳೆ ಹೆಲಿಕಾಪ್ಟರ್ ಮೂಲಕ ಬಾಬಾ ಸಾಹೇಬರ ಪ್ರತಿಮೆ, ಪುತ್ಥಳಿಗೆ ಪುಷ್ಪಾರ್ಚನೆ ● ಮಾಜಿ ಮೇಯರ್ ಪುರುಷೋತ್ತಮ್ ಮಾಹಿತಿ



ಮೈಸೂರು, ಏ.11(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಏ.14ರಂದು ಅಶೋಕಪುರಂನಿಂದ ಪುರಭವನದವರೆಗೆ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿದ್ದು, ಅಂದು ಅಶೋಕ(ಬಲ್ಲಾಳ್) ವೃತ್ತದ ಬಳಿ ಸ್ತಬ್ಧಚಿತ್ರಗಳಲ್ಲಿ ಪ್ರತಿಷ್ಠಾಪಿಸಲಾಗುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗಳಿಗೆ ಹೆಲಿಕಾಪ್ಟರ್ ಮೂಲಕ ಪುಷ್ಪಾರ್ಚನೆ ನೆರವೇರಿಸಲಾಗುವುದು ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿ ಕರ್ನಾಟಕ ಮಹಾಸಂಸ್ಥೆ, ದೊಡ್ಡ ಗರಡಿ ಮತ್ತು ಚಿಕ್ಕಗರಡಿ ಸಂಘ ಸೇರಿದಂತೆ ಅಶೋಕಪುರಂನ ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುವುದು ಎಂದರು.

ಅಶೋಕಪುರಂನ ಡಾ.ಅಂಬೇಡ್ಕರ್ ಉದ್ಯಾನವನದ ಮುಂಭಾಗದಿಂದ ಅಂದು(ಏ.14) ಬೆಳಗ್ಗೆ 9 ಗಂಟೆಗೆ ಮೆರವಣಿಗೆ ಆರಂಭವಾಗಲಿದ್ದು, 10 ಸಾವಿರಕ್ಕೂ ಹೆಚ್ಚು ಮಂದಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಬಾರಿಯೂ ಸ್ತಬ್ಧಚಿತ್ರ ಗಳಲ್ಲಿ ಡಾ.ಅಂಬೇಡ್ಕರ್ ಅವರ ಪ್ರತಿಮೆ, ಪುತ್ಥಳಿ, ಭಾವಚಿತ್ರಗಳನ್ನು ಮೆರವಣಿಗೆ ಮಾಡಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮೆರವಣಿಗೆಗೆ ಚಾಲನೆ ನೀಡಲಿದ್ದು, ಆದಿ ಕರ್ನಾಟಕ ಮಹಾ ಸಂಸ್ಥೆಯ ಅಧ್ಯಕ್ಷ ಪಿ.ಸಿದ್ದರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ವಿವಿಧ ಜಾನಪದ ಕಲಾ ತಂಡಗಳೊಡನೆ ಭವ್ಯ ಮೆರವಣಿಗೆ ನಡೆಯಲಿದ್ದು, ಮಧ್ಯಾಹ್ನ 12 ಗಂಟೆ ವೇಳೆಗೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆಯನ್ನು ಸಾರುವ ಸ್ತಬ್ಧಚಿತ್ರಗಳ ಮೇಲೆ ಹೆಲಿಕಾಪ್ಟರ್ ಮೂಲಕ ಪುಷ್ಪಾರ್ಚನೆ ನಡೆಯಲಿದೆ. ಅಶೋಕ ವೃತ್ತ ಇಲ್ಲವೇ ರಾಮಸ್ವಾಮಿ ವೃತ್ತದ ಬಳಿ ಪುಷ್ಪವೃಷ್ಟಿ ನೆರವೇರಲಿದ್ದು, ಮೆರವಣಿಗೆಯು ಚಾಮರಾಜ ಜೋಡಿ ರಸ್ತೆ, ಬಸವೇಶ್ವರ ವೃತ್ತ, ಸಯ್ಯಾಜಿರಾವ್ ರಸ್ತೆ ಮೂಲಕ ಸಾಗಿ ಪುರಭವನದ ಆವರಣ ತಲುಪಲಿದೆ. ಅಲ್ಲಿ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುವುದು. ಅಶೋಕಪುರಂ, ಗಾಂಧಿನಗರಗಳಲ್ಲಿ ಇಡೀ ತಿಂಗಳು ಅಂಬೇಡ್ಕರ್ ಹಬ್ಬ ಆಚರಣೆಗೆ ಚಿಂತನೆ ನಡೆದಿದೆ. ನಾವು ಪ್ರಕೃತಿ ಆರಾಧಕರಾಗಿದ್ದೇವೆ. ಮಾರಮ್ಮ, ಕಾಳಮ್ಮ ಮೊದಲಾದವರೆಲ್ಲ ನಮ್ಮ ಪೂರ್ವಿಕರೇ ಆಗಿದ್ದಾರೆ. ಸಮಾನತೆ ಸಾರುವ ಬೌದ್ಧ ಭಾರತ ನಿರ್ಮಾಣಕ್ಕೆ ನಾವೆಲ್ಲ ಶ್ರಮಿಸುತ್ತಿದ್ದೇವೆ. ಅಂಬೇಡ್ಕರ್ ಜಯಂತಿಯ ಭವ್ಯ ಮೆರವಣಿಗೆಯಲ್ಲಿ ಮದ್ಯಸೇವಿಸಿದ ಯಾರೂ ಪಾಲ್ಗೊಳ್ಳಬಾರದು ಹಾಗೂ ಮೆರವಣಿಗೆ ವೇಳೆ ಧೂಮಪಾನ ಮಾಡಬಾರದೆಂದು ತಿಳಿಹೇಳಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸುನೀಲ್, ಶಿವಸ್ವಾಮಿ, ಮಹೇಶ್, ನಾಗರಾಜು, ಜೆ.ಜೈಕುಮಾರ್, ಪುಟ್ಟರಾಜು ಇನ್ನಿತರರು ಇದ್ದರು.

ದೇಶ – ವಿದೇಶ

ಯುಪಿಯಲ್ಲಿ ವಾಕಿಂಗ್ ಹೊರಟಿದ್ದ ವಕೀಲನಿಗೆ ಗುಂಡಿಕ್ಕಿ ಹತ್ಯೆ



ಲಕ್ನೋ: ಉತ್ತರ ಪ್ರದೇಶದ ಮಿರ್ಜಾಪುರದಲ್ಲಿ ಬೈಕ್‌ನಲ್ಲಿ ಬಂದ ಇಬ್ಬರು ವ್ಯಕ್ತಿಗಳು ವಕೀಲನ ಮೇಲೆ ಗುಂಡಿನ ದಾಳಿ ನಡೆಸಿ ಹತ್ಯೆ ಮಾಡಿರುವ ಘಟನೆ ನಡೆದಿದೆ.


ರಾಜೀವ್ ಸಿಂಗ್ ಎಂದಿನಂತೆ ಬೆಳಗ್ಗೆ ವಾಕಿಂಗ್ ಹೋಗಿದ್ದರು. ಈ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತರು, ವಕೀಲನ ಮೇಲೆ ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ. ಗುಂಡೇಟಿಗೆ ವಕೀಲ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕೊಲೆ ಮಾಡಿ ಆರೋಪಿಗಳು ಬೈಕ್‌ನಲ್ಲಿ ಎಸ್ಕೇಪ್ ಆಗಲು ಮುಂದಾಗಿ ಪೇಚಿಗೆ ಸಿಲುಕಿದ ಪ್ರಸಂಗವೂ ನಡೆಯಿತು. ಬೈಕ್ ಕಿಕ್ ಸ್ಟಾರ್ಟ್ ಮಾಡುವಾಗ ತಕ್ಷಣಕ್ಕೆ ಸ್ಟಾರ್ಟ್ ಆಗಿಲ್ಲ. ಇದರಿಂದ ಕೆಲಕಾಲ ಆರೋಪಿಗಳು ಕೂಡ ಆತಂಕಕ್ಕೆ ಒಳಗಾಗಿದ್ದರು. ಬೈಕ್ ಪೆಡಲ್ ಅನ್ನು ನಿರಂತರವಾಗಿ ತುಳಿದರೂ ಬೈಕ್ ಸ್ಟಾರ್ಟ್ ಆಗಲಿಲ್ಲ. ಆಗ ದಾಳಿಕೋರರನ್ನು ಹಿಡಿಯಲು ಕೆಲವರು ಓಡಿ ಬಂದರು. ಅಷ್ಟೊತ್ತಿಗೆ ಬೈಕ್ ಸ್ಟಾರ್ಟ್ ಆಗಿ ಆರೋಪಿಗಳು ಎಸ್ಕೇಪ್ ಆದರು. ಸಿಂಗ್ ಈ ಹಿಂದೆ ಅರ್ಜಿ ಸಲ್ಲಿಸಿ, ತನ್ನ ಮೇಲೆ ದಾಳಿ ನಡೆಯುವ ಸಾಧ್ಯತೆ ಇದೆ ಎಂಬ ಆತಂಕ ವ್ಯಕ್ತಪಡಿಸಿದ್ದರು. ಗ್ರಾಮದ ಮಾಜಿ ಅಧ್ಯಕ್ಷ ಹಾಗೂ ವಕೀಲರ ಮೇಲೆ ಈ ಹಿಂದೆ ಎರಡು ಬಾರಿ ಹಲ್ಲೆ ನಡೆದಿತ್ತು.

ಭಾರತದ ವಿರುದ್ಧ ಸಂಚು; ಇಬ್ಬರು ಗೂಢಾಚಾರಿಗಳ ಬಂಧನ



ಬಿಜ್ನೋರ್: ಸೌದಿ ಅರೇಬಿಯಾದಲ್ಲಿ ನೆಲೆಸಿ ಪಾಕಿಸ್ತಾನದೊಂದಿಗೆ ಸಂಪರ್ಕ ಹೊಂದಿರುವ ಹ್ಯಾಂಡ್ಲರ್ ಜೊತೆ ಸಂಪರ್ಕದಲ್ಲಿದ್ದ ಆರೋಪದ ಮೇಲೆ ಬಿಜ್ನೋರ್‌ನಲ್ಲಿ ಇಬ್ಬರನ್ನು ಬಂಧಿಸಲಾಗಿದೆ. ಬಂಧಿತ ಇಬ್ಬರು ವ್ಯಕ್ತಿಗಳು, ಪಾಕಿಸ್ತಾನದ ಹ್ಯಾಂಡ್ಲರ್ ಸಾಮಾಜಿಕ ಮಾಧ್ಯಮಗಳ ಮೂಲಕ ಭಾರತದಲ್ಲಿ ತನ್ನ ಜಾಲವನ್ನು ವಿಸ್ತರಿಸುತ್ತಿದ್ದಾನೆ ಎಂದು ಪೊಲೀಸರಿಗೆ ತಿಳಿಸಿದ್ದಾರೆ. ಮೀರತ್‌ನ ಮಾವಾನಾ ಪ್ರದೇಶದ ಸಾಥ್ಲಾ ಗ್ರಾಮದ ನಿವಾಸಿ ಮತ್ತು ಪ್ರಸ್ತುತ ಪಶ್ಚಿಮ ಏಷ್ಯಾದಲ್ಲಿ ನೆಲೆಸಿರುವ ಅಕಿಬ್ ಜೊತೆಗಿನ ಸಂಪರ್ಕದ ಬಗ್ಗೆ ದೊರೆತ ಸುಳಿವು ಮೇರೆಗೆ ಬಿಜ್ನೋರ್‌ನಲ್ಲಿ ಉವೈದ್ ಮಲಿಕ್ ಮತ್ತು ಜಲಾಲ್ ಹೈದರ್ ಎಂಬಿಬ್ಬರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ನಜೀಬಾಬಾದ್ ವೃತ್ತ ಅಧಿಕಾರಿ ಅಂಜನಿ ಕುಮಾರ್ ಚತುರ್ವೇದಿ ತಿಳಿಸಿದ್ದಾರೆ. ಪೊಲೀಸರ ಪ್ರಕಾರ ಇನ್‌ಸ್ಟಾಗ್ರಾಮ್‌ನಲ್ಲಿ ಎಕೆ–47 ರೈಫಲ್ ಮತ್ತು ಸ್ಫೋಟಕಗಳನ್ನು ಪ್ರದರ್ಶಿಸುತ್ತಿರುವ ವೀಡಿಯೊ ಕಾಣಿಸಿಕೊಂಡ ನಂತರ ಅಕಿಬ್ ಬೆಳಕಿಗೆ ಬಂದನು. ವಿಚಾರಣೆ ವೇಳೆ ಬಂಧಿತ ವ್ಯಕ್ತಿಗಳು ಪೊಲೀಸರಿಗೆ ಅಕಿಬ್ ಹಿಂದೂಗಳ ವಿರುದ್ಧ ಯುವಕರನ್ನು ಪ್ರಚೋದಿಸುತ್ತಿದ್ದ, ರಾಷ್ಟ್ರವಿರೋಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಿದ್ದ, ಇನ್‌ಸ್ಟಾಗ್ರಾಮ್‌ನಲ್ಲಿ ಮೂಲಭೂತ ಮತ್ತು ಪ್ರಚೋದನಕಾರಿ ವಿಚಾರಗಳನ್ನು ಹರಡುತ್ತಿದ್ದ ಎಂದು ಹೇಳಿರುವುದಾಗಿ ಅಧಿಕಾರಿ ತಿಳಿಸಿದ್ದಾರೆ.

ಮದುವೆಗೆ ನಿರಾಕರಿಸಿದ್ದಕ್ಕೆ HIV ಪಾಸಿಟಿವ್ ರಕ್ತ ಇಂಜೆಕ್ಟ್: ಯುವತಿ ಆತ್ಮಹತ್ಯೆ



ಹೈದರಾಬಾದ್: ಮದುವೆಗೆ ನಿರಾಕರಿಸಿದ್ದಕ್ಕೆ ಯುವತಿಗೆ ತಿಂಗಳ ಹಿಂದೆ ವ್ಯಕ್ತಿಯೊಬ್ಬ ಹೆಚ್‌ಐವಿ ಪಾಸಿಟಿವ್ ರಕ್ತ ಇಂಜೆಕ್ಟ್ ಮಾಡಿದ್ದ. ಘಟನೆಯಿಂದ ಭೀತಿಗೆ ಒಳಗಾಗಿದ್ದ ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಮಾರ್ಚ್ 11ರಂದು ಈ ಘಟನೆ ನಡೆದಿತ್ತು ಆರೋಪಿ ಮನೋಹರ್ ಎಂಬಾತ ಯುವತಿಗೆ ಮನೆಯಲ್ಲಿ ಬಲವಂತವಾಗಿ ತನ್ನ ಹೆಚ್‌ಐವಿ ಸೋಂಕಿತ ರಕ್ತವನ್ನು ಇಂಜೆಕ್ಟ್ ಮಾಡಿದ್ದ. ಆರೋಪಿ ಜೊತೆ ಯುವತಿ ಮದುವೆ ನಿರಾಕರಿಸಿದ್ದಕ್ಕೆ ಈ ಕೃತ್ಯ ಎಸಗಿದ್ದ.

ಆರೋಪಿ ಮನೋಹರ್ ಮತ್ತು ಯುವತಿ ಸಂಬಂಧಿಕರು. ಆತನ ಜೊತೆ ತಮ್ಮ ಮಗಳ ಮದುವೆ ಮಾಡಲು ಪೋಷಕರು ಮೊದಲೇ ಯೋಜಿಸಿದ್ದರು. ಆದರೆ, ಆರೋಪಿ ಪೋಷಕರು ಹೆಚ್‌ಐವಿ ಪೀಡಿತರಾಗಿದ್ದರು. ಯುವತಿಯ ಪೋಷಕರು ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಹುಡುಗನಿಗೂ ವೈರಸ್ ಪರೀಕ್ಷೆ ಮಾಡಿಸಿದ್ದರು. ಅದರಲ್ಲಿ ಅವನಿಗೂ ಸೋಂಕು ಇರುವುದು ದೃಢಪಟ್ಟಿತು. ಯುವತಿ ತಕ್ಷಣ ಮದುವೆಯನ್ನು ರದ್ದುಗೊಳಿಸಿದಳು. ಇದರಿಂದ ಕುಪಿತಗೊಂಡು ಆರೋಪಿ ಆಕೆಗೆ ಹೆಚ್‌ಐವಿ ಇಂಜೆಕ್ಷನ್ ನೀಡಿದ್ದಾನೆ. ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಘಟನೆ ನಡೆದು ಸುಮಾರು ಒಂದು ತಿಂಗಳ ನಂತರ ಯುವತಿ ತನ್ನ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾಳೆ. ಘಟನೆಯಿಂದ ಯುವತಿ ತೀವ್ರ ಮಾನಸಿಕ ಒತ್ತಡದಲ್ಲಿದ್ದಳು.

ಚಂದ್ರನ ಸುತ್ತು ಹೊಡೆದು ಭೂಮಿಗೆ ಬಂದಿಳಿದ ನಾಸಾ ಗಗನಯಾನಿಗಳು




ಹೂಸ್ಟನ್: ಚಂದ್ರನ ಸುತ್ತು ಹೊಡೆದು ನಾಸಾದ ಆರ್ಟೆಮಿಸ್–2ನ ಗಗನಯಾನಿಗಳ ತಂಡವು ಕ್ಯಾಲಿಫೋರ್ನಿಯಾ ಬಳಿ ಪೆಸಿಫಿಕ್ ಮಹಾಸಾಗರದಲ್ಲಿ ಸುರಕ್ಷಿತವಾಗಿ ಭೂಮಿಗೆ ಮರಳಿತು. ನಾಸಾದ ಇಂಟೆಗ್ರಿಟಿ ಎಂದು ಹೆಸರಿಸಲಾದ ಓರಿಯೊನ್ ಕ್ಯಾಪ್ಸುಲ್ (ಬಾಹ್ಯಾಕಾಶ ಕೋಶವು) ಪೆಸಿಫಿಕ್ ಕಾಲಮಾನ ಶುಕ್ರವಾರ ಸಂಜೆ 5 ಗಂಟೆಗೆ ದಕ್ಷಿಣ ಕ್ಯಾಲಿಫೋರ್ನಿಯಾ ಕರಾವಳಿಯಲ್ಲಿ ಪ್ಯಾರಾಚೂಟ್ ಸಹಾಯದಿಂದ ಸಮುದ್ರಕ್ಕೆ ಇಳಿಯಿತು. ಐದು ದಶಕಗಳ ಬಳಿಕ ಚಂದ್ರನ ಕಕ್ಷೆಗೆ ನಾಸಾ, ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಗಗನಯಾನಿಗಳನ್ನು ಕಳುಹಿಸಿತ್ತು. ಈ ಪರಿಭ್ರಮಣವು ಅಪೋಲೊ ಯುಗದ ನಂತರ ಚಂದ್ರನಲ್ಲಿ ನಾಸಾದ ಮೊದಲ ಪಯಣವಾಗಿದೆ. ಮುಂದಿನ 2 ವರ್ಷಗಳಲ್ಲಿ ದಕ್ಷಿಣ ಧ್ರುವದಲ್ಲಿ ಮಾನವ ಹೆಜ್ಜೆ ಇಡುವ ಪ್ರಯತ್ನಕ್ಕೆ ಇದು ಮುನ್ನುಡಿ ಬರೆದಿದೆ. ನಾಲ್ವರು ಗಗನಯಾನಿಗಳಿದ್ದ ಅಮೆರಿಕದ ಓರಿಯೊನ್ ಕ್ಯಾಪ್ಸುಲ್ ಚಂದ್ರನ ಸುತ್ತ ಪರಿಭ್ರಮಣ ಮಾಡಿದ ವೇಳೆ ಭೂಮಿಗೆ ಗೋಚರಿಸದ, ಚಂದ್ರನ ಇನ್ನೊಂದು ಬದಿಯ ಈ ಹಿಂದೆ ಕಂಡಿರದ ಹಲವು ಚಿತ್ರಗಳನ್ನು ಸೆರೆಹಿಡಿದು ನಾಸಾಗೆ ಕಳುಹಿಸಿತ್ತು. ಆರ್ಟೆಮಿಸ್–2ರ ಗಗನಯಾನಿಗಳ ತಂಡವು ಒಟ್ಟು 6,94,392 ಮೈಲಿ (11,17,515 ಕಿಲೋಮೀಟರ್) ಪ್ರಯಾಣಿಸಿದೆ.

ಪ್ರಧಾನಿ ಮೋದಿ–ರಾಹುಲ್ ಗಾಂಧಿ ಸೌಹಾರ್ದಯುತ ಮಾತುಕತೆ...



ನವದೆಹಲಿ: ದೇಶದಲ್ಲಿರುವ ಧ್ರುವೀಕರಣ ರಾಜಕೀಯ ವಾತಾವರಣದಲ್ಲಿ ಅಪರೂಪ ಎನಿಸುವಂತಹ ವಿದ್ಯಮಾನವೊಂದು ದೆಹಲಿಯಲ್ಲಿ ಶನಿವಾರ ನಡೆದಿದೆ.

ಸಮಾಜ ಸುಧಾರಕ ಮಹಾತ್ಮ ಜ್ಯೋತಿರಾವ್ ಫುಲೆ ಅವರ 200ನೇ ಜನ್ಮದಿನೋತ್ಸವ ಅಂಗವಾಗಿ ಅವರಿಗೆ ಪುಷ್ಪನಮನ ಸಲ್ಲಿಸಲು ಆ ಇಬ್ಬರು ನಾಯಕರು ಸಂಸತ್ ಆವರಣದಲ್ಲಿ ಸೇರಿದ್ದರು. ಫುಲೆ ಅವರಿಗೆ ಪುಷ್ಪ ನಮನ ಸಲ್ಲಿಸಿದ ಬಳಿಕ ಸ್ಪೀಕರ್ ಓಂ ಬಿರ್ಲಾ, ಸಚಿವರಾದ ಜೆ.ಪಿ. ನಡ್ಡಾ, ಅರ್ಜುನ್ ರಾಮ್ ಮೇಘವಾಲ್ ಹಾಗೂ ರಾಹುಲ್ ಗಾಂಧಿ ಸೇರಿದಂತೆ ಇತರ ನಾಯಕರನ್ನು ಅಭಿನಂದಿಸಿದರು. ನಂತರ ವಿಶೇಷವಾಗಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಬಳಿ ನಿಂತು ಕೆಲ ಕಾಲ ಮಾತನಾಡಿದರು.

ಇತ್ತೀಚೆಗೆ ಆಸ್ಪತ್ರೆಗೆ ದಾಖಲಾಗಿದ್ದ ಸೋನಿಯಾ ಗಾಂಧಿ ಅವರ ಆರೋಗ್ಯದ ಬಗ್ಗೆ ಪ್ರಧಾನಿ ಮೋದಿ ವಿಚಾರಿಸಿದ್ದಾರೆ. ತಾಯಿಯ ಆರೋಗ್ಯ ಸುಧಾರಿಸುತ್ತಿದೆ ಎಂದು ರಾಹುಲ್ ಹೇಳಿದ್ದಾರೆ. ಇದಕ್ಕೆ ಪ್ರಧಾನಿ ಸಂತಸ ವ್ಯಕ್ತಪಡಿಸಿ, ಸೋನಿಯಾ ಗಾಂಧಿ ಚೇತರಿಕೆಗೆ ಶುಭ ಹಾರೈಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಶನಿವಾರ ಬೆಳಗ್ಗೆ ಸಾಮಾಜಿಕ ಮಾಧ್ಯಮ ಎಕ್ಸ್ ಪೋಸ್ಟ್ ಹಾಕಿದ್ದ ಪ್ರಧಾನಿ ಮೋದಿ, ಶಿಕ್ಷಣ ಮತ್ತು ಸರ್ವರ ಕಲ್ಯಾಣ ಕುರಿತಾದ ಫುಲೆ ಅವರ ಚಿಂತನೆಗಳು ಇಂದಿನ ದಿನಗಳಲ್ಲಿ ಹೆಚ್ಚು ಪ್ರಸ್ತುತ ಎಂದು ಹೇಳಿದ್ದರು.

ಬಗರ್ ಹುಕುಂ ಸಾಗುವಳಿದಾರರ ಬೇಡಿಕೆ ಈಡೇರಿಸದಿದ್ದರೆ

ರಾಜ್ಯ ವ್ಯಾಪ್ತಿ 'ಮಾಡು ಇಲ್ಲವೆ ಮಡಿ' ಚಳುವಳಿ

ನೆಲೆ ಇಲ್ಲದವರಿಗೆ ನೆಲೆ ಒದಗಿಸಲು ಆಗ್ರಹ



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಪದಾಧಿಕಾರಿಗಳು.

ಮಡಿಕೇರಿ, ಏ11– ಒಂದು ತಿಂಗಳ ಒಳಗಾಗಿ ರಾಜ್ಯದ ಬಗರ್ ಹುಕುಂ ಸಾಗುವಳಿದಾರರಿಗೆ ಸಂಬಂಧಿಸಿದಂತೆ ಸರ್ಕಾರ ಅಗತ್ಯ ತೀರ್ಮಾನಗಳನ್ನು ಕೈಗೊಂಡು ನೆಲೆ ಇಲ್ಲದವರಿಗೆ ನೆಲೆ ಒದಗಿಸದಿದ್ದಲ್ಲಿ 'ಮಾಡು ಇಲ್ಲವೆ ಮಡಿ' ಚಳವಳಿಯನ್ನು ರಾಜ್ಯ ವ್ಯಾಪಿ ಹಮ್ಮಿಕೊಳ್ಳಲಾಗುತ್ತದೆ. ಮಾತ್ರವಲ್ಲದೇ ಮೇ1ರಿಂದ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅನಿರ್ದಿಷ್ಟಾವಧಿ ಹೋರಾಟವನ್ನು ಆರಂಭಿಸುವುದಾಗಿ ಭೂಮಿ ಮತ್ತು ವಸತಿ ಹಕ್ಕು ವಂಚಿತ ಹೋರಾಟ ಸಮಿತಿ ಸ್ಪಷ್ಟಪಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಪದಾಧಿಕಾರಿಗಳು, ರಾಜ್ಯದಲ್ಲಿ ಲಕ್ಷಾಂತರ ಸಂಖ್ಯೆಯ ಬಗರ್ ಹುಕುಂ ಸಾಗುವಳಿದಾರರು, ಅರಣ್ಯ ಭೂಮಿ ಹಕ್ಕು ಪ್ರತಿಪಾದಿಸುತ್ತಿರುವವರು ಹಲವು ದಶಕಗಳಿಂದ ಭೂಮಿಯ ಹಕ್ಕಿಗಾಗಿ ಕಾಯುತ್ತಲೇ ಇದ್ದಾರೆ. ಇಲ್ಲಿಯವರೆಗೂ ಅಧಿಕಾರಕ್ಕೆ ಬಂದ ಎಲ್ಲಾ ಸರ್ಕಾರಗಳು ಹುಸಿ ಭರವಸೆಗಳನ್ನು ನೀಡಿವೆಯೇ ಹೊರತು ತಮ್ಮ ಮೂಲ ಬೇಡಿಕೆಗಳ ಈಡೇರಿಕೆಯತ್ತ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಅರಣ್ಯದ ಅಂಚಿನ ಭಾಗಗಳು, ಗೋಮಾಳ, ಸರ್ಕಾರಿ ಜಾಗಗಳಲ್ಲಿ ಹಲವಾರು ದಶಕಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿರುವ ಭೂ ರಹಿತರು ತಾವಿರುವ ಜಾಗದ ಹಕ್ಕು ಪತ್ರಕ್ಕಾಗಿ ಫಾರಂ ನಂ.50, 53, 57 ಅನ್ನು ಸಲ್ಲಿಸಿ, ಭೂ ಮಂಜೂರಾತಿಗೆ ಆಗ್ರಹಿಸುತ್ತಲೇ ಬಂದಿದ್ದಾರೆ. ಆದರೆ ಆಡಳಿತ ವ್ಯವಸ್ಥೆ ಮೌನವಾಗಿ ಉಳಿದಿದೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಬಗರ್ ಹುಕುಂ ಸಾಗುವಳಿದಾರರಿಗೆ ಭೂಮಿ ಮಂಜೂರಾತಿ ಮಾಡಿಕೊಡಲು ಕಾನೂನಿಗಿಂತಲು ಮುಖ್ಯವಾಗಿ ಇಚ್ಛಾಶಕ್ತಿಯ ಅಗತ್ಯವಿದೆ. ಸರ್ಕಾರ ಈಗಾಗಲೇ ಗೋಮಾಳ ಸೇರಿದಂತೆ ಇನ್ನಿತರ ಸರ್ಕಾರಿ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವವರಿಗೆ ನೋಟೀಸ್ ನೀಡಿ ತೆರವಿಗೆ ಮುಂದಾಗಿದೆ. ಇಂತಹ ನೋಟೀಸನ್ನು ತಕ್ಷಣ ಹಿಂದಕ್ಕೆ ಪಡೆಯಬೇಕು. ಭೂ ಮಂಜೂರಾತಿಗೆ ಅಡ್ಡಿಯಾಗಿರುವ ಕಾನೂನುಗಳನ್ನು ತಿದ್ದುಪಡಿ ಮಾಡಿ ಅಥವಾ ಸಡಿಲಿಸುವ ಮೂಲಕ ವಸತಿ ರಹಿತರಿಗೆ ನಿವೇಶನ, ಮನೆಗಳನ್ನು ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಸ್ವಾವಲಂಬಿ ಜೀವನ ಮತ್ತು ಗೌರವಯುತ ಬಾಳು ಎಲ್ಲರದ್ದೂ ಆಗಬೇಕೆಂದು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಪ್ರತಿಪಾದಿಸಿದ್ದರು. ಇಂದು ಅವರ 109ನೇ ಹುಟ್ಟು ಹಬ್ಬವಾಗಿದ್ದು, ಸರ್ಕಾರ ಅವರ ಮಾತಿನಂತೆ ಬಡವರಿಗೆ ಭೂಮಿ, ನೆತ್ತಿಯ ಮೇಲೊಂದು ಸೂರು ಜಾರಿ ಮಾಡುವ ಮೂಲಕ ಅವರ ಆಶಯಕ್ಕೆ ಗೌರವ ಸಲ್ಲಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಅಮೀನ್ ಮೊಹಿಸಿನ್, ಡಿ.ಎಸ್.ನಿರ್ವಾಣಪ್ಪ, ಹೆಚ್.ಜೆ. ಪ್ರಕಾಶ್, ಕೆ.ವೊಣ್ಣಪ್ಪ ಉಪಸ್ಥಿತರಿದ್ದರು.

ಕಾಫಿ ತೋಟದಲ್ಲಿ ನವಜಾತ ಹೆಣ್ಣು ಶಿಶು ಪತ್ತೆ



ಮಡಿಕೇರಿ,ಏ.11– ಕಾಫಿ ತೋಟದಲ್ಲಿ ಪತ್ತೆಯಾದ ನವಜಾತ ಹೆಣ್ಣು ಶಿಶುವನ್ನು ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ರಕ್ಷಿಸಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ.

ವಿರಾಜಪೇಟೆ ಸಮೀಪದ ಬೇತ್ರಿ ಗ್ರಾಮದ ಕಾಫಿ ತೋಟವೊಂದರಲ್ಲಿ ಹುಟ್ಟಿ 1 ದಿನ ಕಳೆದಿದ್ದ ಹೆಣ್ಣು ಶಿಶುವೊಂದು ಪತ್ತೆಯಾಗಿತ್ತು. ಈ ಕುರಿತು ಮಕ್ಕಳ ರಕ್ಷಣಾ ಘಟಕಕ್ಕೆ ದೊರೆತ ಮಾಹಿತಿ ಆಧರಿಸಿ ಅತ್ತ ತೆರಳಿದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಮಗುವನ್ನು ರಕ್ಷಿಸಿ ಮಡಿಕೇರಿ ಜಿಲ್ಲಾಸ್ಪತ್ರೆಯ ಮಹಿಳಾ ಮತ್ತು ಮಕ್ಕಳ ಚಿಕಿತ್ಸಾ ವಿಭಾಗಕ್ಕೆ ದಾಖಲಿಸಿದ್ದಾರೆ.

ಮಗು ನಿತ್ರಾಣವಾಗಿದ್ದು, ನವಜಾತ ಶಿಶುಗಳ ತುರ್ತು ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶಿಶುವಿನ ಪೋಷಕರ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ.

ನಿವೃತ್ತ ಅಂಚೆಪೇದೆ ಮಾದಪ್ಪಗೆ ಸನ್ಮಾನ



ನಿವೃತ್ತ ಅಂಚೆ ಪೇದೆ ಬಿಟ್ಟಿರ ಮಾದಪ್ಪ ಹಾಗೂ ಅವರ ಪತ್ನಿಯನ್ನು ಸನ್ಮಾನಿಸಲಾಯಿತು.

ನಾಪೋಕ್ಲು: ಅಂಚೆ ಪೇದೆಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಕಿರುನಾಡು ಗ್ರಾಮದ ಬಿಟ್ಟಿರ ಮಾದಪ್ಪ ಅವರನ್ನು ಭಗವತಿ ಸ್ತ್ರೀಶಕ್ತಿ ಸಂಘದ ವತಿಯಿಂದ ಸನ್ಮಾನಿಸಲಾಯಿತು.

ವೇದಿಕೆಯಲ್ಲಿದ್ದ ಗಣ್ಯರು ತಮ್ಮ ಗ್ರಾಮದಲ್ಲಿ 45 ವರ್ಷಗಳಿಂದ ಸೇವೆ ಸಲ್ಲಿಸಿ ಇದೀಗ ನಿವೃತ್ತಿ ಹೊಂದಿದ ಬಿಟ್ಟಿರ ಮಾದಪ್ಪ ಅವರನ್ನು ಗುಣಗಾನ ಮಾಡಿ ಶುಭ ಹಾರೈಸಿದರು. ಬಳಿಕ ಭಗವತಿ ಸ್ತ್ರೀ ಶಕ್ತಿ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ನಿವೃತ್ತ ಬಿಟ್ಟಿರ ಮಾದಪ್ಪ ಹಾಗೂ ಜೊತೆಯಲ್ಲಿ ಅವರ ಧರ್ಮಪತ್ನಿಯನ್ನು ಶಾಲು ಹೊದಿಸಿ ಫಲ ತಾಂಬೂಲ ನೀಡಿ ಸನ್ಮಾನಿಸಿ ಗೌರವಿಸಿದರು

ಈ ಸಂದರ್ಭ ಪಾಡೆಯಂಡ ಯಶೋಧ ಅವರ ಅಧ್ಯಕ್ಷತೆಯಲ್ಲಿ ಕಿರುದಾಡು ಅಂಗನವಾಡಿ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಗವತಿ ಸ್ತ್ರೀ ಶಕ್ತಿ ಸಂಘದ ಕಾರ್ಯದರ್ಶಿ, ನಾಳಿಯಂಡ ಅನಿತಾ, ಪಳಂಗಡ ಭಾನುಮತಿ, ನಾಳಿಯಂಡ ತಾರ, ಮಚಂಡ ಶಿಲ್ಪ, ಕುಂಬಂಡ ವನಿತಾ, ಬಾದುಮಂಡ ಮಮತ, ನಾಟೋಳಂಡ ಭಾಗೀರಥಿ, ಭೋಜಮ್ಮ, ಬಿಟ್ಟಿರ, ಪ್ರೇಮ, ರಾಧಾಮಣಿ, ಪಳಗಂಡ ದಾಟಿ, ರಾಣಿ, ಎಚ್.ಎ ದೇವಮಾಜಿ ಉಪಸ್ಥಿತರಿದ್ದರು.

ಕೊಡಗು ಜಿಲ್ಲೆಯಲ್ಲಿ 9 ಕಳವು ಪ್ರಕರಣ ಪತ್ತೆ

20 ಮಂದಿ ಬಂಧನ, ಚಿನ್ನಾಭರಣ, ನಗದು, ಕಾಫಿ, ಮೆಣಸು, ಕಾರುಗಳು, ದ್ವಿಚಕ್ರ ವಾಹನ, ಮೊಬೈಲ್ ವಶ



ವಶಪಡಿಸಿಕೊಂಡ ಪದಾರ್ಥಗಳೊಂದಿಗೆ ಸುದ್ದಿಗೋಷ್ಠಿ ನಡೆಸಿದ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ

ಮಡಿಕೇರಿ,ಏ.11– ಕೊಡಗು ಜಿಲ್ಲಾ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2025–26ನೇ ಸಾಲಿನಲ್ಲಿ ನಡೆದಿದ್ದ 9 ಕಳವು ಪ್ರಕರಣಗಳನ್ನು ಬೇಧಿಸಿ ಒಟ್ಟು 20 ಆರೋಪಿಗಳನ್ನು ಬಂಧಿಸಲಾಗಿದೆ. ಮಾತ್ರವಲ್ಲದೇ ಆರೋಪಿಗಳಿಂದ ಹಲವು ಸ್ವತ್ತುಗಳನ್ನು ವಶಕ್ಕೆ ಪಡೆದಿದ್ದು, ಅದನ್ನು ಅದರ ಮೂಲ ಮಾಲೀಕರಿಗೆ ಹಸ್ತಾಂತರ ಮಾಡಲಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಮಾಹಿತಿ ನೀಡಿದರು.

ಜಿಲ್ಲಾ ಪೊಲೀಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್.ಪಿ. ಬಿಂದುಮಣಿ, ವಿವಿಧ ಕಳವು ಪ್ರಕರಣಗಳಲ್ಲಿ ಒಟ್ಟು 228.19 ಗ್ರಾಂ ಚಿನ್ನಾಭರಣ, 2 ಕೆ.ಜಿ. 422 ಗ್ರಾಂ ಬೆಳ್ಳಿ ಆಭರಣ, 6.97 ಲಕ್ಷ ರೂ. ನಗದು, 6495 ಕೆ.ಜಿ ಕಾಫಿ, 75 ಕೆ.ಜಿ ಕರಿಮೆಣಸು, 5 ಚೀಲ ಪಾರ್ಚ್‌ಮೆಂಟ್ ಕಾಫಿ, 2 ಕಾರು, 1 ದ್ವಿಚಕ್ರ ವಾಹನ, 5 ಮೊಬೈಲ್ ಫೋನ್‌ಗಳನ್ನು ಕಳವು ಆರೋಪಿಗಳಿಂದ ಮರಳಿ ವಶಕ್ಕೆ ಪಡೆಯಲಾಗಿದೆ ಎಂದು ಮಾಹಿತಿ ನೀಡಿದರು. ಇದರ ಜೊತೆಯಲ್ಲಿಯೇ ಮೊಬೈಲ್ ಕಳೆದು ಹೋದ ಪ್ರಕರಣವನ್ನು ಪರಿಗಣಿಸಿ ಒಟ್ಟು 54 ಮೊಬೈಲ್ ಫೋನ್‌ಗಳನ್ನು ಕೂಡ ಮರಳಿ ಪಡೆಯಲಾಗಿದೆ ಎಂದು ಹೇಳಿದರು.

ಸ್ವತ್ತುಗಳು ಮಾಲೀಕರಿಗೆ: ವಿವಿಧ ಕಳವು ಪ್ರಕರಣಗಳಲ್ಲಿ ಸ್ವತ್ತುಗಳನ್ನು ಕಳೆದುಕೊಂಡ ಮಾಲೀಕರಿಗೆ ಕಾನೂನಾತ್ಮಕವಾಗಿ ಅದನ್ನು ಹಸ್ತಾಂತರ ಮಾಡಲಾಗುತ್ತದೆ. ಸ್ವತ್ತುಗಳ ವಿವರ ಮತ್ತು ಸಂಪೂರ್ಣ ಮಾಹಿತಿ ಇಲಾಖೆ ಬಳಿ ಇದ್ದು, ಸ್ವತ್ತುಗಳ ಮಾಲೀಕರಿಗೂ ಈ ಕುರಿತು ಆಯಾ ಠಾಣೆ ವ್ಯಾಪ್ತಿಯಿಂದ ಸಂಪರ್ಕ ಮಾಡಿ ಮಾಹಿತಿ ನೀಡಲಾಗಿದೆ. ಕಳವು ಪ್ರಕರಣಗಳನ್ನು ಪತ್ತೆ ಹಚ್ಚಿ ಸ್ವತ್ತುಗಳನ್ನು ವಶಕ್ಕೆ ಪಡೆಯುವಲ್ಲಿ ಪೊಲೀಸ್ ಇಲಾಖೆ ಸಿಬ್ಬಂದಿಗಳ ಶ್ರಮ ಅಧಿಕಾರಿಗಳ ಮಾರ್ಗದರ್ಶನವೂ ಇದೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕಾರ್ಯಕ್ಕೆ ಅಭಿನಂದನೆ ಸಲ್ಲಿಸುವುದಾಗಿ ಎಸ್.ಪಿ. ಬಿಂದುಮಣಿ ಹೇಳಿದರು. ಮೊಬೈಲ್ ಕಳೆದುಕೊಂಡ ಸಂದರ್ಭ ಸಮೀಪದ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಬೇಕು. ಇದರಿಂದ ಶೀಘ್ರದಲ್ಲಿಯೇ ಮೊಬೈಲ್ ಫೋನ್ ಗಳನ್ನು ಪತ್ತೆ ಹಚ್ಚಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಸುದ್ದಿಗೋಷ್ಠಿ ಬಳಿಕ ಪೊಲೀಸ್ ಭವನದಲ್ಲಿ ಉಪಸ್ಥಿತರಿದ್ದ ಸ್ವತ್ತುಗಳ ಮಾಲೀಕರಿಗೆ ಎಸ್‌ಪಿ ಬಿಂದುಮಣಿ ಅವರು ಚಿನ್ನಾಭರಣ, ನಗದು, ಮೊಬೈಲ್ ಫೋನ್‌ಗಳನ್ನು ಹಸ್ತಾಂತರಿಸಿದರು. ಈ ಸಂದರ್ಭ ವಿವಿಧ ಠಾಣೆಗಳ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಜರಿದ್ದರು.

ಏ.14ರಂದು ಅಂಬೇಡ್ಕರ್, ಬಾಬೂಜಿ ಜನ್ಮ ದಿನಾಚರಣೆ

ಮಡಿಕೇರಿ, ಏ.11– ತಾಲೂಕು ಆಡಳಿತ, ತಾಲೂಕು ಪಂಚಾಯತ್, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ವಿರಾಜಪೇಟೆ ತಾಲೂಕು ಹಾಗೂ ಪೊನ್ನಂಪೇಟೆ ಪಟ್ಟಣ ಪಂಚಾಯಿತಿ ವತಿಯಿಂದ ಭಾರತರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಹಾಗೂ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ್ ರಾಮ್ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮವು ಏಪ್ರಿಲ್, 14ರಂದು ಬೆಳಗ್ಗೆ 10.30 ಗಂಟೆಗೆ ಪೊನ್ನಂಪೇಟೆ ಸರ್ಕಾರಿ ಜೂನಿಯರ್ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ರಸ್ತೆ ದಾಟುತ್ತಿದ್ದ ಆನೆ ಕಂಡು ಬಿದ್ದು ಗಾಯಗೊಂಡ ದ್ವಿಚಕ್ರ ವಾಹನ ಸವಾರ



ಮಡಿಕೇರಿ: ರಸ್ತೆ ದಾಟುತ್ತಿದ್ದ ಕಾಡಾನೆಯನ್ನು ಕಂಡು ದ್ವಿಚಕ್ರ ವಾಹನ ಸವಾರರೊಬ್ಬರು ಬಿದ್ದು ಗಾಯಗೊಂಡ ಘಟನೆ ಪೊನ್ನಂಪೇಟೆ ತಾಲೂಕಿನ ಕುಟ್ಟ ಕಾಯಿಮಾನಿ ಬಳಿ ನಡೆದಿದೆ. ಪೂಜೆಕಲ್ಲ್ ನಿವಾಸಿ ಆರ್ಮುಗಮ್(65) ಗಾಯಗೊಂಡವರು.

ಅರ್ಮುಗಮ್ ಅವರು ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಸಂದರ್ಭ ಕಾಯಿಮಾನಿ ಕಾಫಿ ಮಿಲ್ ಸಮೀಪ ಕಾಡಾನೆಯೊಂದು ರಸ್ತೆ ದಾಟುತ್ತಿತ್ತು. ಇದನ್ನು ಕಂಡು ಆರ್ಮುಗಮ್ ಅವರು ಭಯ ಭೀತರಾಗಿದ್ದು, ದ್ವಿಚಕ್ರ ವಾಹನ ನಿಯಂತ್ರಣ ಕಳೆದುಕೊಂಡು ರಸ್ತೆಗೆ ಬಿದ್ದಿದ್ದು, ಸಣ್ಣಪುಟ್ಟ ಗಾಯಗಳಾಗಿದೆ.

ಇದೇ ರಸ್ತೆಯಲ್ಲಿ ಗಸ್ತು ತಿರುಗುತ್ತಿದ್ದ ಶ್ರೀಮಂಗಲ ಅರಣ್ಯ ಇಲಾಖೆ ಸಿಬ್ಬಂದಿಗಳು ಗಾಯಾಳುವನ್ನು ಕುಟ್ಟ ಆಸ್ಪತ್ರೆಗೆ ದಾಖಲಿಸಿದ್ದಾರೆ. ಶ್ರೀಮಂಗಲ ವಲಯ ಅರಣ್ಯಾಧಿಕಾರಿ ಅರವಿಂದ್ ನೇತೃತ್ವದಲ್ಲಿ ಕುಟ್ಟ–ಕಾಯಿಮಾನಿ ಸುತ್ತಮುತ್ತ ಪ್ರದೇಶದಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೆ ಅರಣ್ಯ ಸಿಬ್ಬಂದಿಗಳ ಬೀಟ್ ಅನ್ನು ಹೆಚ್ಚಿಸಲಾಗಿದೆ.

ಮಕ್ಕಳ ಚಿತ್ರ ಕೋಟೆ ಬೆಟ್ಟಕ್ಕೆ ಮಹೂರ್ತ



ಮಡಿಕೇರಿ,ಏ.11– ಕಂದೀಲು ಕನ್ನಡ ಚಿತ್ರಕ್ಕಾಗಿ ರಾಷ್ಟ್ರ ಪ್ರಶಸ್ತಿ ಪಡೆದ ಕೊಡಗಿನ ಸಿನಿಮಾ ನಿರ್ಮಾಪಕಿ ಹಾಗೂ ನಿರ್ದೇಶಕಿ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ಅವರ ನೂತನ ಮಕ್ಕಳ ಚಿತ್ರ ಕೋಟೆಬೆಟ್ಟದ ಚಿತ್ರೀಕರಣಕ್ಕೆ ನಗರದ ಶ್ರೀ ಆಂಜನೇಯ ದೇವಾಲಯದಲ್ಲಿ ಮುಹೂರ್ತ ಪೂಜೆ ನೆರವೇರಿತು.

ಕೊಡವ ಭಾಷೆಯ ಚಿತ್ರ ಕೋಟೆ ಬೆಟ್ಟಕ್ಕೆ ಕ್ಲಾಪ್ ನೆರವೇರಿಸಿ ಮಾತನಾಡಿದ ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ, ಕೊಡಗಿನಲ್ಲಿ ಈಶ್ವರನ ಸನ್ನಿಧಿಯಾಗಿ ಪೌರಾಣಿಕ ಮಹತ್ವ ಹೊಂದಿರುವ ಕೋಟೆ ಬೆಟ್ಟದ ಹಿನ್ನೆಲೆ ಹೊಂದಿರುವ ಮಕ್ಕಳ ಚಿತ್ರ ನಿರ್ಮಾಣ ಮಾಡುತ್ತಿರುವುದು ಉತ್ತಮ ಪ್ರಯತ್ನ ಎಂದರು. ಮಕ್ಕಳಿಗೆ ತಿಳವಳಿಕೆ ನೀಡುವ ನಿಟ್ಟಿನಲ್ಲಿ ಇಂತಹ ಸಿನಿಮಾ ನಿರ್ಮಾಣ ಶ್ಲಾಘನೀಯ. ಕೋಟೆ ಬೆಟ್ಟ ಈಶ್ವರನ ಮಹತ್ವದ ಬಗ್ಗೆಯೂ ಚಿತ್ರ ಬಿಂಬಿಸಲಿ ಎಂದರು.

ಹಿರಿಯ ಪತ್ರಕರ್ತ ಅನಿಲ್ ಹೆಚ್.ಟಿ. ಮಾತನಾಡಿ, ಕಂದೀಲು ಕನ್ನಡ ಚಿತ್ರದ ಮೂಲಕ ಸಿನಿಮಾಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದ ಕೊಡಗಿನ ಪ್ರಥಮ ಮತ್ತು ಕರ್ನಾಟಕದ 4ನೇ ಮಹಿಳೆ ಎಂಬ ಹಿರಿಮೆಯಿರುವ ಯಶೋಧ ಪ್ರಕಾಶ್ ಈಗ ಕೋಟೆ ಬೆಟ್ಟ ಚಿತ್ರದ ಮೂಲಕ ಟ್ಯಾಬ್ ಟು ಲಗೋರಿ ಎಂಬ ಉಪಶೀರ್ಷಿಕೆಯ ಸಂದೇಶವುಳ್ಳ ಚಿತ್ರ ನಿರ್ಮಾಣ ಮಾಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಬೇಸಿಗೆ ರಜೆಯಲ್ಲಿಯೂ ಲ್ಯಾಪ್‌ಟಾಪ್, ಮೊಬೈಲ್ ನಲ್ಲಿಯೇ ಕಾಲಕಳೆಯುತ್ತಿರುವ ಮಕ್ಕಳಿಗೆ ಗ್ರಾಮೀಣ ಸಂಸ್ಕೃತಿ, ಗ್ರಾಮೀಣ ಕ್ರೀಡೆಯ ಪರಿಚಯ ಅತ್ಯಗತ್ಯ ಈ ನಿಟ್ಟಿನಲ್ಲಿ ಕೋಟೆ ಬೆಟ್ಟ ಸಿನಿಮಾವು ಕೊಡಗಿನ ಮೂಲ ಸಂಸ್ಕೃತಿ ಯನ್ನು ಜಾಗತಿಕ ಮಟ್ಟಕ್ಕೆ ತಿಳಿಸುವಂತಾಗಲಿ ಎಂದರು.

ಹೊನ್ನಹಳ್ಳಿ ಪಿಎಸಿಸಿಗೆ ವೃಷಭೇಂದ್ರಪ್ಪ ಸತತ ಮೂರನೇ ಬಾರಿ ಅಧ್ಯಕ್ಷ



ಮೂರನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾದ ವೃಷಭೇಂದ್ರಪ್ಪ ಅವರನ್ನು ಅಭಿನಂದಿಸಲಾಯಿತು.

> ಸಂಘದ ಎಲ್ಲಾ ಸದಸ್ಯರು ನಮ್ಮ ಕಾರ್ಯವೈಖರಿ ಹಾಗೂ ಸಂಘದ ಅಭಿವೃದ್ಧಿಯನ್ನು ಬಯಸಿ ಮತ್ತೇ ನಮ್ಮ ತಂಡವನ್ನೇ ಗೆಲ್ಲಿಸಿರುವುದಕ್ಕೆ ಅಭಾರಿಯಾಗಿದ್ದೇನೆ. ನಿಮ್ಮೆಲ್ಲರ ಪ್ರೀತಿ ವಿಶ್ವಾಸಕ್ಕೆ ಸ್ವಲ್ಪವು ಚ್ಯುತಿ ಬರದಂತೆ ಕಾರ್ಯ ನಿರ್ವಹಿಸುವುದು, ಸಂಘವನ್ನು ಮತ್ತಷ್ಟು ಬಲವರ್ಧನೆ ಮಾಡುವುದೇ ನಮ್ಮ ಧ್ಯೇಯ. – **ವೃಷಭೇಂದ್ರಪ್ಪ, ಅಧ್ಯಕ್ಷ, ಪಿಎಸಿಸಿ ಬ್ಯಾಂಕ್**

ಚಾಮರಾಜನಗರ: ತಾಲೂಕಿನ ಹೊನ್ನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಪಿ. ವೃಷಭೇಂದ್ರಪ್ಪ ಸತತ ಮೂರನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಡಿಸಿಸಿ ಬ್ಯಾಂಕ್ ನಿರ್ದೇಶಕರ ಸ್ಥಾನದ ಚುನಾವಣೆಯಲ್ಲಿ ವೃಷಭೇಂದ್ರಪ್ಪ, ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಪ್ರತಿಸ್ಪರ್ಧಿಯಾಗಿ ಸಾಕಷ್ಟು ಪೈಪೋಟಿ ನೀಡಿದ್ದರು. ಕೂದಲೆಳೆ ಅಂತರದಲ್ಲಿ ಸೋಲು ಕಂಡಿದ್ದರು. ಇದೀಗ ಮತ್ತೆ ಅವರು ತಮ್ಮ ಸ್ಥಳೀಯ ಸಂಘದಲ್ಲಿ ಪ್ರಭುತ್ವ ಮೆರೆದಿದ್ದಾರೆ. ಇನ್ನು ಉಪಾಧ್ಯಕ್ಷರಾಗಿ ಮಹದೇವಸ್ವಾಮಿ ಸಹ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಪಿ.ವೃಷಭಸೇಂದ್ರಪ್ಪ ಸಹಕಾರ ಸಂಘದ ಅಭಿವೃದ್ಧಿಗೆ ಶ್ರಮಿಸಿದ್ದರು, ಮೂರನೇ ಅವಧಿಗೂ ಸಹ ಅಧ್ಯಕ್ಷರಾಗುವ ನಿಟ್ಟಿನಲ್ಲಿ ಚುನಾವಣೆ ಪ್ರಕ್ರಿಯೆ ಆರಂಭಗೊಂಡು ತಮ್ಮ ಬಣದ 10 ಮಂದಿಯನ್ನು ಗೆಲ್ಲಿಸಿಕೊಳ್ಳುವ ಮೂಲಕ ಮೂರನೇ ಅವಧಿಗೂ ಸಂಘದ ಅಧ್ಯಕ್ಷ ಸ್ಥಾನವನ್ನು ಹಿಡಿಯುವಲ್ಲಿ ಹಾಗು ಬಿಜೆಪಿ ವಶಕ್ಕೆ ಸಹಕಾರ ಸಂಘವನ್ನು ಪಡೆಯುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಇವರಿಬ್ಬರ ಹೊರತಾಗಿ ಮತ್ಯಾರು ನಾಮಪತ್ರ ಸಲ್ಲಿಸಿರಲಿಲ್ಲ. ಹೀಗಾಗಿ ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಅಧೀಕ್ಷಕ ನಾಗೇಶ್ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು.

ನಿರ್ದೇಶಕರಾದ ಸುರೇಶ್, ಸಿದ್ದಪ್ಪ ದೊರೆಸ್ವಾಮಿ, ಚಿಕ್ಕಮಾದೇಗೌಡ, ವಿ.ಸಿ. ಮಹೇಶ್, ಚಿಕ್ಕಸಿದ್ದಯ್ಯ, ಮಹೇಶ್, ನಾಗಲಾಂಬಿಕಾ, ಬಸಮ್ಮಣಿ, ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಹೇಶ್ ಹಾಜರಿದ್ದರು.

ಮಳೆ ಅವಾಂತರ, ರಸ್ತೆಯಲ್ಲಿ ಕೊಳಚೆ ನೀರು

ಸ್ಥಳಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ನಗರಸಭೆ ಸಿಬ್ಬಂದಿ ಜತೆ ಭೇಟಿ



ಮಳೆ ಹಾನಿ ಪ್ರದೇಶಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ನಗರಸಭೆ ಸಿಬ್ಬಂದಿ ಜತೆ ಭೇಟಿ ನೀಡಿರುವುದು.

ಚಾಮರಾಜನಗರ, ಏ.11– ಮಳೆ ಬಂದ ವೇಳೆ ದೊಡ್ಡಮೋರಿಯಂತಾಗುವ ನಗರದ ದೊಡ್ಡಂಗಡಿ ಬೀದಿ, ಚಿಕ್ಕಅಂಗಡಿಬೀದಿ ಸೇರಿದಂತೆ ಕೊಳಚೆ ನೀರು ರಸ್ತೆಯಲ್ಲಿ ಹರಿಯುವ ವಿವಿಧ ಸ್ಥಳಗಳಿಗೆ ಶನಿವಾರ ಮುಂಜಾನೆ ಶಾಸಕ ಸಿ.ಪುಟ್ಟರಂಗಶೆಟ್ಟಿ ನಗರಸಭೆ ಸಿಬ್ಬಂದಿ ಜತೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಾರ್ವಜನಿಕರ ದೂರಿನ ಮೇರೆಗೆ ಭೇಟಿ ನೀಡಿದ್ದ ಶಾಸಕರು ಚರಂಡಿಯಲ್ಲಿ ಸಂಗ್ರಹವಾಗಿರುವ ತ್ಯಾಜ್ಯದ ಪರಿಣಾಮ, ಚರಂಡಿನೀರು ಸರಾಗವಾಗಿ ಹರಿದು ಹೋಗಲು ಸಾಧ್ಯವಾಗುತ್ತಿಲ್ಲ. ಅಂಗಡಿ ವ್ಯಾಪಾರಿಗಳು ಕಸಕಡ್ಡಿಗಳನ್ನು ಚರಂಡಿಗೆ ಎಸೆಯಬಾರದು. ತ್ಯಾಜ್ಯ ತೆರವು ಮಾಡಲು ನಗರಸಭೆ ಪೌರಕಾರ್ಮಿಕರಿಗೆ ಸಹಕಾರ ನೀಡಬೇಕು. ಎಲ್ಲೆಲ್ಲಿ ಚರಂಡಿಯಲ್ಲಿ ಹೆಚ್ಚಿನ ತ್ಯಾಜ್ಯ ಸಂಗ್ರಹವಾಗಿದೆ ಎಂಬುದನ್ನು ಖುದ್ದು ಭೇಟಿ ನೀಡಿ ಪರಿಶೀಲಿಸಿ ಹೂಳು ತೆರವಿಗೆ ಕ್ರಮವಹಿಸಬೇಕು ಎಂದು ಸ್ಥಳದಲ್ಲಿದ್ದ ನಗರಸಭೆ ಆಯುಕ್ತರಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ನಗರಸಭೆ ಆಯುಕ್ತ ಪರಶುರಾಂಛಲವಾದಿ, ಆರೋಗ್ಯ ನಿರೀಕ್ಷಕ ಮಂಜು ಹಾಜರಿದ್ದರು.

ಹಸಗೂಲಿ ಡೇರಿಯ ನೂತನ ಸಭಾ ಭವನ ಉದ್ಘಾಟನೆ



ಸಭಾಭವನವನ್ನು ಚಾಮುಲ್ ಅಧ್ಯಕ್ಷ ಎಂ.ನಂಜುಂಡ ಸ್ವಾಮಿ ಉದ್ಘಾಟಿಸಿದರು

ಗುಂಡ್ಲುಪೇಟೆ, ಏ.11– ತಾಲೂಕಿನ ಹಸಗೂಲಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಸಭಾಭವನ ಕಟ್ಟಡವನ್ನು ಚಾಮುಲ್ ಅಧ್ಯಕ್ಷ ಎಂ.ನಂಜುಂಡ ಸ್ವಾಮಿ ರವರು ಉದ್ಘಾಟಿಸಿದರು

ಈ ವೇಳೆ ಮಾತನಾಡಿದ ಅವರು ಚಾಮುಲ್ ವತಿಯಿಂದ ನೂತನ ಕಟ್ಟಡ, ದುರಸ್ತಿ ಹಾಗೂ ಸಭಾಭವನ ಕಟ್ಟಡಗಳಿಗೆ ಅನುದಾನ ನೀಡುತ್ತಿದ್ದು ಅದರ ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.

ಶಿಲಾನ್ಯಾಸ ಅನಾವರಣ ಮಾಡಿದ ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರು ಹಾಗೂ ಚಾಮುಲ್ ನಿರ್ದೇಶಕರಾದ ಎಚ್.ಎಸ್.ನಂಜುಂಡ ಪ್ರಸಾದ್ ಅವರು ಮಾತನಾಡುತ್ತಾ ಚಾಮುಲ್ ವತಿಯಿಂದ ಸಾಕಷ್ಟು ಸೌಲಭ್ಯಗಳನ್ನು ನೀಡುತ್ತಿದ್ದು ರಾಸುವಿಮೆ, ಉತ್ಪಾದಕರಿಗೆ ಮರಣ ಪರಿಹಾರ, ಶೇಕಡ 50ರ ಅನುದಾನದಲ್ಲಿ ಮೇವು ತುಂಡರಿಸುವ ಯಂತ್ರ ಹಾಗೂ ಹಾಲು ಕರೆಯುವ ಯಂತ್ರ, ರಾಸುಗಳಿಗೆ ತುರ್ತು ಚಿಕಿತ್ಸೆಗೆ ವೈದ್ಯರ ಸೇವೆ ನೀಡುತ್ತಿದ್ದು ಇದರ ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.

ಸಭೆಯ ಜ್ಯೋತಿ ಬೆಳಗಿಸಿ ಮಾತನಾಡಿದ ಚಾಮುಲ್ ನಿರ್ದೇಶಕರು ಹಾಗೂ ಎಮ್‌ಸಿ ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷರಾದ ಎಂ.ಪಿ.ಸುನಿಲ್ ಅವರು ಸಹಕಾರ ಸಂಘಗಳು ಸಹಕಾರ ತತ್ವದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು ಸಂಘದಲ್ಲಿ ಪರಸ್ಪರ ಸಹಕಾರದಿಂದ ಕಾರ್ಯ ನಿರ್ವಹಿಸಿದರೆ ಮಾತ್ರ ಸಂಘದ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿಸ್ತರಣಾಧಿಕಾರಿ ಪ್ರಕಾಶ್ ಹೆಚ್ ಹಾಗೂ ಸಿದ್ದಲಿಂಗೇಶ ಕೋರಿ, ಸಂಘದ ಅಧ್ಯಕ್ಷ ಎಚ್.ಎಂ ನಾಗರಾಜು ಉಪಾಧ್ಯಕ್ಷ ನಿಂಗಪ್ಪ, ಸಂಘದ ನಿರ್ದೇಶಕರಾದ ಎಚ್.ಎಸ್.ಬಸವಣ್ಣ, ಹೆಚ್.ಬಿ ಉಮೇಶ್, ಎಚ್.ಎಮ್.ಮಹದೇವಪ್ಪ, ಬಸವರಾಜು, ಎಚ್.ಸಿ.ಮಲ್ಲೇಶ್, ಮಹದೇವ ಶೆಟ್ಟಿ, ಶಿವಯ್ಯ, ಶ್ರೀಮತಿ ಬಸಮ್ಮಣ್ಣಿ, ದಾಕ್ಷಾಯಿಣಿ, ನಾಗಪ್ಪ , ಮುಖ್ಯ ಕಾರ್ಯನಿರ್ವಕರಾದ ಎಚ್‌ಎಸ್ ಮಹೇಶ್ ಸಿಬ್ಬಂದಿಗಳಾದ ದರ್ಶನ್ ಗಂಗಾಧರ ರೇವಣ್ಣ ಸುರೇಶ್ ಹಾಗೂ ಸಂಘದ ಸದಸ್ಯರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಕೆ.ಎಸ್.ನಾಗರತ್ನಮ್ಮ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ

ಗುಂಡ್ಲುಪೇಟೆ, ಏ.11– ಇಲ್ಲಿನ ಶ್ರೀಮತಿ ಕೆ.ಎಸ್.ನಾಗರತ್ನಮ್ಮ ಪದವಿಪೂರ್ವ ಕಾಲೇಜಿಗೆ ಕಲಾವಿಭಾಗದಲ್ಲಿ ಶೇಕಡ 84 ಮತ್ತು ವಾಣಿಜ್ಯ ವಿಭಾಗದಲ್ಲಿ 88% ರಷ್ಟು ಫಲಿತಾಂಶ ಬಂದಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಎಂ.ಪಿ ಸುನಿಲ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ಪರೀಕ್ಷೆಗೆ ಹಾಜರಾದ 135 ವಿದ್ಯಾರ್ಥಿಗಳಲ್ಲಿ 118 ವಿದ್ಯಾರ್ಥಿಗಳು ತೇರ್ಗಡೆ ಹೊಂದುವುದರೊಂದಿಗೆ ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಒಟ್ಟು ಸೇರಿಸಿ ನಮ್ಮ ಸಂಸ್ಥೆಯು ಶೇಕಡ 87.5ರಷ್ಟು ಫಲಿತಾಂಶವನ್ನು ಪಡೆದಿದೆ. ಕಲಾವಿಭಾಗದ ಪ್ರೀತಿ ಎಂಬ ವಿದ್ಯಾರ್ಥಿನಿಯು 600 ಕ್ಕೆ 558 ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಸಫಿಯಾ ಬಾನು 600 ಕ್ಕೆ 572 ಅಂಕಗಳನ್ನು ಗಳಿಸುವುದರೊಂದಿಗೆ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಇದಲ್ಲದೆ ಕಲಾವಿಭಾಗದಲ್ಲಿ ಅತ್ಯುನ್ನತ ಶ್ರೇಣಿ ಮೂರು ಪ್ರಥಮ ಶ್ರೇಣಿ ಹದಿನಾರು ದ್ವಿತೀಯ ಶ್ರೇಣಿ 12 ತೃತೀಯ ಎರಡು ವಾಣಿಜ್ಯ ವಿಭಾಗದಲ್ಲಿ ಅತ್ಯುನ್ನತ ಶ್ರೇಣಿ ಹದಿನೈದು ಪ್ರಥಮ ಶ್ರೇಣಿ 52 ದ್ವಿತೀಯ ಶ್ರೇಣಿ 16 , ದ್ವಿತೀಯ ಶ್ರೇಣಿಯಲ್ಲಿ ಇಬ್ಬರು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಜವಾಹರ್ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿಯ ಪರವಾಗಿ ಸಂಸ್ಥೆಯ ಅಧ್ಯಕ್ಷ ಎಸ್ ರಾಜಶೇಖರ್ ಮತ್ತು ಗೌರವ ಕಾರ್ಯದರ್ಶಿ ಎಂ ಪಿ ಸುನಿಲ್ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗವನ್ನು ಅಭಿನಂದಿಸಿದ್ದಾರೆ.

ಉದ್ಬೂರ್ ಬಳಿ ಕೆಟ್ಟು ನಿಂತ ಕೆಎಸ್‌ಆರ್‌ಟಿಸಿ ಬಸ್



ಮೈಸೂರು, ಏ.11(ಎಸ್‌ಪಿಎನ್)– ಮೈಸೂರು–ಮಾನಂದವಾಡಿ ಹೆದ್ದಾರಿಯ ಉದ್ಬೂರು ಗೇಟ್ ಬಳಿ ಹೆಚ್.ಡಿ. ಕೋಟೆ ಡಿಪೋಗೆ ಸೇರಿದ ಕೆಎಸ್‌ಆರ್‌ಟಿಸಿ ಸಾರಿಗೆ (ಕೆಎ.09.ಎಫ್.4928) ಬಸ್‌ನ ಆಕ್ಸಿಲ್ ಬ್ಲೇಡ್ ಕಟ್ ಆಗಿ ಹೆದ್ದಾರಿ ಮಧ್ಯೆ ನಿಂತಿದ್ದು, ಸಂಚಾರ ಅಸ್ತವ್ಯಸ್ತಗೊಂಡಿತು.

ರಾಜ್ಯ ಸರ್ಕಾರ ಮಹಿಳಾ ಸಬಲೀಕರಣ ನೆಪದಲ್ಲಿ ಮಹಿಳೆಯರಿಗೆ ಉಚಿತ ಪಯಣಕ್ಕೆ 'ಶಕ್ತಿ ಯೋಜನೆ' ಜಾರಿಗೊಳಿಸಿದೆ. ಆದರೆ, ಎಲ್ಲೆಂದ್ದರಲ್ಲಿ ಕೆಟ್ಟು ನಿಲ್ಲುತ್ತಿರುವ ಸಾರಿಗೆ ಬಸ್‌ಗಳ ಅವ್ಯವಸ್ಥೆ ಕಂಡು ಶಕ್ತಿ ಯೋಜನೆ ಜಾರಿಗೊಳಿಸಿ ಏನು ಪ್ರಯೋಜನ? ಎಂದು ಮಹಿಳಾ ಪ್ರಯಾಣಿಕರು ರಾಜ್ಯ ಸರ್ಕಾರವನ್ನು ಪ್ರಶ್ನಿಸುತ್ತಿದ್ದಾರೆ.

ಶುಕ್ರವಾರ ಬೆಳಗ್ಗೆ ಉದ್ಬೂರು ಗೇಟ್ ಬಳಿ ಬಸ್ ಮೈಸೂರಿಂದ ಹೆಚ್.ಡಿ. ಕೋಟೆಗೆ ತಲುಪುವ ನಾನ್‌ಸ್ಟಾಪ್ ಬಸ್ ಬೆಳಗ್ಗೆ 11ರ ಸಮಯದಲ್ಲಿ ಆಕ್ಸಿಲ್ ಬ್ಲೇಡ್ ಕಟ್ ಆಗಿ ಕೆಟ್ಟು ನಿಂತಿದೆ. ಈ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರು ಬೇರೆ ಬಸ್‌ನಲ್ಲಿ ಪ್ರಯಾಣಿಸಲು ಸಾಧ್ಯವಾಗದೇ, ಇತ್ತ ಹಣ ತೆತ್ತು ಖಾಸಗಿ ಟೆಂಪೋಗಳಲ್ಲೂ ಸಂಚರಿಸಲು ಸಾಧ್ಯವಾಗದೇ ಕೆಎಸ್‌ಆರ್‌ಟಿಸಿ ಅಧಿಕಾರಿಗಳನ್ನು ಶಪಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಅಂಬೇಡ್ಕರ್ ಜನ್ಮ ದಿನಾಚರಣೆ

ಚಾಮರಾಜನಗರ, ಏ.11– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ, ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಏ.14ರಂದು ನಗರದಲ್ಲಿ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 9.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ರವರ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡುವರು. ಬೆಳಿಗ್ಗೆ 10.30 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಭವನದಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಮಧ್ಯಾಹ್ನ 1 ಗಂಟೆಗೆ ಸರ್ಕಾರಿ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ನಾಳೆ ಅಂಬೇಡ್ಕರ್ ಜಯಂತಿ ಅಂಗವಾಗಿ ವಿಚಾರ ಸಂಕಿರಣ

ಚಾಮರಾಜನಗರ, ಏ.11– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ, ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಪ್ರಯುಕ್ತ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳ ಕುರಿತ ವಿಚಾರ ಸಂಕಿರಣವನ್ನು ಏ.13ರಂದು ಬೆಳಗ್ಗೆ 10.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ತಿ.ನರಸೀಪುರದ ನಳಂದ ಬುದ್ಧವಿಹಾರದ ಬೋಧಿರತ್ನ ಬಂತೇಜಿ ಅವರು ದಿವ್ಯ ಸಾನಿಧ್ಯ ವಹಿಸುವರು. ಜಿಲ್ಲಾಧಿಕಾರಿ ಶ್ರೀರೂಪ ಉದ್ಘಾಟಿಸುವರು. ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ವಾಸವಿ ವಿದ್ಯಾಸಂಸ್ಥೆಯ ಉಷಾ 590, ಸಾಕ್ಷಿಗೆ 589 ಅಂಕ



ಕೊಳ್ಳೇಗಾಲ, ಏ.11– ಕೊಳ್ಳೇಗಾಲ ಪಟ್ಟಣದ ವಾಸವಿ ವಿದ್ಯಾಸಂಸ್ಥೆಗೆ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ 99.7ರಷ್ಟು ಫಲಿತಾಂಶ ದೊರೆತಿದ್ದು ಸಂಸ್ಥೆಯಲ್ಲಿ ಪರೀಕ್ಷೆಗೆ ಹಾಜರಿದ್ದ 323 ವಿದ್ಯಾರ್ಥಿಗಳ ಪೈಕಿ 320ಮಂದಿ ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಉಷಾ 590, ಸಾಕ್ಷಿ 589, ಕಾವ್ಯ ಮತ್ತು ಹಂಸ ತಲಾ 588 ಅಂಕಗಳಿಸಿದ್ದಾರೆ.

ಮೈಸೂರು ಮಿತ್ರ
ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಭಾನುವಾರ 12-04-2026



ಎಲ್ಲಿ ಹೋದರು ನಮ್ಮ-ನಿಮ್ಮ ‘ಫ್ಯಾಮಿಲಿ ಡಾಕ್ಟರ್’

ಸರ್ಕಾರಿ ಆಸ್ಪತ್ರೆಗಳಲ್ಲಿ ವಿಪರೀತ ರಶ್. ವೈದ್ಯರು ಸರಿಯಾಗಿ ನೋಡುತ್ತಾರೋ ಇಲ್ಲವೋ ಎಂಬ ಪೂರ್ವಾಗ್ರಹಪೀಡಿತ ಅನಿಸಿಕೆ. ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ದುಬಾರಿ ವೆಚ್ಚ, ಸ್ಪೆಷಲಿಸ್ಟ್‌ಗಳಿಗಾಗಿ ಕಾಯುವ ದುಗುಡ. ಅವರಿಗೆ ಒಂದೆರಡು ಪ್ರಶ್ನೆಗಳಿಗೆ ಉತ್ತರ ನೀಡಲೂ ಸಮಯ ಇಲ್ಲದಿರುವಿಕೆ, ಪ್ರಯೋಗಾಲಯ ತಪಾಸಣೆಗಳ ಉದ್ದನೆಯ ಪಟ್ಟಿ, ಇನ್ನೊಬ್ಬ ಸ್ಪೆಷಲಿಸ್ಟ್ ಹತ್ತಿರ ಹೋಗಿ ಅಭಿಪ್ರಾಯ ಪಡೆಯಿರಿ ಎನ್ನುವ ಅಲೆದಾಟ... ಇವೆಲ್ಲವುಗಳ ವ್ಯೂಹದಲ್ಲಿ ಈಗಂತೂ ರೋಗಿ ಮತ್ತು ಕುಟುಂಬದವರು ಬಳಲಿ ಬೆಂಡಾಗಿದ್ದಾರೆ.

ಹೆಚ್ಚುತ್ತಿರುವ ಆರೋಗ್ಯ ಸಂಬಂಧಿತ ಖರ್ಚುಗಳು, ಜನಸಂದಣಿಯಿಂದ ಕಿಕ್ಕಿರಿದು ತುಂಬಿರುವ ಆಸ್ಪತ್ರೆಗಳು, ಗೊಂದಲಕಾರಿ ಆರೋಗ್ಯ ಸೇವೆಗಳಿಂದಾಗಿ ಫ್ಯಾಮಿಲಿ ಡಾಕ್ಟರ್ (ಕುಟುಂಬ ವೈದ್ಯರ) ಅಗತ್ಯತೆಯನ್ನು ಸಾರಿ..ಸಾರಿ... ಹೇಳುತ್ತಿದೆ.

ಕುಟುಂಬದ ಸದಸ್ಯರ ರೋಗ ಚರಿತ್ರೆಯ ದಾಖಲಾತಿ ಅವರ ಆಪ್ತ ಸಮಾಲೋಚನೆ, ಯಾವ ಸ್ಪೆಷಲಿಸ್ಟ್‌ಗಳ ಹತ್ತಿರ ಹೆಚ್ಚಿನ ತಪಾಸಣೆ ಹಾಗೂ ಅವರ ಸಲಹೆಯಂತೆ ಔಷಧೋಪಚಾರದ ಮುಂದುವರಿಕೆ ಕುರಿತಂತೆ ಉಸ್ತುವಾರಿ ಹಾಗೂ ವಿಧ-ವಿಧದ ನಂಬಲು ಅನರ್ಹವಾದ ಆರೋಗ್ಯ ತಪಾಸಣೆ ಫಲಿತಾಂಶ, ದಾಖಲೆಗಳನ್ನು ಹಿಡಿದು ಸ್ಪೆಷಲಿಸ್ಟ್‌ನಿಂದ ಸೂಪರ್ ಸ್ಪೆಷಲಿಸ್ಟ್ ಎಂದು ಓಡಾಟ ತಪ್ಪಿಸಲು ‘ಕುಟುಂಬ ವೈದ್ಯ’ ಪದ್ಧತಿ ಪುನಃ ಅನಿವಾರ್ಯವಾಗಿದೆ.

ಹೀಗಾದಲ್ಲಿ ಮಾತ್ರ ‘ವೈದ್ಯಕೀಯ ಸೇವೆ’ಗೆ ನಿಜವಾದ ಅರ್ಥ!! ಇಲ್ಲವಾದಲ್ಲಿ ‘ವೈದ್ಯ ಉದ್ಯಮ’ ಈಗಾಗಲೇ ಸಮಾಜವನ್ನು ಬಾಧಿಸುತ್ತಿದ್ದು, ಮುಂದೆ ಗೆದ್ದಲಿನಂತೆ ವ್ಯವಸ್ಥೆಯನ್ನು ಕಾಡುವುದೆಂಬ ಭಯ ಜನರಲ್ಲಿದೆ!

ಮೊದಲಾದರೆ, ಅಂದರೆ 80ರ ದಶಕದವರೆಗೂ ‘ಫ್ಯಾಮಿಲಿ ಡಾಕ್ಟರ್’, ಜ್ವರ, ತಲೆನೋವು, ವಾಂತಿ-ಭೇದಿ, ನೆಗಡಿ, ಫ್ಲೂ ಮುಂತಾದ ಸಾಮಾನ್ಯ ಕಾಯಿಲೆಗಳಷ್ಟೇ ಅಲ್ಲ, ಟೈಫಾಯ್ಡ್, ಪ್ರಸವಪೂರ್ವ ಬಾಣಂತಿ ಪರೀಕ್ಷೆಗಳನ್ನು ಅವರೇ ಮಾಡಿ, ನೆಮ್ಮದಿ ನೀಡುತ್ತಿದ್ದರು. ಫ್ಯಾಮಿಲಿ ಡಾಕ್ಟರ್‌ಗೆ ಆ ಕುಟುಂಬದ ಮೂರು ತಲೆಮಾರು ಅಂದರೆ ಅಜ್ಜ-ಮಗ-ಮೊಮ್ಮಗ ಇವರೆಲ್ಲರ ಆರೋಗ್ಯ ಸ್ಥಿತಿಗತಿ, ಅಲರ್ಜಿ ಮುಂತಾದ ಎಲ್ಲವೂ ತಿಳಿದಿರುತ್ತಿತ್ತು.

ಅವರು ಕುಟುಂಬದ ಅವಿಭಾಜ್ಯ ಅಂಗವೇ ಆಗಿ ಎಲ್ಲರ ಆರೋಗ್ಯ ಸಮಸ್ಯೆಗಳನ್ನು ಪರಿಶೀಲಿಸಿ ಅವಶ್ಯಕತೆ ಇದ್ದಲ್ಲಿ ಪ್ರಯೋಗಾಲಯದಲ್ಲಿ ಸೂಕ್ತ ಪರೀಕ್ಷೆ ಮಾಡಿಸಿ, ನಿಶ್ಚಿತ ಸ್ಪೆಷಲಿಸ್ಟ್ ಹತ್ತಿರ ಸಲಹೆಗಾಗಿ ಕಳುಹಿಸುತ್ತಿದ್ದರು. ಎಲ್ಲ ಹಬ್ಬ-ಹರಿದಿನಗಳಲ್ಲಿ ಮದುವೆ-ಮುಂಜಿ, ಸಾವು-ನೋವುಗಳಲ್ಲಿ ಅವರು ಕುಟುಂಬದ ಸದಸ್ಯರಂತೆಯೇ ಒಳಗೊಳ್ಳುತ್ತಿದ್ದು, ಅವರ ಆಪ್ತ ಸಮಾಲೋಚನೆಯಿಂದ ರೋಗಿಯೂ ಬಹು ಬೇಗ ಚೇತರಿಸಿಕೊಳ್ಳುತ್ತಿದ್ದರು. ಸಾಮಾನ್ಯ ಕಾಯಿಲೆಗಳಷ್ಟೇ ಅಲ್ಲ, ಮಧುಮೇಹ, ರಕ್ತದೊತ್ತಡದಂತಹ ಕಾಯಿಲೆಗಳಿಗೆ ಇವರು ನೀಡುತ್ತಿದ್ದ ಸಲಹೆ, ಉಪಚಾರಗಳಿಂದಾಗಿ ಪ್ರಾಥಮಿಕ ಹಂತದಲ್ಲೇ ಸಮಸ್ಯೆ ನಿವಾರಣೆ ಆಗುತ್ತಿತ್ತು.

ಪ್ರಾಥಮಿಕ ಹಂತದ ಆರೋಗ್ಯ ವಲಯದಲ್ಲಿ ಇತ್ತೀಚಿನ ದಿನಗಳಲ್ಲಿ ಇಂತಹ ಫ್ಯಾಮಿಲಿ ಡಾಕ್ಟರ್ಸ್ ಸಂಖ್ಯೆ ಕಡಿಮೆಯಾಗಿದ್ದು, ಅವರೂ ಸಹ ಈಗ ಖಾಸಗಿ ವಲಯದಲ್ಲಿ ವೃತ್ತಿಪರರಾಗಿದ್ದಾರೆ. ಈಗ ಲಭ್ಯವಿರುವ ಫ್ಯಾಮಿಲಿ ಡಾಕ್ಟರ್ ಸರಾಸರಿ ವಯಸ್ಸೇ 65 ವರ್ಷಗಳ ಆಸುಪಾಸು. ತರುಣ ಪೀಳಿಗೆಯ ಕುಟುಂಬ ವೈದ್ಯರು ಸಿಗುವುದು ದುರ್ಲಭವಾಗಿದೆ. ಈ ತರುಣ ಪೀಳಿಗೆಯಲ್ಲಿ ಅಂತಹ ಆಸಕ್ತಿಯೂ ಕಾಣಬರುತ್ತಿಲ್ಲ!!



ರಾಷ್ಟ್ರೀಯ ವೈದ್ಯ ಪರಿಷತ್ತು ಜಾರಿಗೊಳಿಸುವ ಸಿಬಿಎಂಇ ಪಠ್ಯಕ್ರಮದಲ್ಲೂ ಸಾಮಾನ್ಯ ಕುಟುಂಬ ವೈದ್ಯಕೀಯ ವೃತ್ತಿ ಕುರಿತಂತೆ ಯಾವುದೇ ವಿಶೇಷ ತರಬೇತಿ ಇಲ್ಲ. ಎಂಬಿಬಿಎಸ್ ಪದವೀಧರರೂ ಈ ‘ಸಾಮಾನ್ಯ ವೈದ್ಯ ವೃತ್ತಿ’ಯನ್ನು ವೃತ್ತಿಪರ ಅಭಿವೃದ್ಧಿ ಮತ್ತು ಲಾಭದಾಯಕ ಉದ್ಯೋಗ ಎಂದು ಪರಿಗಣಿಸುವುದಿಲ್ಲ. ಹಾಗಾಗಿಯೇ ‘ಮಿಕ್ಸೋಪಥಿ’, ‘ಪರ್ಯಾಯ ವೈದ್ಯಕೀಯ ಪದ್ಧತಿ’ ಹಾಗೂ ಅರಬರೆ ಕಲಿತ, ನಕಲಿ ವೈದ್ಯರ ಮೊರೆ ಹೋಗಿ ಜನಸಾಮಾನ್ಯರು ಸಂಕಷ್ಟ ಎದುರಿಸುತ್ತಿರುವ ಪರಿಸ್ಥಿತಿ ಕಂಡು ಬರುತ್ತಿದೆ.

ಈ ಬದಲಾದ ಸನ್ನಿವೇಶದಲ್ಲಿ, ವಿರಳ ಸಂಖ್ಯೆಯಲ್ಲಿರುವ ಕುಟುಂಬ ವೈದ್ಯರ ಕುಗ್ಗಿರುವ ಸಂಖ್ಯಾಬಲದಿಂದಾಗಿ ರೋಗಿಗಳಿಗೆ ಇರುವ ಆಯ್ಕೆಗಳು; ಮೊದಲನೆಯದು ಒಂದು ಆರೈಕೆ ಸ್ಥಳದಲ್ಲಿನ ಲಭ್ಯ ಉಪಕರಣಗಳು ಅಂದರೆ ಗ್ಲುಕೋಮಿಟರ್, ಪಲ್ಸ್ ಆಕ್ಸಿ ಮೀಟರ್, ಪ್ರೆಗ್ನೆನ್ಸಿ ಕಿಟ್ಸ್, ಯುರಿಸ್ಟಿಕ್ಸ್, ಸ್ವತಃ ನೋಡಿಕೊಳ್ಳಬಹುದಾದ ‘ರಕ್ತದೊತ್ತಡ ಮಾಪಕ’ಗಳ ಮೊರೆ ಹೋಗುವುದು ಮತ್ತು ಸಡಿಲಾದ ವ್ಯವಸ್ಥೆಯುಳ್ಳ ‘ಫಾರ್ಮಸಿ ಲ್ಯಾಬ್‌ನಿಂದ’ ಇಂಟರ್‌ನೆಟ್ ಜ್ಞಾನಾರ್ಜನೆ ಮೂಲಕ ಸ್ವತಃ ಔಷಧೋಪಚಾರ ಮಾಡಿಕೊಳ್ಳುವುದು ಸರ್ವೇಸಾಮಾನ್ಯವಾಗಿದೆ.

ಎರಡನೆಯ ಆಯ್ಕೆ - ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ಸ್ಪೆಷಲಿಸ್ಟ್, ಸೂಪರ್ ಸ್ಪೆಷಲಿಸ್ಟ್‌ಗಳ ಸಲಹೆ ಪಡೆಯುವುದು. ಇದರಿಂದಾಗಿ ಹೃದ್ರೋಗ ತಜ್ಞರು ಈಗ ಬಹುಸಂಖ್ಯೆಯಲ್ಲಿ ರಕ್ತದೊತ್ತಡ ರೋಗಿಗಳನ್ನು, ಸ್ತ್ರೀರೋಗ ತಜ್ಞರು ಸಾಮಾನ್ಯ ಸ್ತ್ರೀರೋಗಗಳನ್ನು, ನರ ರೋಗಶಾಸ್ತ್ರಜ್ಞರು, ತಲೆನೋವು, ಫಿಟ್ಸ್‌ನಂತಹ ಕಾಯಿಲೆಯಿಂದ ಬಳಲುತ್ತಿರುವ ಅಪಾರ ಸಂಖ್ಯೆ ರೋಗಿಗಳನ್ನು ಉಪಚರಿಸುವ ಸನ್ನಿವೇಶ ಅನಿವಾರ್ಯವಾಗಿದೆ. ಇಲ್ಲಿ ಸಮಯದ ಕೊರತೆ, ಸಮಾಲೋಚನೆ, ತಿಳುವಳಿಕೆ ನೀಡುವ ಸಲಹೆಗಳ ಕೊರತೆಗಳಿಂದಾಗಿ ರೋಗಿ ಮತ್ತು ಕುಟುಂಬದವರು ಉದ್ವೇಗಕ್ಕೊಳಗಾಗುವ ಸಾಕಷ್ಟು ಪ್ರಸಂಗಗಳನ್ನು ಮನಗಾಣಬಹುದು.

ಇತ್ತೀಚಿನ ದಿನಗಳಲ್ಲಿ ಬಹುತೇಕ ಎಲ್ಲ ಮನೆಗಳಲ್ಲೂ ಗ್ಲುಕೋಮೀಟರ್, ಡಿಜಿಟಲ್ ರಕ್ತದೊತ್ತಡ ಮಾಪಕ, ಕೋವಿಡ್ ಸಮಯದಿಂದ ಪಲ್ಸ್ ಆಕ್ಸಿ-ಮೀಟರ್, ಪ್ರೆಗ್ನೆನ್ಸಿ ಕಿಟ್ಸ್ ಇರುವುದು ಸರ್ವೇಸಾಮಾನ್ಯ. ಹೀಗೆ ಸ್ಥಳದಲ್ಲೇ ಆರೈಕೆ ಕೇಂದ್ರದ ಸಾಮಗ್ರಿ ಉಪಕರಣ ಸಾಧನಗಳ ಅನಿವಾರ್ಯತೆ ಹೆಚ್ಚಾಗಿದೆ. ಈ ಉಪಕರಣಗಳು ಆರೈಕೆ ಕೇಂದ್ರದ ಬಳಿ ತಕ್ಷಣ ನೀಡುವ ಫಲಿತಾಂಶಗಳು ಬಹು ಸಹಾಯಕಾರಿ.

ಖಚಿತ ರೋಗ ನಿರ್ಧಾರದಲ್ಲಾಗಬಹುದಾದ ವಿಳಂಬವನ್ನು ಇವು ಕಡಿಮೆ ಮಡುತ್ತವೆ. ಅದರಲ್ಲೂ ಆಸ್ಪತ್ರೆ, ಪ್ರಯೋಗ ಖಾಯಿಲೆಯಿಂದ ದೂರವಿರುವ ಆರೈಕೆ ಕೇಂದ್ರಗಳಲ್ಲಿ ಅಥವಾ ಮನೆಯೊಳಗಿರಬಹುದು, ವಿಸ್ತೃತ ಆರೋಗ್ಯ ಸೇವೆಯನ್ನು ನೀಡುವಲ್ಲಿ ಪರಿಣಾಮಕಾರಿಯೂ ಹೌದು.

ವಾಸಸ್ಥಳ ಕೇಂದ್ರೀಕೃತರ ಆರೈಕೆ (Home Care) ನೀಡುವಲ್ಲಿ ಬಹುಪಯೋಗಿ ಈ ಎಲ್ಲ ಲಾಭಗಳ ಮಧ್ಯೆ, ಇಂಥ ಉಪಕರಣಗಳ ಹೇರಳ

‘ಋಣಾತ್ಮಕ ಪ್ರತಿಕಾಯ ಪರೀಕ್ಷೆ’ (Negative Antigen Test)ಯಿಂದಾಗಿ ತಪ್ಪು ಅಭಿಪ್ರಾಯ ಮೂಡಬಹುದು ಅಥವಾ ಕೆಲವು ಅಡ್ಡಗೋಡೆಯ ಮೇಲಿನ ದೀಪದಂತಹ ಫಲಿತಾಂಶಗಳು ಅಸುರಕ್ಷಿತ ಕ್ರಮ ಕೈಗೊಳ್ಳಲು ಕಾರಣವಾಗಬಹುದು. ಈ ಎಲ್ಲಾ ಫಲಿತಾಂಶಗಳು ಅಸುರಕ್ಷಿತ ಮತ್ತು ಜೀವಿರೋಧಕದಂತಹ ಔಷಧಿಗಳ ದುರುಪಯೋಗಕ್ಕೂ ಕಾರಣವಾಗುತ್ತದೆ. ಇದರಿಂದಾಗಿ ಮಿಣಿಜೀವಿಗಳು ಈ ಜೀವಿರೋಧಕಗಳು ನಿಷ್ಕ್ರೀಯವಾಗುವಂತೆ ಶಕ್ತಿ ಬೆಳೆಸಿಕೊಳ್ಳುತ್ತವೆ. ಇದರಿಂದ ಜೀವಿರೋಧಕ ಔಷಧಿಗಳು ನಿಗದಿತ, ನಿರೀಕ್ಷಿತ ಕ್ಷಮತೆಯಿಂದ ಪರಿಣಾಮ ನೀಡದೇ ವೈದ್ಯ ವಿಶ್ವಕ್ಕೇ ಸವಾಲಾಗಿದೆ.

ಬಳಕೆಯಿಂದ ‘ಸ್ವ-ವೈದ್ಯಕೀಯ’ (Self Medication) ಪ್ರವೃತ್ತಿಯೂ ಹೆಚ್ಚಾಗುತ್ತಿದೆ. ವೈದ್ಯರ ಸಲಹೆ ಇಲ್ಲದೇ ಈ ಉಪಕರಣಗಳ ಫಲಿತಾಂಶ ಬಳಸಿ ತಾವೇ ಔಷಧೋಪಚಾರ ಮಾಡಿಕೊಳ್ಳುವ ಜಾಣತನ ಹೆಚ್ಚಾಗುತ್ತಿದೆ.

ಗ್ಲುಕೋಮೀಟರ್ ಅಂಕಿ-ಅಂಶಗಳನ್ನಾಧರಿಸಿ ತಾವೇ ಮಧುಮೇಹ ಉಪಚಾರದ ಔಷಧಿಗಳ ಡೋಸೇಜ್ ಹೆಚ್ಚು-ಕಡಿಮೆ ಮಾಡಿಕೊಂಡ ಉದಾಹರಣೆಗಳು ಸಾಕ್ಷ್ಯಿವೆ. ಇಂಥ ಸಂದರ್ಭಗಳು ಸುಶಿಕ್ಷಿತರಲ್ಲಿ ಕಂಡು ಬರುತ್ತಿರುವುದು ಕಳವಳಕಾರಿ.

ಕೋವಿಡ್ ಸಮಯದಲ್ಲಂತೂ ಪಲ್ಸ್ ಆಕ್ಸಿಮೀಟರ್ ಬಳಸಿ ಜೀವಿರೋಧಕ (Antibiotics) ಮತ್ತು Ivermectin ಔಷಧಗಳನ್ನು ಸೇವಿಸಿದ, ಸಂಗ್ರಹಿಸಿದ ನಿದರ್ಶನಗಳುಂಟು.

ರಾಷ್ಟ್ರೀಯ ಸರ್ವೇಕ್ಷಣದಲ್ಲೂ ಕೂಡ ಪ್ರೆಗ್ನೆನ್ಸಿ ಕಿಟ್ಸ್‌ಗಳು ಹಾಗೂ ಫಾರ್ಮಸಿಗಳಿಂದ ದೊರೆಯುವ ‘ಅಬಾರ್ಷನ್’ ಮಾತ್ರೆಗಳ ಧಾರಾಳ ಉಪಯೋಗ ಬೆಳಕಿಗೆ ಬಂದಿದೆ. ಹೇಗೆ ಸಾಮಾನ್ಯ ಜನತೆ ಯಾವುದೇ ಪರಿಣಿತರ ಉಪಕರಣಗಳ ಉಸ್ತುವಾರಿ ಇಲ್ಲದೇ ಸ್ವವೈದ್ಯಕೀಯ ಉಪಚಾರದತ್ತ ವಾಲುತ್ತಿದ್ದಾರೆ ಎಂದು ತೋರಿಸುತ್ತದೆ.

ಇದು ಆತಂಕಕಾರಿ ಬೆಳವಣಿಗೆ : ಈ ತೆರನಾದ ‘ಆರೈಕೆ ಕೇಂದ್ರ’ ಅಥವಾ ಗೃಹ ಆರೈಕೆ ಕೇಂದ್ರಗಳ ಹಾಗೂ ಉಪಕರಣಗಳ ಬಳಕೆಯ ಗಂಭೀರ ಪರಿಣಾಮಗಳನ್ನು ಊಹಿಸಲೂ ಕಷ್ಟಸಾಧ್ಯ. ಗ್ಲುಕೋಮೀಟರ್ ತೋರಿಸುವ ಹೆಚ್ಚಿನ ಸಕ್ಕರೆ ಪ್ರಮಾಣವು ಸೇವಿಸಿದ ಆಹಾರ, ಸಮಯದ ಮೇಲೂ ಆಧರಿತವಾಗಿರಬಹುದಲ್ಲದೇ, ಅದು ಕೇವಲ ಸರಿಯಾದ ಉಪಚಾರ ಕ್ರಮ ಎಂದು ಹೇಳಲಾಗದು. ಪರಿಣಿತರ ಉಸ್ತುವಾರಿಯಿಲ್ಲದೇ ತಾವೇ ಇನ್ಸುಲಿನ್ ಅಥವಾ ಮಧುಮೇಹದ ಔಷಧದ ಡೋಸ್‌ಗಳನ್ನು ಹೆಚ್ಚಿಸಿಕೊಳ್ಳುವುದು ಜಾಣನಡೆ ಅಲ್ಲವೇ ಅಲ್ಲ. ಬದಲಾಗಿ ‘ಹೈಪೋಗ್ಲೈಸೀಮಿಯಾ’ದಂತಹ ಪ್ರಾಣಕ್ಕೂ ಕುತ್ತು ತರಬಲ್ಲ ಅಪಾಯವಿದೆ.

‘ಋಣಾತ್ಮಕ ಪ್ರತಿಕಾಯ ಪರೀಕ್ಷೆ’ (Negative Antigen Test)ಯಿಂದಾಗಿ ತಪ್ಪು ಅಭಿಪ್ರಾಯ ಮೂಡಬಹುದು ಅಥವಾ ಕೆಲವು ಅಡ್ಡಗೋಡೆಯ ಮೇಲಿನ ದೀಪದಂತಹ ಫಲಿತಾಂಶಗಳು ಅಸುರಕ್ಷಿತ ಕ್ರಮ ಕೈಗೊಳ್ಳಲು ಕಾರಣವಾಗಬಹುದು. ಈ ಎಲ್ಲಾ ಫಲಿತಾಂಶಗಳು ಅಸುರಕ್ಷಿತ ಮತ್ತು ಜೀವಿರೋಧಕದಂತಹ ಔಷಧಿಗಳ ದುರುಪಯೋಗಕ್ಕೂ ಕಾರಣವಾಗುತ್ತದೆ. ಇದರಿಂದಾಗಿ ಮಿಣಿಜೀವಿಗಳು ಈ ಜೀವಿರೋಧಕಗಳು ನಿಷ್ಕ್ರೀಯವಾಗುವಂತೆ ಶಕ್ತಿ ಬೆಳೆಸಿಕೊಳ್ಳುತವೆ. ಇದರಿಂದ ಜೀವಿರೋಧಕ ಔಷಧಿಗಳು ನಿಗದಿತ, ನಿರೀಕ್ಷಿತ ಕ್ಷಮತೆಯಿಂದ ಪರಿಣಾಮ ನೀಡದೇ ವೈದ್ಯ ವಿಶ್ವಕ್ಕೇ ಸವಾಲಾಗಿದೆ.

ಅನಿವಾರ್ಯ ಪಿಡುಗು : ಹಾಗಿದ್ದಲ್ಲಿ ಜನರೇಕೆ ಇಂಥ ಒಂದು ಪ್ರವೃತ್ತಿಯನ್ನು ಬೆಳೆಯಿಸಿಕೊಂಡಿರುತ್ತಾರೆ ಎಂಬುದು ಸಹಜ ಪ್ರಶ್ನೆ. ಇದಕ್ಕೆ ಕಾರಣಗಳನ್ನು ವಿಶ್ಲೇಷಿಸಿದಾಗ ಆಸ್ಪತ್ರೆಗಳಲ್ಲಿನ ಉದ್ದನೆಯ ಸರತಿ ಸಾಲುಗಳು, ಎಲ್ಲದಕ್ಕೂ ದುಬಾರಿ ಖರ್ಚು-ವೆಚ್ಚಗಳು, ಅವಸರಾವಸರದ ವೈದ್ಯರೊಡನೆ ಸಲಹೆ-ಸಮಾಲೋಚನೆಗಳು ಹಾಗೂ ಇಡೀ ವೈದ್ಯಕೀಯ ವ್ಯವಸ್ಥೆಯ ಮೇಲಿರುವ ಒಂದು ತೆರನಾದ ಅಪನಂಬಿಕೆ ಕಾರಣ ಎನ್ನಬಹುದು.

ನಗರ ವಾಸಿ, ಮಧ್ಯಮವರ್ಗ ನಗರದ ಜನರಿಗೆ ಸುಲಭದ ಉಪಾಯವೆಂದರೆ, ವೈದ್ಯಕೀಯ ಉಪಕರಣವೊಂದನ್ನು ಮನೆಯಲ್ಲಿಟ್ಟುಕೊಂಡು ಕಡಿಮೆ ವೆಚ್ಚದಲ್ಲಿ, ತ್ವರಿತವಾಗಿ ಸ್ವಚಿಕಿತ್ಸೆ ಮಾಡಿಕೊಳ್ಳಬಹುದಲ್ಲವೇ ಎಂಬ ಚಿಂತನೆ!! ಖಾಸಗಿ ವೈದ್ಯರ ಬಳಿಯೂ ಕಾಯುವ ಪ್ರಮೇಯವಿಲ್ಲ! ಔಷಧಿ ಅಂಗಡಿಗಳು ಯಾವುದೇ ಸಲಹಾ ಚೀಟಿ ಇಲ್ಲದೇ ಔಷಧಿ ಪೂರೈಸಲು ಸಿದ್ಧ! ಕಳಪೆ ಗುಣಮಟ್ಟದ ಯಾವುದೇ ಕ್ಷಮತಾ ಪರೀಕ್ಷೆ ಇಲ್ಲದ ಔಷಧಿಗಳ ಮಾರಾಟ ಸಹ ಯಥೇಚ್ಛವಾಗಿ ನಡೆಯುತ್ತಲಿದೆ. ಇವುಗಳನ್ನು ನಿಯಂತ್ರಿಸುವ ಪರಿಣಾಮಕಾರಿ ವ್ಯವಸ್ಥೆಯೂ ಇಲ್ಲದಿರುವುದೂ ಒಂದು ಗಮನಿಸಬೇಕಾದ ಅಂಶ. ಗ್ರಾಮೀಣ ಪ್ರದೇಶಗಳಲ್ಲೂ ಇತ್ತೀಚೆಗೆ ಈ ವೈದ್ಯಕೀಯ ಉಪಕರಣಗಳ ಬಳಕೆಯನ್ನು ನಾವು ನೋಡುತ್ತಲಿದ್ದೇವೆ.

ಕುಟುಂಬ ವೈದ್ಯ ಪದ್ಧತಿ ಪುನಃಸ್ಥಾಪನೆ ಅನಿವಾರ್ಯ : ಈ ಒಂದು ಹಿನ್ನೆಲೆಯಲ್ಲಿ ಚಿಂತನೆ ಮಾಡಿದಾಗ ‘ಕುಟುಂಬ ವೈದ್ಯರ’ ಮಹತ್ವ ಅರಿವಾಗುತ್ತದೆ. ಗ್ಲುಕೋಮೀಟರ್, ಬಿ.ಪಿ.ಮಾಪಕಗಳ ಉಪಯೋಗಗಳನ್ನು ನಿರುತ್ತೇಜಿಸುವ ಅವಶ್ಯಕತೆ ಇಲ್ಲ. ಬದಲಾಗಿ ಅವುಗಳನ್ನು ಪ್ರಾಥಮಿಕ ಆರೋಗ್ಯ ಆರೈಕೆಯಲ್ಲಿ ‘ಪೂರಕ’ವಾಗಿ ಬಳಸುವಂತಾಗಬೇಕು.

ಕುಟುಂಬ ವೈದ್ಯ ಪದ್ಧತಿ, ಸಾಮಾನ್ಯ ವೈದ್ಯ ವೃತ್ತಿ ಮಾಡುವ ಪದ್ಧತಿಯನ್ನು ಪುನರುತ್ಥಾನಗೊಳಿಸಬೇಕು. ವೈದ್ಯಕೀಯ ಕಾಲೇಜು ಶಿಕ್ಷಣ ಪಠ್ಯಕ್ರಮದಲ್ಲಿ ‘ಕುಟುಂಬ ವೈದ್ಯ’ ವೃತ್ತಿ ಕುರಿತಂತೆ ಬೋಧನಾ ವಿಷಯ ಅಳವಡಿಕೆಯಾಗಬೇಕು.

ಇಂಥ ವೈದ್ಯರ ನೇಮಕಾತಿ ಎಲ್ಲ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಾಗಬೇಕು. ಅವರಿಗೆ ನೀಡುವ ವೇತನ ಗಣನೀಯ ಪ್ರಮಾಣದಲ್ಲಿ ಹೆಚ್ಚಿರಬೇಕು.

ಖಾಸಗಿಯಾಗಿ ಕುಟುಂಬ ವೈದ್ಯ ‘ವೃತ್ತಿ’ ನಡೆಸಲು ಮುಂದೆ ಬರುವವವರಿಗೆ ಸರ್ಕಾರದಿಂದ ಧನ ಸಹಾಯ ಹಾಗೂ ವೃತ್ತಿ ಉಪದಾನ ನೀಡುವಂತಾಗಬೇಕು.


ಇವರಿಗೆ ಎಲ್ಲ ಉಪಕರಣಗಳ ಬಳಕೆ ಹಾಗೂ ಅವುಗಳ ಜಾಣತನದ ಉಪಯೋಗವನ್ನು ಮಾಡುವಂತೆ ಜನಸಾಮಾನ್ಯರಿಗೆ ತಿಳುವಳಿಕೆ ನೀಡುವುದು ಮತ್ತು ಫಲಿತಾಂಶಗಳ ಅರ್ಥ ವಿವರಣೆ ಮಡುವುದರ ಬಗ್ಗೆ ಅಗಾಗ ತರಬೇತಿ ನೀಡುವಂತಾಗಬೇಕು. ಔಷಧಿಗಳ ಮಾರಾಟ ಕುರಿತಂತೆ ಕಟ್ಟುನಿಟ್ಟಾದ ಕ್ರಮ ವಹಿಸುವುದು ಅವಶ್ಯವಾಗಿದೆ.



ಡಾ. ಬಿ.ಜೆ.ಸಾಗರ್
ಪ್ರಾಧ್ಯಾಪಕರು, ಮೂಳೆ, ಕೀಲು ಶಾಸ್ತ್ರ (ನಿ)
ಮೈಸೂರು ವೈದ್ಯಕೀಯ ಮಹಾ ವಿದ್ಯಾಲಯ, ಮೈಸೂರು
ಮೊ: 94480-61983

ಮಕ್ಕಳ ಚಿತ್ರಕಥೆ ‘ದಡ್ಡ ಗೆಳೆಯ’ (ಕಳೆದ ಸಂಚಿಕೆಯಿಂದ)

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ಹೀಗಿರುವಾಗ ಒಮ್ಮೆ ರಾಜ ಮಲಗಿದ್ದ. ಆಗ ಕಿಟಕಿಯಿಂದ ಒಂದು ‘ನೊಣ’ ಬಂದು ಕೋತಿಯ ಕಿವಿಯ ಬಳಿ ‘ಗುಂಯ್’ಗುಡುತ್ತಾ ಕಾಟ ಕೊಡುತ್ತಾ ಅದರ ಮೈಮೇಲೆಲ್ಲಾ ಹಾರಾಡುವುದು, ಮತ್ತೆ ಮತ್ತೆ ಕಿರಿಕಿರಿ ಮಾಡುತ್ತಾ ‘ಏ ಮೂರ್ಖ... ನನ್ನನ್ನು ಹಿಡಿ ನೋಡೋಣಾ...!’ ಎಂದು ಹಾಸ್ಯ ಮಾಡುತ್ತಿತ್ತು. ಇದರಿಂದಾಗಿ ಕೋತಿಗೆ ತೀವ್ರ ಕೋಪ ಬಂದಿತ್ತು.




ಅಲ್ಲಿಯೇ ಮಲಗಿದ್ದ ರಾಜನನ್ನು ಕಂಡ ನೊಣವು, ಆತನ ಬಳಿಗೂ ಹೋಗಿ ಅವನನ್ನು ಹಿಂಸಿಸಲಾರಂಭಿಸಿತು. ಕೋತಿಯು, ಅದನ್ನು ಓಡಿಸಲು ಎಷ್ಟೇ ಪ್ರಯತ್ನಪಟ್ಟರೂ ಆಗಲಿಲ್ಲ.



ಹಾಗೆಯೇ ಹಿಂಸಿಸುತ್ತಿದ್ದ ನೊಣವು ಒಮ್ಮೆ ರಾಜನ ಮೂಗಿನ ಮೇಲೆ ಕುಳಿತುಕೊಂಡುಬಿಟ್ಟಿತು.



ಇದನ್ನು ಕಂಡ ಕೋತಿಯು ‘ಏ..ಮುಠ್ಠಾಳ, ನಮ್ಮ ರಾಜನ ಮೂಗಿನ ಮೇಲೆಯೇ ಕುಳಿತುಕೊಳ್ಳುತ್ತೀಯಾ... ಎಷ್ಟು ಧೈರ್ಯ ನಿನಗೆ...? ಇರು... ನಿನಗೆ ಸರಿಯಾದ ಪಾಠ ಕಲಿಸುತ್ತೇನೆ...!’ ಎನ್ನುತ್ತಾ ಗೋಡೆಗೆ ನೇತುಹಾಕಿದ್ದ ಒಂದು ದೊಡ್ಡ ಕತ್ತಿಯನ್ನು ಹಿಡಿದು ರಾಜನ ಮೂಗಿನೆಡೆಗೆ ಓಡೋಡಿ ಬಂದಿತು.



ಅಕಸ್ಮಾತ್ ಬಾಗಿಲ ಬಳಿ ಬಂದ ಮಂತ್ರಿ, ಈ ದೃಶ್ಯ ಕಂಡು ಜೋರಾಗಿ ‘ಮಹಾರಾಜ... ಏಳಿ ಬೇಗ ಎದ್ದೇಳಿ..!’ ಎಂದು ಜೋರಾಗಿ ಕೂಗಿಕೊಂಡ. ತಕ್ಷಣ ರಾಜ ಕಣ್ಣು ಬಿಟ್ಟು ನೋಡಿದರೆ ಮುಖದ ಮುಂದೆ ಕತ್ತಿ ಹಿಡಿದುಕೊಂಡಿರುವ ಕೋತಿಯನ್ನು ಕಂಡು ಎದ್ದು ನಿಂತು, ‘ನೊಣವನ್ನು ಹೊಡೆಯಲು ಕತ್ತಿಯನ್ನು ಉಪಯೋಗಿಸುತ್ತೀಯಾ..? ಸ್ವಲ್ಪ ತಡವಾಗಿದ್ದರೆ ನೀನು ನನ್ನ ಪ್ರಾಣವನ್ನೇ ತೆಗೆದುಬಿಡುತ್ತಿದ್ದೆ..!’ ಎಂದು ಗದರಿಸಿದ.



ಕೋತಿಗೆ ತನ್ನ ತಪ್ಪು ಅರಿವಾಗಿ ರಾಜನ ಕ್ಷಮೆ ಕೇಳಿತು. ನಂತರ ರಾಜನು ಮಂತ್ರಿಗೆ ಧನ್ಯವಾದ ಹೇಳುತ್ತಾ, ‘ನೀವು ಸಮಯಕ್ಕೆ ಸರಿಯಾಗಿ ಬಾರದಿದ್ದರೆ, ಈ ಕೋತಿ ನನ್ನ ಪ್ರಾಣವನ್ನೇ ತೆಗೆದುಬಿಡುತ್ತಿತ್ತು... ಇವನನ್ನು ಅಂಗರಕ್ಷಕನನ್ನಾಗಿ ಮಾಡಿಕೊಂಡು ತಪ್ಪು ಮಾಡಿದೆ.. ಇನ್ನು ಮುಂದೆ ಇವನು ಇಲ್ಲಿ ನನ್ನ ಸ್ನೇಹಿತನಾಗಿ ಇರಬಹುದು, ಆದರೆ ಅಂಗರಕ್ಷಕನಾಗಿ ಅಲ್ಲ..!’ ಎಂದು ಆದೇಶಿಸಿಬಿಟ್ಟ. (ಮುಗಿಯಿತು)

ನೀತಿ:- ‘ದಡ್ಡ’ ಸ್ನೇಹಿತರಿಗಿಂತ, ‘ಬುದ್ಧಿವಂತ’ ಶತ್ರುಗಳೇ ಉತ್ತಮ....!



ವಾರಭವಿಷ್ಯ

12.04.2026 ರಿಂದ 18.04.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ-ಮೀನ, ಮೇಷ, ಚಂದ್ರ-ಮಕರ, ಕುಂಭ, ಮೀನ, ಮೇಷ, ಕುಜ-ಮೀನ, ಬುಧ-ಮೀನ, ಗುರು-ಮಿಥುನ, ಶುಕ್ರ-ಮೇಷ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, ‘ಭಾವಸಾರ್ ರತ್ನ’
‘ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು’
‘ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ’
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ಸ್ನೇಹಿತರ ಸಮಾಗಮ, ಸಂತೋಷದ ಸಮಯ, ಪ್ರಮುಖ ಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸುವಿರಿ. ವ್ಯಾಪಾರ-ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭ ದೊರೆಯುತ್ತದೆ. ನೆರೆ-ಹೊರೆಯಲ್ಲಿ ವಾದ-ವಿವಾದಗಳಿಂದ ದೂರವಿರುವುದು ಉತ್ತಮ, ಕೋಪದಿಂದ ಕಾರ್ಯಗೇಡು. ಹೊಸ ಯೋಜನೆಗಳ ವಿಸ್ತರಣೆಗೆ ಅಡೆತಡೆಗಳು ಉಂಟಾಗುತ್ತದೆ. ವಾರದ ಕಡೆಗೆ ದೇವತಾ ಸಹಾಯ ಕಾರ್ಯಗಳಲ್ಲಿ ಭಾಗವಹಿಸುವಿರಿ.

ಕಾಲಭೈರವಾಷ್ಟಕ ಪಠಿಸಿ. ಶುಭ ಸಂಖ್ಯೆ-1

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೂ)

ವಾರದ ಪೂರ್ವಾರ್ಧದಲ್ಲಿ ಪ್ರಯತ್ನ ಕಾರ್ಯಗಳಲ್ಲಿ ಯಶಸ್ಸು. ಹೊಸ ಬಂಡವಾಳ ಹೂಡಿಕೆಗೆ ಸಮಯ ಚೆನ್ನಾಗಿದೆ. ನ್ಯಾಯವಾದಿಗಳಿಗೆ ಹೊಸ ಕಕ್ಷಿಗಾರರು ದೊರೆಯುವರು. ಖಾಸಗಿ ಉದ್ಯೋಗಿಗಳಿಗೆ ಬೋನಸ್ ಇತ್ಯಾದಿ ಧನಲಾಭ. ಪರೋಪಕಾರ ಬುದ್ಧಿಯಿಂದ ಸಾಮಾಜಿಕ ಗೌರವ. ವಾರದ ಉತ್ತರಾರ್ಧದಲ್ಲಿ ಮನೆಯಲ್ಲಿ ದುಡುಕಿನ ನಡೆಯಿಂದ ಮಾನಸಿಕ ಕ್ಲೇಶ ಹಾಗೂ ಅಶಾಂತಿಯ ವಾತಾವರಣ.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-3

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ಆರ್ಥಿಕ ಪರಿಸ್ಥಿತಿ ಅಷ್ಟಿಷ್ಟು ಸುಧಾರಿಸುವುದು. ನೂತನ ವಸ್ತು, ವಾಹನ ಹೊಂದುವ ಬಯಕೆ ಈಡೇರುವುದು. ಹೊಸ ಮಿತ್ರರ ಪರಿಚಯದಿಂದ ಒಳಿತಾಗುವುದು. ಹೊಗಳಿಕೆಗೆ ಮಾರು ಹೋಗದಿರಿ. ಜೀವನದಲ್ಲಿ ಜಾರಬಾರದೆಂದರೆ ಜಾಗರೂಕರಾಗಿರಬೇಕು. ವಾರ ಮಧ್ಯೆ ಶಾರೀರಿಕ ಆಯಾಸ ಹಾಗೂ ಮಾನಸಿಕ ಒತ್ತಡ ಇರುತ್ತದೆ. ಪ್ರೇಮ ಪ್ರಸಂಗಗಳಲ್ಲಿ ನಿರಾಶೆ ಉಂಟಾಗುವುದು.

ಶ್ರೀ ಸತ್ಯನಾರಾಯಣ ಪೂಜೆ. ಶುಭ ಸಂಖ್ಯೆ-6

ಕಟಕ (ಹೊ,ಹು,ಹೆ,ಡ,ಡಿ,ಡು)

ಜೀವನ ಏರಿಳಿತದ ಹಾದಿ. ಕಷ್ಟ ಸುಖಗಳು ಚಲಿಸುವ ಮೋಡಗಳಂತೆ ಸ್ಥಿರವಲ್ಲ. ಆಶಾವಾದಿಗಳಾಗಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಆಸಕ್ತಿ ಮೂಡುವುದು. ವ್ಯಾಪಾರ, ವಹಿವಾಟುಗಳು ಸಾಧಾರಣವಾಗಿ ನಡೆದರೂ ಲಾಭಾಂಶ ದೊರೆಯುವುದು. ಕಚೇರಿಯಲ್ಲಿ ಸಹೋದ್ಯೋಗಿಗಳ ಸಹಕಾರದಿಂದ ನಿಮ್ಮ ಕೆಲಸ ಹಗುರವಾಗುವುದು. ರಾಹು-ಕೇತುಗಳು ಶುಭರಿಲ್ಲದ ಕಾರಣ ಸಣ್ಣ ಪುಟ್ಟ ಶಸ್ತ್ರ ಚಿಕಿತ್ಸೆ ಆದೀತು.

ಶ್ರೀ ರಾಹು-ಕೇತು ಮಂತ್ರ ಜಪಿಸಿ. ಶುಭ ಸಂಖ್ಯೆ-9

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಸಪ್ತಾಹದ ಆದಿಗೆ ನೂತನ ವಸ್ತ್ರಾಭರಣ ಹಾಗೂ ಸ್ತ್ರೀಯಿಂದ ಸುಖ ಪ್ರಾಪ್ತಿ. ನಿಮ್ಮ ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ಶ್ರೀಮತಿಯ ಬೆಂಬಲ. ಗುರು ಕೃಪೆಯಿಂದ ಭಾಗ್ಯದಲ್ಲಿ ಸಿರಿತನ, ಇಷ್ಟಪಟ್ಟ ದುಬಾರಿ ವಸ್ತು ಪಡೆಯುವಿರಿ. ಅಷ್ಟಮ ಶನಿದೇವನಿಂದ ಶತ್ರುಗಳ ಕಾರಸ್ಥಾನ ಹಾಗೂ ಉಪದ್ರವಗಳು ಉಂಟಾಗುವುದು. ಇತರರನ್ನು ನೆಚ್ಚಿಕೊಂಡು ಮುಖ್ಯ ಕೆಲಸ ಮಾಡದಿರಿ. ಸಂಧಿವಾತ ಕಾಡುವುದು.

ಶ್ರೀ ಸೂರ್ಯ ನಮಸ್ಕಾರ. ಶುಭ ಸಂಖ್ಯೆ-8

ಕನ್ಯಾ (ಟೊ,ಪ,ಪಿ,ಪು,ಫ,ಣ,ಶ,ಪೆ,ಪೊ)

ಸದ್ಯದ ಪರಿಸ್ಥಿತಿಯಲ್ಲಿ ನಿಮ್ಮ ಯೋಜನೆಗಳು ಸಫಲವಾಗಬೇಕೆಂದರೆ ಚತುರತೆಯ ಅಗತ್ಯವಿದೆ. ನಿಮ್ಮ ವೈಯಕ್ತಿಕ ವಿಚಾರಗಳಲ್ಲಿ ಅನ್ಯ ವ್ಯಕ್ತಿಗಳು ತಲೆ ಹಾಕದಂತೆ ಎಚ್ಚರ ವಹಿಸಿ. ಈ ವಾರವೆಲ್ಲ ಆದಾಯ ಮತ್ತು ಖರ್ಚುಗಳು ಸಮತೋಲನವಾಗಿ ಸಾಗುತ್ತವೆ. ಉತ್ತಮರ ಸಂಗದಲ್ಲಿದ್ದರೆ ಮನೋಲ್ಲಾಸ ಉಂಟಾಗುವುದು. ಹೊಸ ವ್ಯಾಪಾರ ಆರಂಭಿಸಲು ಸಮಯ ಶುಭವಿದೆ.

ಶ್ರೀ ಶ್ರೀನಿವಾಸ ದರ್ಶನ. ಶುಭ ಸಂಖ್ಯೆ-2

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ಗುರುಕೃಪೆಗೆ ಪಾತ್ರರಾಗಿರುವ ನಿಮಗೆ ಬಹು ನಿರೀಕ್ಷೆಯ ಫಲ ಮಧುರವೇ ಆಗಿರುತ್ತದೆ. ಕೆಲವೊಂದು ವಿಚಾರಗಳು ಅಯಾಚಿತವಾಗಿ ದೊರೆಯುವುದು. ವಿದ್ಯಾರ್ಥಿಗಳು ತಮ್ಮ ಬುದ್ಧಿ ಕುಶಲತೆಯಿಂದ ಯಶಸ್ಸನ್ನು ಪಡೆಯುವರು. ಕಾರ್ಮಿಕ ವರ್ಗದವರಿಗೆ ಸರ್ಕಾರದ ಸಹಾಯ ದೊರಕುವುದು. ಬ್ಯಾಂಕ್ ವ್ಯವಹಾರದಲ್ಲಿ ಸಫಲತೆಯನ್ನು ಹೊಂದುವಿರಿ. ವಾರಾಂತ್ಯಕ್ಕೆ ಮನೋರಂಜನೆಗೆ ಹಣ ವ್ಯಯವಾಗುವುದು.

ಶ್ರೀ ಉತ್ತನಾಳಮ್ಮದೇವಿ ಆರಾಧನೆ. ಶುಭ ಸಂಖ್ಯೆ-4

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಬೃಹಸ್ಪತಿ ಹಾಗೂ ಶನಿದೇವರ ಕೃಪಾಭಾವ ನಡೆದಿದೆ. ವಿಧಿಯಂತೆ ಕಾರ್ಯ ನಿರ್ವಹಿಸಿ, ಭಗವಂತನನ್ನು ಸ್ಮರಿಸಿ. ಆದಾಯ ಹೆಚ್ಚಾದಂತೆ ಖರ್ಚುಗಳೂ ಹೆಚ್ಚಾಗುವ ಸಾಧ್ಯತೆ ಇರುತದೆ. ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ವಿಚಾರಗಳು ವಿಳಂಬವಾಗುವುದು. ವಾರ ಮಧ್ಯಾನಂತರ ಭವಿಷ್ಯದ ಕೆಲಸಗಳಿಗೆ ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳಲು ಅಡ್ಡಿಯಿಲ್ಲ. ಕಫ ಜನಿತ ಕಾಯಿಲೆ ಕಾಡುವುದು.

ಶ್ರೀ ಗಣಪತಿ ಸೇವೆ. ಶುಭ ಸಂಖ್ಯೆ-5

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ಗುರು ನಿಮ್ಮ ರಾಶ್ಯಾಧಿಪತಿ, ಶುಭ ಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. ‘ಸೂತ್ರ ಚೆನ್ನಾಗಿದ್ದರೆ ಎಲ್ಲವೂ ಸುಸೂತ್ರ’ ಎಂಬಂತೆ ಈ ವಾರ ಸಾಗುವುದು. ನಿಮ್ಮ ಚಾಣಾಕ್ಷತೆಯಿಂದಲೂ, ಬುದ್ಧಿಮತ್ತೆಯಿಂದಲೂ ಕಾರ್ಯ ಸಾಧನೆ ಆಗುವುದು. ಧನ, ಧಾನ್ಯ ಲಾಭ, ಸುಭೋಜನ, ಮನೆಯಲ್ಲಿ ಶಾಂತ ವಾತಾವರಣ ಇರುತ್ತದೆ. ಆಸ್ತಿ-ಪಾಸ್ತಿ ಹೊಂದುವ ಯೋಗವಿದೆ. ಪ್ರಯತ್ನಿಸಿ. ಧಾನ-ಧರ್ಮ ಮಾಡುವುದರಿಂದ ಧನ್ಯತಾಭಾವ.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-7

ಮಕರ (ಜೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಹೊಸ ಹುರುಪಿನಿಂದ ನಿಮ್ಮ ಕೆಲಸ ಕಾರ್ಯಗಳಲ್ಲಿ ನಿರತರಾಗುವಿರಿ. ನಿಮ್ಮ ನಿರಂತರ ಪರಿಶ್ರಮಕ್ಕೆ ಪ್ರತಿಫಲ ದೊರೆಯುವುದು. ಮಿತ್ರ ಜನರ ಜೊತೆ ಬೆರೆಯುವುದರಿಂದ ಮನಸ್ಸು ಪ್ರಫುಲ್ಲವಾಗಿರುತ್ತದೆ. ನಿಮ್ಮ ರಾಶ್ಯಾಧಿಪತಿ ಶನಿದೇವನೂ ಶುಭನಿದ್ದು ಕೃಷಿ ಹಾಗೂ ಪಶುಪಾಲನೆಯಿಂದ ಉತ್ತಮ ಆದಾಯವನ್ನು ನಿರೀಕ್ಷಿಸಬಹುದು. ಆಹಾರ ವ್ಯತ್ಯಾಸದಿಂದ ಆರೋಗ್ಯ ಕೆಡಬಹುದು.

ಶ್ರೀ ಅಶ್ವತ್ಥ ವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-2

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಈ ವಾರ ದೈವಾನುಗ್ರಹ ನಿಮ್ಮ ಕೈ ಹಿಡಿಯಲಿದೆ. ಕೆಲವು ಪ್ರತಿಕೂಲ ಪ್ರಸಂಗಗಳನ್ನು ಸಾಹಸದಿಂದ ಎದುರಿಸುವಿರಿ. ಮಾನಸಿಕವಾಗಿ, ಶಾರೀರಿಕವಾಗಿ ಜರ್ಝರಿತಕ್ಕೆ ಒಳಗಾಗಿದ್ದ ನಿಮಗೆ ಶುಭ ಪ್ರಸಂಗಗಳು ಧೈರ್ಯ ತುಂಬಲಿವೆ. ವ್ಯಾಪಾರ ವಹಿವಾಟುಗಳು ನಿಮ್ಮ ನಿರೀಕ್ಷೆಗೂ ಮೀರಿ ನಡೆಯುವುದು. ಕೈ ಹಿಡಿದು ಖರ್ಚು ಮಾಡಿ, ಅದೇ ನಿಮಗೆ ಉಳಿತಾಯವಾಗುವುದು. ದುಡುಕಿನ ಡ್ರೈವಿಂಗ್‌ನಿಂದ ಅನರ್ಥಗಳು ಉಂಟಾಗುವುದು.

ಓಂ ನಮೋ ಹನುಮತೇ ಮಂತ್ರ ಜಪಿಸಿ. ಶುಭ ಸಂಖ್ಯೆ-4

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಈ ವಾರದಲ್ಲಿ ಬಿತ್ತಿದ್ದನ್ನು ಬೆಳೆದುಕೊ ಎಂಬ ನಾಣ್ಣುಡಿಯಂತೆ ಸಾಗುವುದು. ಜೀವನದಲ್ಲಿ ಸವಾಲುಗಳು ಎದುರಾದರೆ ಮುಕ್ತ ಮನಸ್ಸಿನಿಂದ ಸ್ವೀಕರಿಸಿ. ಆಸ್ತಿ ಖರೀದಿಸುವ ಹವಣಿಕೆಯಲ್ಲಿದ್ದರೆ ಸ್ವಲ್ಪ ಸಮಯ ಕಾದು ಪ್ರಯತ್ನಿಸಿ. ವಾಸದ ಮನೆ ರಿಪೇರಿ ಖರ್ಚುಗಳು ಎದುರಾಗುವುದು. ರಕ್ತ ಸಂಬಂಧಿಕರಲ್ಲಿ ಮನಸ್ತಾಪಗಳು ಉಂಟಾಗಲಿವೆ. ಅಗ್ನಿ, ವಿದ್ಯುತ್ ಅಪಘಾತಗಳಿಂದ ಜಾಗೃತರಾಗಿರಿ.

ಶ್ರೀ ಮೃತ್ಯುಂಜಯ ಮಂತ್ರ ಜಪಿಸಿ. ಶುಭ ಸಂಖ್ಯೆ-6

ಧ್ಯಾನ-ಯೋಗದಿಂದ ದೇಹ, ಮನಸ್ಸಿನ ಸಮತೋಲನ ಸಾಧ್ಯ

ಸುತ್ತೂರು ಶ್ರೀ ಕ್ಷೇತ್ರದಲ್ಲಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅಭಿಮತ



ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿರುವ ಆಯುರ್ವೇದ, ವಾಕ್–ಶ್ರವಣ, ನರ್ಸಿಂಗ್ ವಿದ್ಯಾರ್ಥಿಗಳ ಶಿಬಿರದಲ್ಲಿ ಬಿ.ಯು.ಶರತ್ ಹಾಗೂ ಕು. ಕೃತಾ ಎಸ್ ಮಲ್ಲಿಕಾರ್ಜುನ್‌ರವರುಗಳು ಉಪನ್ಯಾಸ ನೀಡಿದರು

ನಂಜನಗೂಡು: ಧ್ಯಾನ ಮತ್ತು ಯೋಗದಿಂದ ದೇಹ ಮತ್ತು ಮನಸ್ಸಿನ ಸಮತೋಲನ ಸಾಧ್ಯ ಎಂದು ಮೈಸೂರಿನ ಪ್ರಾಣಯೋಗ ವಿದ್ಯಾಲಯದ ಸಂಸ್ಥಾಪಕರಾದ ಬಿ.ಯು.ಶರತ್ ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯುರ್ವೇದ, ವಾಕ್–ಶ್ರವಣ, ನರ್ಸಿಂಗ್ ವಿದ್ಯಾರ್ಥಿಗಳ ಶಿಬಿರದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು ಪ್ರಸ್ತುತ ದಿನಗಳಲ್ಲಿ ಎಲ್ಲಾ ಕಾರ್ಯಗಳು ತಾಂತ್ರಿಕತೆಯ ಮೇಲೆ ಹೆಚ್ಚು ಅವಲಂಬಿತವಾಗಿವೆ. ಇದು ದೇಹ ಮತ್ತು ಮನಸ್ಸನ್ನು ಹಾಳುಮಾಡುತ್ತಿದೆ. ಮಾನಸಿಕ ಶಾಂತಿ, ಏಕಾಗ್ರತೆ, ಖಿನ್ನತೆ ನಿವಾರಣೆ ಹಾಗೂ ಸ್ಥಿರತೆಗಾಗಿ ಯೋಗ, ಧ್ಯಾನ, ಪ್ರಾಣಾಯಾಮಗಳು ಬಹಳ ಮುಖ್ಯವಾಗಿವೆ ಎಂದರು.

ತಂತ್ರಜ್ಞಾನದ ತಂತ್ರ ಹಾಗೂ ಮನಸ್ಸಿನ ಮಂತ್ರ ಎಂಬುದು ಆಧುನಿಕ ಜೀವನದಲ್ಲಿ ಪ್ರಮುಖ ಅಂಶ. ತಂತ್ರಜ್ಞಾನವು ಹೊರಗಿನ ಪ್ರಗತಿಗೆ ಸಹಾಯ ಮಾಡುತ್ತದೆ. ಮಂತ್ರವು ಒಳಗಿನ ಮನಸ್ಸಿನ ಶಾಂತಿಗೆ ಸಹಾಯ ಮಾಡುತ್ತದೆ. ಎರಡೂ ಸೇರಿದಾಗ ಬದುಕು ಸಮೃದ್ಧಿಗೊಳ್ಳುತ್ತದೆ. ಇದರಿಂದ ದೈನಂದಿನ ಜೀವನದಲ್ಲಿ ಉತ್ಸಾಹ ಮತ್ತು ಶಕ್ತಿ ದೊರೆಯುತ್ತದೆ ಎಂದು ತಿಳಿಸಿದರು.

ಮೈಂಡ್ ಸೈನರ್ಜಿ ಸಂಸ್ಥೆಯ ನಿರ್ದೇಶಕರಾದ ಕು.ಎಸ್.ಕೃತಾ ಮಲ್ಲಿಕಾರ್ಜುನ್ ಮಾತನಾಡಿ ಯಶಸ್ಸು ಪ್ರತಿಯೊಬ್ಬರ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದು ಸುಲಭವಾಗಿ ಸಿಗುವುದಿಲ್ಲ. ಅದಕ್ಕೆ ಶ್ರಮ, ಸಹನೆ ಮತ್ತು ಸಂಕಲ್ಪ ಅವಶ್ಯಕ. ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಧೈರ್ಯದಿಂದ ಎದುರಿಸಿದಾಗ ಮಾತ್ರ ಯಶಸ್ಸು ಜೊತೆಗೆ ಬರುತ್ತದೆ. ಕೆಲವೊಮ್ಮೆ ವಿಫಲತೆಗಳು ಎದುರಾಗಬಹುದು, ಆದರೆ ಅವು ಹೆಚ್ಚು ಬಲಿಷ್ಠರನ್ನಾಗಿ ಮಾಡುತ್ತವೆ. ವಿಫಲತೆಯಿಂದ ಪಾಠ ಕಲಿತು ಮತ್ತೆ ಪ್ರಯತ್ನಿಸುವುದು ಯಶಸ್ಸಿನ ಮುಂದಿನ ಮೆಟ್ಟಿಲು. ಭಯ ಮತ್ತು ಅತಿಯಾದ ಆತ್ಮವಿಶ್ವಾಸ ಯಶಸ್ಸಿನ ಶತ್ರುಗಳಾಗಿವೆ. ಅನಗತ್ಯ ಯೋಚನೆಗಳನ್ನು ಮಾಡದೆ ಹಾಗೂ ಬೇರೆಯವರೊಂದಿಗೆ ಹೋಲಿಕೆ ಮಾಡಿಕೊಳ್ಳದೆ ನಿರಂತರ ಪ್ರಯತ್ನದಿಂದ ಮುಂದುವರಿದರೆ ಯಶಸ್ಸು ಲಭಿಸುತ್ತದೆ ಎಂದು ನುಡಿದರು.

ಶಿಬಿರಾರ್ಥಿಗಳು ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸದಲ್ಲಿ ಭಾಗಿಯಾಗಿ ದ್ದರು. ನಂತರ ಸುತ್ತೂರು ದರ್ಶನದಲ್ಲಿ ಶ್ರೀಮಠದ ಗುರು ಪರಂಪರೆಯ ಅನಿಮೇ ಷನ್ ಸಾಕ್ಷ ಚಿತ್ರವನ್ನು ವೀಕ್ಷಿಸಿ ಶ್ರೀಮಠದ ಭವ್ಯ ಇತಿಹಾಸ ಅರಿತರು. ನಂತರ ಮೂಲ ಮಠ, ಶ್ರೀ ಸೋಮೇಶ್ವರ ದೇವಸ್ಥಾನ, ಶ್ರೀ ಮಹದೇಶ್ವರರು ರಾಗಿ ಬೀಸಿದ ಕಲ್ಲು ಹಾಗೂ ಶ್ರೀ ವೀರಭದ್ರೇಶ್ವರ ದೇವಸ್ಥಾನಗಳ ದರ್ಶನ ಪಡೆದು ಪುನೀತರಾದರು. ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಳೆಗಳ ಪ್ರಾತ್ಯಕ್ಷಿಕೆ ಯನ್ನು ವೀಕ್ಷಿಸಿದರು. ಗೋಶಾಲೆಯಲ್ಲಿ ದೇಸಿ ಗೋತಳಿಗಳ ಬಗ್ಗೆ ಮಾಹಿತಿ ಪಡೆದರು. ಸಂಜೆ ಕಪಿಲಾ ನದಿ ತೀರದಲ್ಲಿ ಪ್ರಾರ್ಥನೆ ಹಾಗೂ ಕಪಿಲಾರತಿ ಕಾರ್ಯ ಕ್ರಮವು ಶ್ರದ್ಧಾ ಭಕ್ತಿಗಳಿಂದ ನೆರವೇರಿತು. ನಂತರ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು.

ಕಾರ್ಯಕರ್ತನ ಮನೆಗೆ ಸೋಮಣ್ಣ ಭೇಟಿ



ತಿ.ನರಸೀಪುರ,ಏ.11– ವರುಣ ವಿಧಾನಸಭಾ ಕ್ಷೇತ್ರದ ತಾಯೂರು ಗ್ರಾಮದಲ್ಲಿ ಬಿಜೆಪಿ ಮುಖಂಡ ನಟರಾಜುರವರು ಹೃದಯಾಘಾತದಿಂದ ನಿಧನರಾದ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ವಿ ಸೋಮಣ್ಣರವರು ಅವರ ನಿವಾಸಕ್ಕೆ ಭೇಟಿ ನೀಡಿ ಸಾಂತ್ವನ ಹೇಳಿದರು.

ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತರಾಗಿ ದುಡಿದಿದ್ದ ನಟರಾಜುರವರು ಅಕಾಲಿಕ ಮರಣಕ್ಕೆ ತುತ್ತಾಗಿದ್ದರಿಂದ ನಮ್ಮ ಪಕ್ಷದ ತುಂಬಾ ನಷ್ಟ ಉಂಟಾಗಿದೆ ಎಂದು ಹೇಳಿದರು. ಡೈರಿ ಅಧ್ಯಕ್ಷ ಡಿಎಲ್ ಮಹದೇವಪ್ಪ, ಗ್ರಾಪಂ ಮಾಜಿ ಸದಸ್ಯ ಕಿರಗಸೂರು ಮಹಾದೇವ ಸ್ವಾಮಿ, ಅವರ ಪುತ್ರ ಸುನಿಲ್, ಮುಖಂಡರಾದ ಸುದೀಪಣ್ಣ, ಅಂಗಡಿ ಶೇಖರ್, ಮೋಹನ್, ಪುರಸಭಾ ಮಾಜಿ ಸದಸ್ಯ ಕಿರಣ್, ಅಡಿಗೆ ಪ್ರಭು, ಮತ್ತಿತರರು ಇದ್ದರು

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ತಿ.ನರಸೀಪುರ, ಏ.11– ಎಸ್‌ಟಿಜಿ ರೆಸಿಡೆನ್ಸಿಯಲ್ ಪಿಯು ಕಾಲೇಜ್, ಚಿನಕುರಳಿ ಪ್ರಣವ್ ಆರ್ ಚಂದ್ರ 600 ಅಂಕಕ್ಕೆ 556 ಅಂಕ (92.66%) ತೆಗೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಆಗಿದ್ದಾನೆ. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನುಗ್ಗಹಳ್ಳಿ ಕೊಪ್ಪಲು ರಾಮಚಂದ್ರ ಎನ್ ಎಂ ರವರ ಪುತ್ರ.

ಚಿರಾಗ್‌ಗೆ ಉನ್ನತ ಶ್ರೇಣಿ



ತಿ.ನರಸೀಪುರ, ಏ.11– ಎಂಎಎಸ್‌ವಿಎಸ್ ಗುರುಕುಲ ಪಿಯು ಕಾಲೇಜ್, ಕುವೆಂಪುನಗರ, ಮೈಸೂರು. ಚಿರಾಗ್.ಎನ್ 600 ಅಂಕಕ್ಕೆ 558 ಅಂಕ (ಶೇ93) ತೆಗೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಆಗಿದ್ದಾನೆ. ಟಿ. ನರಸೀಪುರ ಪುರಸಭೆಯ ಮಾಜಿ ಅಧ್ಯಕ್ಷರು ಟಿ.ಎಂ.ನಂಜುಂಡಸ್ವಾಮಿ ಹಾಗೂ ತಾಲೂಕು ಕುರುಬರ ಸಂಘದ ಮಾಜಿ ಉಪಾಧ್ಯಕ್ಷರು ಎಸ್. ರೋಹಿಣಿ ರವರ ಪುತ್ರ.

ಪತ್ರಕರ್ತನ ಪುತ್ರಿಗೆ ಉನ್ನತ ಶ್ರೇಣಿ



ಕೆ.ಆರ್.ನಗರ: ಪ್ರಕಟಗೊಂಡ 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ಪಾಂಡವಪುರ ತಾಲೂಕಿನ ಚಿನಕುರಳಿಯ ಎಸ್.ಟಿ.ಜಿ.ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ಐಶ್ವರ್ಯ.ವಿ.ಗೌಡ 543 ಅಂಕಗಳನ್ನು ಪಡೆದು ಶೇ.90.5 ಫಲಿತಾಂಶದೊಂದಿಗೆ ಉನ್ನತ ಶ್ರೇಣಿಯನ್ನು ತೇರ್ಗಡೆಯಾಗಿದ್ದಾರೆ. ಈಕೆ ಕೆ.ಅರ್.ನಗರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿನಯ್ ದೊಡ್ಡಕೊಪ್ಪಲು ಮತ್ತು ಎಚ್.ಆರ್.ಆಶಾ ದಂಪತಿಗಳ ಪುತ್ರಿ.

ಅತ್ಯುನ್ನತ ಶ್ರೇಣಿ



ಮೂಗೂರು: ಸಮೀಪದ ಸಂತ ನೋಬಟ್ ಪಿಯು ಕಾಲೇಜಿನ ವಿದ್ಯಾರ್ಥಿ ಎಂ.ಎನ್. ಸುಮನ್ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ 581 ಅಂಕಗಳನ್ನು (ಶೇ90.83) ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಮೂಗೂರು ಗ್ರಾಮದ ನಿವಾಸಿ ಸ್ವಾಮಿ ಹಾಗೂ ವೀಣಾ ರವರ ಪುತ್ರ.

ಗಾವಡಗೆರೆ ಪಿಯು ಕಾಲೇಜಿಗೆ ಶೇ88 ಫಲಿತಾಂಶ





ಹುಣಸೂರು: ತಾಲೂಕಿನ ಗಾವಡಗೆರೆ ಸರ್ಕಾರಿ ಪದವಿ ಪೂರ್ವ ಕಾಲೇಜು ತಾಲೂಕಿನ ಸರ್ಕಾರಿ ಕಾಲೇಜುಗಳ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದೆ ಎಂದು ಪ್ರಾಂಶುಪಾಲ ಜನಾರ್ಧನ್ ತಿಳಿಸಿದ್ದಾರೆ.

ಕಾಲೇಜಿಗೆ ಶೇಕಡ 88.66ರಷ್ಟು ಫಲಿತಾಂಶ ಪಡೆದಿದ್ದು ಪರೀಕ್ಷೆಗೆ 194 ವಿದ್ಯಾರ್ಥಿಗಳು ಹಾಜರಾಗಿದ್ದು 182 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಡಿಸ್ಟಿಂಕ್ಷನ್ 26 ವಿದ್ಯಾರ್ಥಿಗಳು, ಪ್ರಥಮ ದರ್ಜೆ 13, ದ್ವಿತೀಯ ದರ್ಜೆ 40, ತೃತೀಯ ದರ್ಜೆ 13, ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ ಖಾಸಗಿ ಕಾಲೇಜು ಹಾಗು ಸರ್ಕಾರಿ ಕಾಲೇಜುಗಳ ವಾಣಿಜ್ಯ ವಿಭಾಗದಲ್ಲಿ ಅಮೂಲ್ಯ 591 ಅಂಕ ಪಡೆದು ತಾಲೂಕಿಗೆ ಟಾಪರ್ ಆಗಿದ್ದಾಳೆ. ಕಲಾ ವಿಭಾಗದಲ್ಲಿ ಸ್ಪೂರ್ತಿ 581 ಅಂಕ ಪಡೆದು ತಾಲೂಕಿಗೆ ಮೂರನೇ ಸ್ಥಾನ ಪಡೆದಿದ್ದಾಳೆ. ಗಣಿತಶಾಸ್ತ್ರದಲ್ಲಿ ರಮ್ಯ ಜೆ.ಪಿ. 100 ಕ್ಕೆ 100 ಅಂಕ ಪಡೆದು ಟಾಪರ್ ಆಗಿದ್ದಾಳೆ.

ಕೆ.ಆರ್.ನಗರದ ಸರ್ಕಾರಿ ಬಾಲಕಿಯರ ಕಾಲೇಜಿಗೆ ಶೇ82ರಷ್ಟು ಫಲಿತಾಂಶ

ತನ್ಮಯಿ, ಹರ್ಷಿತ, ಯೋಗೇಶ್ವರಿ, ಸುಜೈನಾ, ಹೇಮ, ವರ್ಷಿತ ಅವರುಗಳಿಗೆ ಉನ್ನತ ಶ್ರೇಣಿ


ತನ್ಮಯಿ

ಹರ್ಷಿತ

ಯೋಗೇಶ್ವರಿ

ಸುಜೈನಾ

ಹೇಮ

ವರ್ಷಿತ

ಕೆ.ಆರ್.ನಗರ: 2026ನೇ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಪಟ್ಟಣದ ಹೆಸರಾಂತ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ತನ್ಮಯಿ ವಿಜ್ಞಾನ ವಿಭಾಗದಲ್ಲಿ 585 ಅಂಕಗಳನ್ನು ಪಡೆದು ಮೈಸೂರು ಜಿಲ್ಲೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪೈಕಿ ಪ್ರಥಮ ಸ್ಥಾನಗಳಿಸಿ ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸುಮಾರು 442 ವಿದ್ಯಾರ್ಥಿನಿಯರು 2025–26ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಹಾಜರಾಗಿದ್ದು, 359 ವಿದ್ಯಾರ್ಥಿನಿಯರು ಉತ್ತೀರ್ಣರಾಗಿ ಕಾಲೇಜಿಗೆ ಒಟ್ಟು ಶೇಕಡ 82 ಫಲಿತಾಂಶ ಬಂದಿದೆ.

2026ನೇ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಒಟ್ಟು 61 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, ವಿಜ್ಞಾನ ವಿಭಾಗದಲ್ಲಿ 17 ವಿದ್ಯಾರ್ಥಿನಿಯರು, ವಾಣಿಜ್ಯ ವಿಭಾಗದಲ್ಲಿ 21 ಮತ್ತು ಕಲಾವಿಭಾಗದಲ್ಲಿ 23 ವಿದ್ಯಾರ್ಥಿನಿಯರು ಅತ್ಯುನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ಮೇಲುಗೈ ಸಾಧಿಸಿದ್ದಾರೆ.

ವಿಜ್ಞಾನ ವಿಭಾಗದ ತನ್ಮಯಿ 585 ಅಂಕಗಳು, ಕಲಾ ವಿಭಾಗದ ಹೇಮ 585 ಅಂಕಗಳು ಹಾಗೂ ಕಲಾ ವಿಭಾಗದ ವರ್ಷಿತ 585 ಅಂಕಗಳನ್ನು ಪಡೆದು ತಾಲೂಕಿನಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ವಿಜ್ಞಾನ ವಿಭಾಗದ ತನ್ಮಯಿ ಮೈಸೂರು ಜಿಲ್ಲೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಯೋಗೇಶ್ವರಿ 562 ಅಂಕಗಳನ್ನು ಪಡೆದು, ಕಾಲೇಜಿನಲ್ಲಿ ಪ್ರಥಮ ಸ್ಥಾನ ಗಳಿಸಿರುತ್ತಾರೆ. ಕಾಲೇಜಿನಲ್ಲಿ ಒಟ್ಟು 61 ವಿದ್ಯಾರ್ಥಿನಿಯರು ಅತ್ಯುನ್ನತ ದರ್ಜೆಯಲ್ಲಿ, 207 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ, 76 ವಿದ್ಯಾರ್ಥಿನಿಯರು ದ್ವಿತೀಯ ದರ್ಜೆಯಲ್ಲಿ ಮತ್ತು 29 ವಿದ್ಯಾರ್ಥಿನಿಯರು ಉತ್ತೀರ್ಣರಾಗಿ ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಖಾಸಗಿ ಕಾಲೇಜುಗಳಿಗೆ ತಕ್ಕ ಪೈಪೋಟಿ ನೀಡುವ ಮೂಲಕ ಪ್ರಶಂಸೆಗೆ ಪಾತ್ರವಾಗಿದೆ.

ಕಲಾ ವಿಭಾಗದಲ್ಲಿ 201 ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡಿದ್ದು, 161 ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದು 81.5 ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದಲ್ಲಿ 155 ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡಿದ್ದು, 111 ವಿದ್ಯಾರ್ಥಿಯರು ಉತ್ತೀರ್ಣರಾಗಿದ್ದು ಶೇಕಡ 72 ಫಲಿತಾಂಶ ಬಂದಿದೆ. ವಾಣಿಜ್ಯ ವಿಭಾಗದಲ್ಲಿ 86 ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡಿದ್ದು, 85 ವಿದ್ಯಾರ್ಥಿನಿಯರು ಉತ್ತೀರ್ಣರಾಗಿ ಶೇಕಡ 99ರಷ್ಟು ಫಲಿತಾಂಶ ಬಂದಿರುತ್ತದೆ.

ಕಾಲೇಜಿನಲ್ಲಿ ಕನ್ನಡ ವಿಷಯದಲ್ಲಿ ನಾಲ್ಕು ವಿದ್ಯಾರ್ಥಿನಿಯರು ನೂರಕ್ಕೆ ನೂರು ಅಂಕಗಳನ್ನು, ಅರ್ಥಶಾಸ್ತ್ರ ವಿಷಯದಲ್ಲಿ ಮೂರು ವಿದ್ಯಾರ್ಥಿನಿಯರು ನೂರಕ್ಕೆ ನೂರು ಅಂಕಗಳನ್ನು, ಭೂಗೋಳ ಶಾಸ್ತ್ರ ವಿಭಾಗದಲ್ಲಿ 9 ವಿದ್ಯಾರ್ಥಿನಿಯರು ನೂರಕ್ಕೆ ನೂರು ಅಂಕಗಳನ್ನು, ಹಾಗೂ ಗಣಿತ ಶಾಸ್ತ್ರ ಮತ್ತು ಗಣಕ ಶಾಸ್ತ್ರ ವಿಷಯದಲ್ಲಿ ತಲಾ ಒಬ್ಬರು ವಿದ್ಯಾರ್ಥಿನಿಯರು ನೂರಕ್ಕೆ ನೂರು ಅಂಕಗಳನ್ನು ಪಡೆದಿರುತ್ತಾರೆ.

ಕಾಲೇಜಿನಲ್ಲಿ ವ್ಯವಹಾರ ಅಧ್ಯಯನ, ಲೆಕ್ಕಶಾಸ್ತ್ರ ಭೂಗೋಳಶಾಸ್ತ್ರ ಹಾಗೂ ಗಣಕ ವಿಜ್ಞಾನ ವಿಷಯದಲ್ಲಿ ನೂರಕ್ಕೆ ನೂರು ಫಲಿತಾಂಶ ಬಂದಿರುತ್ತದೆ. ಎಲ್ಲಾ ಉತ್ತೀರ್ಣಗೊಂಡ ವಿದ್ಯಾರ್ಥಿನಿಯರನ್ನು ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಾಚಾರ್ಯರು, ಉಪನ್ಯಾಸಕರುಗಳು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪೈಕಿ ಆರು ಬಾಲಕಿಯರಲ್ಲಿ ಕಲಾ ವಿಭಾಗದಲ್ಲಿ 585 ಅಂಕಗಳನ್ನು ಪಡೆದ ವರ್ಷಿತ ತಂದೆ,ತಾಯಿ ಕಳೆದು ಕೊಂಡು ಅಜ್ಜಿ ಮನೆಯಲ್ಲಿ ವ್ಯಾಸಂಗ ಮಾಡಿ ಇಂದು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಟಾಪರ್ ಆಗಿದ್ದಾಳೆ. ಅದೇ ರೀತಿಯಲ್ಲಿ 442 ವಿದ್ಯಾರ್ಥಿನಿಯರು ಕೂಡ ಬಡವರು, ಕೂಲಿ ಕಾರ್ಮಿಕರ ಮಕ್ಕಳಾಗಿದ್ದಾರೆ. ಕಾಲೇಜಿನಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದ್ದು, ಉಪನ್ಯಾಸಕರ ಶ್ರಮವಿದೆ.

–ಹೆಚ್.ಕೆ.ಕೃಷ್ಣಯ್ಯ, ಪ್ರಾಚಾರ್ಯರು.

ಉತ್ತಮ ಆಲೋಚನೆ, ನಿರ್ಧಾರಗಳಿಂದ ಜೀವನ ಯಶಸ್ವಿ



ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ ನಡೆಯಿತು.

ತಿ.ನರಸೀಪುರ, ಏ.11– ಯುವ ಸಮುದಾಯ ಸೂಕ್ತ ಸಮಯದಲ್ಲಿ ಉತ್ತಮ ಆಲೋಚನೆಗಳೊಂದಿಗೆ ಸರಿಯಾದ ನಿರ್ಧಾರಗಳನ್ನು ಕೈಗೊಂಡಲ್ಲಿ ಜೀವನವನ್ನು ಯಶಸ್ಸಿನ ಹಾದಿಯಲ್ಲಿ ಕೊಂಡೊಯ್ಯಲು ಸಾಧ್ಯ ಎಂದು ಮೈಸೂರು ವಿಶ್ವ ವಿದ್ಯಾಲಯದ ಅನುವಂಶೀಯ ಮತ್ತು ಜಿನೋಮಿಕ್ಸ್ ಸಂಶೋಧನಾ ವಿಭಾಗದ ಪ್ರೊ.ಸುತ್ತೂರು ಎಸ್.ಮಾಲಿನಿ ಅಭಿಪ್ರಾಯಪಟ್ಟರು.

ಪಟ್ಟಣದ ಹಳೇ ಸಂತೇಮಾಳದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬದುಕಿನಲ್ಲಿ ನಿರ್ಧಾರಗಳನ್ನು ಕೈಗೊಳ್ಳುವಾಗ ಯಾವುದೇ ತರಾತುರಿ ಇರಬಾರದು. ಹಲವು ಸಲ ಯೋಚಿಸಿ ನಿರ್ಧಾರವನ್ನು ಕೈಗೊಳ್ಳಬೇಕು. ಲೈಂಗಿಕ ದೌರ್ಜನ್ಯ, ವಿಚ್ಛೇದನಗಳು, ಹೆಚ್ಚಾಗುತ್ತಿರುವ ಸಮಯದಲ್ಲಿ ಮಹಿಳೆಯರು ಜಾಗರೂಕತೆಯಿಂದ ಜೀವನ ರೂಪಿಸಿಕೊಳ್ಳಬೇಕು. ತಾರತಮ್ಯ ಬಿಟ್ಟು ಸಂಸಾರದಲ್ಲಿ ಹೊಂದಾಣಿಕೆ ಮನೋಭಾವ, ರೂಢಿಸಿಕೊಂಡಾಗ ಜೀವನ ಶಾಂತಿಯುತವಾಗಿರುತ್ತದೆ ಎಂದರು

ಪ್ರಸಕ್ತ ಸಮಾಜದಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿದ್ದು, ಶಿಕ್ಷಣ, ಆರ್ಥಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ರಕ್ಷಣಾತ್ಮಕ ಯೋಜನೆಗಳನ್ನು ಅಳವಡಿಸಿಕೊಳ್ಳುತ್ತಿರುವುದರಿಂದ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಹೆಚ್ಚು ಸಾಧನೆ ಮಾಡುತ್ತಿದ್ದಾರೆ ಎಂದು ಹೇಳಿದರು.

ಪಟ್ಟಣದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಪಿ.ಇಂದಿರಾ ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ವಿ.ಉದಯ್ ಕುಮಾರ್, ಪ್ರೊ.ಜಿ. ಎಸ್.ದೇವರಾಜೇಗೌಡ, ಡಾ .ರೇಷ್ಮಾ ಚೆಂಗಪ್ಪ, ಡಾ.ಕೆ.ಕೆ.ಮುತ್ತಮ್ಮ, ಡಾ.ಆರ್. ಕೆಂಪರಾಜು, ಪಿ.ಆರ್.ಸವಿತಾ, ಬಿ.ಎಂ. ರಾಮಮೂರ್ತಿ, ಮಹೇಶ್, ಡಾ.ಎಸ್. ಗಂಗಾಧರಯ್ಯ, ಎಂ.ರಾಜಣ್ಣ, ಎನ್. ಶುಭಾ, ಎಸ್.ಪದ್ಮನಾಭ, ಡಾ. ಅಮಿತ್, ಎನ್.ರಾಘವೇಂದ್ರ ಪ್ರಸಾದ್, ಎಸ್.ಡಿ. ಸತ್ಯಶ್ರೀ ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಜರಿದ್ದರು.

ಆಧಾರ್ ಕಾರ್ಡ್‌ನಲ್ಲಿ ಜಾತಿ, ಭಾಷೆ, ಧರ್ಮ ಸೇರಿಸಿ



ತಿ.ನರಸೀಪುರ ಏ.11– ಆಧಾರ್ ಕಾರ್ಡ್‌ನಲ್ಲಿ ಜಾತಿ, ಭಾಷೆ ಮತ್ತು ಧರ್ಮ ಸೇರಿಸುವಂತೆ ಸಾಮಾಜಿಕ ಹೋರಾಟಗಾರ ಎಸ್.ಕೆ ರಾಜೂಗೌಡ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಆಧಾರ್ ಕಾರ್ಡಿನಲ್ಲಿ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಬಯೋಮೆಟ್ರಿಕ್ (ಬೆರಳಚ್ಚು, ಕಣ್ಣಿನ ಪಾಪೆ) ವಿವರಗಳನ್ನು ಒಳಗೊಂಡ ಪ್ರಮುಖ ಗುರುತಿನ ಮತ್ತು ವಿಳಾಸದ ಪುರಾವೆಯಾಗಿದೆ. ಇದು ಪೌರತ್ವದ ಪುರಾವೆಯಲ್ಲದಿದ್ದರೂ ಡಿಜಿಟಲ್ ದೃಢೀಕರಣಕ್ಕೂ ಸೇರಿದಂತೆ ಭಾರತದ ನಾಗರೀಕರು ದಿನನಿತ್ಯ ಹೆಚ್ಚು ಬಳಸುವ ದಾಖಲೆಯ ಗುರುತಿನ ಚೀಟಿ ಇದಾಗಿದ್ದು ಇಂತಹ ಅತ್ಯಂತ ಉಪಯುಕ್ತವಾದ ಮತ್ತು ಅತ್ಯವಶ್ಯಕವಾಗಿರುವ ಆಧಾರ್‌ನಲ್ಲಿ ಭಾರತ ಒಕ್ಕೂಟದ ನಾಗರೀಕರ ಜಾತಿ, ಭಾಷೆ ಮತ್ತು ಧರ್ಮವನ್ನು ದಾಖಲಿಸದಿರುವುದು ಸರಿಯಾದ ಕ್ರಮವಲ್ಲ. ಆದ್ದರಿಂದ ನಾಗರೀಕರ ಜಾತಿ, ಭಾಷೆ ಮತ್ತು ಧರ್ಮವನ್ನು ಕಡ್ಡಾಯವಾಗಿ ಸೇರಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಬಗ್ಗೆ ನಮ್ಮ ರಾಜ್ಯದ ಸಂಸದರು ಸಂಸತ್ತಿನಲ್ಲಿ ದನಿ ಎತ್ತಬೇಕು ಮತ್ತು ರಾಜ್ಯ ಸರ್ಕಾರವು ಕೂಡ ಇತ್ತ ಗಮನಹರಿಸಿ ಸೂಕ್ತ ಕ್ರಮ ಕೈಗೊಂಡು ಭಾರತ ಒಕ್ಕೂಟ ಸರ್ಕಾರಕ್ಕೆ ಈ ಬಗ್ಗೆ ಒತ್ತಾಯ ಮಾಡಬೇಕು. ಪ್ರತಿಯೊಂದು ಸಣ್ಣ ಕೆಲಸದಿಂದ ಪ್ರಮುಖ ಕೆಲಸದವರೆಗೆ ಹುಟ್ಟಿನಿಂದ ಸಾಯುವವರೆಗೂ ಇಂದು ಆಧಾರ್ ಬೇಕಾಗಿದೆ. ಇದಕ್ಕೆ ಭಾಷೆ ಮತ್ತು ಧರ್ಮವನ್ನು ಸೇರಿಸಬೇಕು ಎಂದರು.

ವಾಟಾಳು ಶ್ರೀಗಳಿಂದ ಆಶೀರ್ವಾದ



ತಿ.ನರಸೀಪುರ, ಏ.11– ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಹಿರಿಯೂರು ವೀರೇಂದ್ರ (ನವೀನ್)ರವರು ವಾಟಾಳು ಮಠದ ಪೀಠಾಧ್ಯಕ್ಷರಾದ ಸಿದ್ದಲಿಂಗ ಶಿವಾಚಾರ್ಯ ಮಹಾ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ವಾಟಾಳ್ ಶ್ರೀಗಳು ಮಾತನಾಡಿ ಬಡವರಿಗೆ ಸರ್ಕಾರದಿಂದ ಬರುವ ಸವಲತ್ತುಗಳನ್ನು ನೇರವಾಗಿ ತಲುಪಿಸುವ ಮೂಲಕ ಅನುಷ್ಠಾನ ಸಮಿತಿಗೆ ಪೂರಕವಾಗಿ ಹೊಸ ರೂಪ ನೀಡಬೇಕು ಎಂದರು.

ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಹ್ಯಾಕನೂರು ಉಮೇಶ್ ಪಿಎಸಿಎಸ್ ನಿರ್ದೇಶಕ ವೀರಭದ್ರ ಬಸ್ ಮಾಲೀಕರು ಮನೋಜ್ ಕುಮಾರ, ಅಖಿಲ ಭಾರತೀಯ ಲಿಂಗಾಯಿತ ಯುವ ಘಟಕದ ಜಿಲ್ಲಾ ಉಪಾಧ್ಯಕ್ಷ ನಿಲಸೋಗೆ ಮಹಾದೇವ ಪ್ರಸಾದ್, ದೊಡ್ಡನಹುಂಡಿ ಮೂರ್ತಿ, ಜಾಲಹಳ್ಳಿ ಸುರೇಶ್, ಸುಜ್ಜಲೂರು ರಾಜು ಇದ್ದರು.

ಹೈಕ್ಳು ಕಿಚ್ಚು ಚಲನಚಿತ್ರ ಮುಹೂರ್ತಕ್ಕೆ ಚಾಲನೆ



ಪಿರಿಯಾಪಟ್ಟಣ: ಯುವ ಕಲಾವಿದ ನವೀನ್ ರಾಜ್ ಅಭಿನಯದ ಪವಿತ್ರ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ಹೈಕ್ಳು ಕಿಚ್ಚು ಚಲನಚಿತ್ರದ ಮುಹೂರ್ತ ಪಿರಿಯಾಪಟ್ಟಣದ ಗ್ರಾಮ ದೇವತೆ ಮಸಣಿಕಮ್ಮ ದೇವಸ್ಥಾನದ ಆವರಣದಲ್ಲಿ ನಡೆಯಿತು. ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ ಕ್ಲಾಪ್ ಮಾಡುವುದರ ಮೂಲಕ ಮುಹೂರ್ತಕ್ಕೆ ಚಾಲನೆ ನೀಡಿದರು ನಂತರ ಮಾತನಾಡಿದ ಅವರು ಮಕ್ಕಳು ಮನಸ್ಸು ಮಾಡಿ ರೊಚ್ಚಿಗೆದ್ದರೆ ವಯಸ್ಸಿನ ವಯೋಮಿತಿ ಇಲ್ಲದೆ ಯಾವುದೇ ಕಾರ್ಯವನ್ನು ಸಾಧಿಸಬಹುದು ಎಂಬ ಗ್ರಾಮೀಣ ಸೊಗಡಿನ ಚಿತ್ರಕಥೆ ಇದಾಗಿದೆ ಎಂದರು

ಮೊರಾರ್ಜಿ ದೇಸಾಯಿ ವಸತಿ ಕಾಲೇಜಿಗೆ ಶೇ.100ರಷ್ಟು ಫಲಿತಾಂಶ


ಕಾಲೇಜಿಗೆ ಉತ್ತಮ ಫಲಿತಾಂಶ ತಂದುಕೊಟ್ಟ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಸುತ್ತೂರು: ವರುಣಾ ಕ್ಷೇತ್ರದ ಎಸ್. ಹೊಸಕೋಟೆ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಕಾಲೇಜಿನ ವಿದ್ಯಾರ್ಥಿಗಳು ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಗಮನಾರ್ಹ ಮತ್ತು ಅಭೂತ ಪೂರ್ವ ಸಾಧನೆಗೈದಿದ್ದಾರೆ. ವಿಶೇಷವೆಂದರೆ ಈ ಸಾಲಿನಲ್ಲಿ ಪರೀಕ್ಷೆ ಬರೆದ 64 ವಿದ್ಯಾರ್ಥಿಗಳು ಕೂಡಾ ಉತ್ತೀರ್ಣರಾಗಿ, ಶೇ.100 ರಷ್ಟು ಫಲಿತಾಂಶಕ್ಕೆ ಸಾಕ್ಷಿಯಾಗಿದ್ದಾರೆ.

ಹೌದು ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಒಟ್ಟು 64 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 31 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಹಾಗೂ 33 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದುವ ಮೂಲಕ ಕಾಲೇಜಿನ ಹಾಗೂ ಪೋಷಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಸಾಗರ್.ಎನ್. ಎಂಬ ವಿದ್ಯಾರ್ಥಿ ಶೇ. 96.67 ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದರೆ, ಬಿ.ಎಂ.ರಂಜಿತ ಶೇ.95.83 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದು, ಚೈತ್ರ ಶೇ.95.66 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾಳೆ. ಕನ್ನಡ ಭಾಷೆಯಲ್ಲಿ 18 ವಿದ್ಯಾರ್ಥಿಗಳು 100ಕ್ಕೆ 100 ಅಂಕ ಪಡೆದಿದ್ದು, ಹಾಗೂ ಒಬ್ಬ ವಿದ್ಯಾರ್ಥಿ ಗಣಕ ವಿಜ್ಞಾನ ವಿಷಯದಲ್ಲಿ 100ಕ್ಕೆ 100 ಅಂಕ ಪಡೆದಿದ್ದಾರೆ.

ಈ ಮಕ್ಕಳ ಸಾಧನೆ ಕುರಿತು ಮಾಧ್ಯಮದವರೊಂದಿಗೆ ಮಾಹಿತಿ ಹಂಚಿಕೊಂಡ ಕಾಲೇಜಿನ ಪ್ರಾಂಶುಪಾಲರಾದ ಮಹೇಂದ್ರ ಎನ್.ಸಿ ಹಾಗೂ ಸಿಬ್ಬಂದಿಗಳು ವಿದ್ಯಾರ್ಥಿಗಳನ್ನು ಅಭಿನಂದಿಸಿ, ಕೊಂಡಾಡಿದರು.

ಅಲ್ಲದೇ ರೈತರು ಹಾಗೂ ಅಕ್ಕ ಪಕ್ಕದ ಗ್ರಾಮದ ಕೂಲಿ ಕಾರ್ಮಿಕರ ಮಕ್ಕಳೇ ಈ ಸಾಧನೆ ಪಟ್ಟಿಯಲ್ಲಿ ಹೆಚ್ಚಿದ್ದು, ಸಿಎಂ ತವರು ಜಿಲ್ಲೆಯಲ್ಲಿ ಈ ಮಕ್ಕಳ ಆಸಕ್ತಿ ಹಾಗೂ ವಿದ್ಯಾಭ್ಯಾಸದ ಮೇಲಿನ ಅತಿ ಹೆಚ್ಚಿನ ಕಾಳಜಿಯೇ ಇದಕ್ಕೆ ಸಾಕ್ಷಿಯಾಗಿದೆ ಎಂದು ಪ್ರಾಂಶುಪಾಲರಾದ ಮಹೇಂದ್ರ ಎನ್.ಸಿ ಇದೇ ವೇಳೆ ಭಾವುಕರಾದರು.

ದ್ವಿತೀಯ ಪಿಯುಸಿ: ಹೆಚ್.ಡಿ.ಕೋಟೆ ಟಾಪರ್‌ಗಳಲ್ಲಿ ವಿದ್ಯಾರ್ಥಿನಿಯರೇ ಮೇಲುಗೈ


ಮಹಾಲಕ್ಷ್ಮಿ

ಸ್ಪೂರ್ತಿ

ವರ್ಷಿತ

ನಿತ್ಯಶ್ರೀ

ಹೆಚ್.ಡಿಕೋಟೆ: ತಾಲೂಕಿನಲ್ಲಿ ಪಿಯುಸಿ ಪರೀಕ್ಷೆ ವಿಜ್ಞಾನ ವಿಭಾಗದಲ್ಲಿ ತುಂಬಸೋಗೆ ಗ್ರಾಮದಲ್ಲಿರುವ ಎಂ.ಎಂ.ಕೆ ಸ್ವತಂತ್ರ ಪದವಿ ಪೂರ್ವ ಕಾಲೇಜು ಪ್ರಥಮ ಸ್ಥಾನ ಪಡೆದಿದೆ ವಿದ್ಯಾರ್ಥಿನಿ ಮಹಾಲಕ್ಷ್ಮಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 582 ಅಂಕಗಳನ್ನು ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ನಿತ್ಯಾಶ್ರೀ ಮತ್ತು ಭುವನ ಇಬ್ಬರು ವಿದ್ಯಾರ್ಥಿನಿಯರು 580 ಅಂಕಗಳನ್ನು ಪಡೆದು ತಾಲೂಕಿಗೆ ಎರಡನೇ ಸ್ಥಾನ ಪಡೆದರೆ, ಕೋಟೆ ಪಟ್ಟಣದಲ್ಲಿರುವ ಆದಿಚುಂಚನಗಿರಿ ಕಾಲೇಜಿನ ಮೂವರು ವಿದ್ಯಾರ್ಥಿಗಳು ವಾಣಿಜ್ಯ ಮತ್ತು ಕಲಾ ವಿಭಾಗದಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಕೀರ್ತಿ ತಂದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ವರ್ಷಿತಾ ಮತ್ತು ಸ್ಪೂರ್ತಿ ತಲಾ 592 ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಪಟ್ಟಣದ ವಿಶ್ವ ಭಾರತಿ ಕಾಲೇಜಿನ ವಿದ್ಯಾರ್ಥಿನಿ ವೀಣಾ ಅಯ್ಯರ್ ವಿಜ್ಞಾನ ವಿಭಾಗದಲ್ಲಿ 579 ಅಂಕಗಳನ್ನು ಪಡೆದು ತಾಲೂಕಿಗೆ 3ನೇ ಸ್ಥಾನ ಪಡೆದಿದ್ದಾರೆ.


ವೀಣಾ ಅಯ್ಯರ್

ಭುವನ

ಹೆಚ್.ಡಿ.ಕೋಟೆ ತಾಲೂಕಿಗೆ ಪ್ರಥಮ ಸ್ಥಾನ



ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 582 ಅಂಕಗಳನ್ನು ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ ಹೆಚ್.ಡಿ.ಕೋಟೆಯ ಎಂ.ಎಂ.ಕೆ. ಸ್ವತಂತ್ರ ಪದವಿಪೂರ್ವ ಕಾಲೇಜ್‌ನ ವಿದ್ಯಾರ್ಥಿನಿ ಮಹಾಲಕ್ಷ್ಮಿಯನ್ನು ಕಾಲೇಜಿನ ವತಿಯಿಂದ ಅಭಿನಂದಿಸಲಾಯಿತು. ಈಕೆ ಪಟ್ಟಣದ ಹೌಸಿಂಗ್ ಬೋರ್ಡ್ ನಿವಾಸಿಗಳಾದ ಮಹೇಶ್ ಮತ್ತು ಲತಾ ದಂಪತಿ ಪುತ್ರಿ.

ಮೈಸೂರು ಮಿತ್ರ

ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಪಂಜಾಬ್ ಕಿಂಗ್ಸ್‌ಗೆ ಜಯ

ಮುಲ್ಲನ್‌ಪುರ, ಏ.11(ವಿವಿಹೆಚ್)– ಪ್ರಭ್‌ಸಿಮ್ರಾನ್ ಸಿಂಗ್, ಪ್ರಿಯಾನ್ಶ್ ಆರ್ಯ ಹಾಗೂ ನಾಯಕ ಶ್ರೇಯಸ್ ಅಯ್ಯರ್ ಅವರ ಸ್ಫೋಟಕ ಬ್ಯಾಟಿಂಗ್ ಬಲದಿಂದ ಪಂಜಾಬ್ ಕಿಂಗ್ಸ್ ಟೂರ್ನಿಯಲ್ಲಿ ಮೂರನೇ ಗೆಲುವು ದಾಖಲಿಸಿತು. ಬ್ಯಾಟಿಂಗ್‌ನಲ್ಲಿ ಅಬ್ಬರಿಸಿ ಬೌಲಿಂಗ್‌ನಲ್ಲಿ ಮುಗ್ಗರಿಸಿದ ಸನ್‌ರೈಸರ್ಸ್ ಹೈದರಾಬಾದ್ ಸತತ ಎರಡನೇ ಸೋಲು ಕಂಡಿತು.


ಶ್ರೇಯಸ್ ಅಯ್ಯರ್–ಶಶಾಂಕ್ ಸಿಂಗ್ ಬ್ಯಾಟಿಂಗ್.

ಇಲ್ಲಿನ ಮಹಾರಾಜ ಯದವೀಂದ್ರ ಸಿಂಗ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ 2026ರ 17ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಎಸ್‌ಆರ್‌ಹೆಚ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 219 ರನ್ ಕಲೆಹಾಕಿತು. ಈ ಗುರಿಯನ್ನು ಯಶಸ್ವಿಯಾಗಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ 18.5 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 223 ರನ್ ಕಲೆಹಾಕಿತು.

ಎಸ್‌ಆರ್‌ಹೆಚ್ ಪರ ಅಭಿಷೇಕ್ ಶರ್ಮಾ ಹಾಗೂ ಟ್ರಾವಿಸ್ ಹೆಡ್ ಜೋಡಿ ಪವರ್‌ಪ್ಲೇನಲ್ಲೇ ಶತಕದ ಜತೆಯಾಟವನ್ನಾಡಿ ಉತ್ತಮ ಆರಂಭ ಕಟ್ಟಿಕೊಟ್ಟರು. ಟ್ರಾವಿಸ್ ಹೆಡ್ 23 ಎಸೆತಗಳಲ್ಲಿ 5 ಬೌಂಡರಿ ಹಾಗೂ ಒಂದು ಸಿಕ್ಸರ್ ಸಹಿತ 38 ರನ್ ಬಾರಿಸಿದರೆ, ಅಭಿಷೇಕ್ ಶರ್ಮಾ 28 ಎಸೆತಗಳಲ್ಲಿ 5 ಬೌಂಡರಿ ಹಾಗೂ 8 ಸಿಕ್ಸರ್ ಸಹಿತ 74 ರನ್ ಬಾರಿಸಿದರು. ಈ ಇಬ್ಬರ ವಿಕೆಟ್ ಬಳಿಕ ಕಣಕ್ಕಿಳಿದ ನಾಯಕ ಇಶಾನ್ ಕಿಶನ್ 27 (17), ಹೆನ್ರಿಚ್ ಕ್ಲಾಸೆನ್ 39(33) ಹಾಗೂ ಅನಿಕೇತ್ ವರ್ಮಾ 18(9) ರನ್ ಕಲೆ ಹಾಕಿದರು. ಉಳಿದಂತೆ ಸಲೀಲ್ ಅರೋರಾ 9, ಹರ್ಷ್ ದುಬೆ ಅಜೇಯ 1 ರನ್ ಹಾಗೂ ಯಾವುದೇ ರನ್ ಗಳಿಸದ ನಿತಿಶ್ ಕುಮಾರ್ ರೆಡ್ಡಿ ಅಜೇಯರಾಗಿ ಉಳಿದರು.

ಪಂಜಾಬ್ ಕಿಂಗ್ಸ್ ಪರ ಶಶಾಂಕ್ ಸಿಂಗ್ ಹಾಗೂ ಅರ್ಷ್‌ದೀಪ್ ಸಿಂಗ್ 2 ವಿಕೆಟ್, ಜೇವಿಯರ್ ಬಾರ್ಟ್‌ಲೆಟ್ ಒಂದು ವಿಕೆಟ್ ಪಡೆದರು. ಕಣಕ್ಕಿಳಿದ ಪ್ರಿಯಾನ್ಶ್ ಆರ್ಯ ಹಾಗೂ ಪ್ರಬ್ ಸಿಮ್ರಾನ್ ಸಿಂಗ್ 99 ರನ್‌ಗಳ ಜತೆಯಾಟವನ್ನಾಡಿ ತಂಡಕ್ಕೆ ಉತ್ತಮ ಆರಂಭಮಾಡಿಕೊಟ್ಟರು. ಪ್ರಿಯಾನ್ಶ್ ಆರ್ಯ 20 ಎಸೆತಗಳಲ್ಲಿ 5 ಬೌಂಡರಿ ಹಾಗೂ 5 ಸಿಕ್ಸರ್ ಸಹಿತ 57 ರನ್ ಬಾರಿಸಿದರೆ, ಪ್ರಬ್‌ಸಿಮ್ರಾನ್ ಸಿಂಗ್ 25 ಎಸೆತಗಳಲ್ಲಿ 4 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 51 ರನ್ ಬಾರಿಸಿದರು. ನಂತರ ಕೂಪರ್ ಕೊಲೊನಿ 11 ರನ್, ನೆಹಲ್ ವಧೇರ 14 ರನ್ ಗಳಿಸಿ ಔಟ್ ಆದರು.

ಮತ್ತೊಂದೆಡೆ ನೆಲಕಚ್ಚಿ ನಿಂತ ನಾಯಕ ಶ್ರೇಯಸ್ ಅಯ್ಯರ್ 33 ಎಸೆತಗಳಲ್ಲಿ 5 ಬೌಂಡರಿ ಹಾಗೂ 5 ಸಿಕ್ಸರ್ ಸಹಿತ ಅಜೇಯ 69 ರನ್ ಬಾರಿಸಿದರು. ಇವರಿಗೆ ಸಾಥ್ ನೀಡಿದ ಶಶಾಂಕ್ ಸಿಂಗ್ ಅಜೇಯ 16 ರನ್ ಗಳಿಸಿದರು. ಎಸ್‌ಆರ್‌ಹೆಚ್ ಪರ ಶಿವಾಂಗ್ ಕುಮಾರ್ ಪ್ರಮುಖ 4 ವಿಕೆಟ್, ಹರ್ಷ್ ದುಬೆ ಒಂದು ವಿಕೆಟ್ ಪಡೆದರು. ಪಂಜಾಬ್ ನಾಯಕ ಶ್ರೇಯಸ್ ಅಯ್ಯರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಚೆನ್ನೈ ಸೂಪರ್ ಕಿಂಗ್ಸ್‌ಗೆ ಗೆಲುವು

ಚೆನ್ನೈ, ಏ.11(ವಿವಿಹೆಚ್)– ಸಂಜು ಸ್ಯಾಮ್ಸನ್ ಅಜೇಯ ಶತಕ, ಜೇಮಿ ಓವರ್‌ಟನ್ ಬಿಗಿ ಬೌಲಿಂಗ್ ದಾಳಿ ನೆರವಿನಿಂದ ಅತಿಥೇಯ ಚೆನ್ನೈಸೂಪರ್ ಕಿಂಗ್ಸ್, ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು 23ರನ್‌ಗಳ ಸೋಲಿಸುವುದರೊಂದಿಗೆ ಟೂರ್ನಿಯಲ್ಲಿ ಮೊದಲ ಗೆಲುವು ದಾಖಲಿಸಿತು.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಸಂಜು ಸ್ಯಾಮ್ಸನ್ ಹಾಗೂ ಆಯೂಷ್ ಮ್ಹಾತ್ರೆ ಸ್ಫೋಟಕ ಬ್ಯಾಟಿಂಗ್ ನೆರವಾಯಿತು.

ಸತತ ವೈಫಲ್ಯ ಅನುಭವಿಸುತ್ತಿರುವ ನಾಯಕ ಋತುರಾಜ್ ಗಾಯಕ್ವಾಡ್ ಈ ಪಂದ್ಯದಲ್ಲಿಯೂ ನಿರಾಸೆ ಮೂಡಿಸಿದ್ದು, ಕೇವಲ 15 ರನ್ ಗಳಿಸಿ ಪೆವಿಲಿಯನ್ ಸೇರಿದರು. ಮೊದಲ ಮೂರು ಪಂದ್ಯಗಳಲ್ಲಿ ನಿರೀಕ್ಷಿತ ಪ್ರದರ್ಶನ ನೀಡುವಲ್ಲಿ ವಿಫಲವಾಗಿದ್ದ ಸಂಜು ಸ್ಯಾಮ್ಸನ್ ಡೆಲ್ಲಿ ವಿರುದ್ಧ ಶತಕ ಸಿಡಿಸಿದರು. 56 ಎಸೆತಗಳನ್ನು ಎದುರಿಸಿದ ಈ ಬಲಗೈ ದಾಂಡಿಗ 15 ಬೌಂಡರಿ ಹಾಗೂ 4 ಭರ್ಜರಿ ಸಿಕ್ಸರ್ ಮೂಲಕ ಅಜೇಯ 115 ರನ್ ಕಲೆಹಾಕಿದರು. ಇದರೊಂದಿಗೆ ಸಿಎಸ್‌ಕೆ ಪರ ಶತಕ ದಾಖಲಿಸಿದ ಮೊದಲ ವಿಕೆಟ್ ಕೀಪರ್ ಎಂಬ ದಾಖಲೇ ಬರೆದರಲ್ಲದೇ, 2026ರ ಐಪಿಎಲ್ ಟೂರ್ನಿಯಲ್ಲಿ ಶತಕ ದಾಖಲಿಸಿದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆಗೂ ಪಾತ್ರರಾದರು.

ಇವರಿಗೆ ಸಾಥ್ ನೀಡಿದ ಆಯೂಷ್ ಮ್ಹಾತ್ರೆ 36 ಎಸೆತಗಳಲ್ಲಿ 59 ರನ್ ಗಳಿಸಿ ರಿಟೈರ್ಡ್ ಹರ್ಟ್ ಔಟ್ ಆಗಿ ಹೊರನಡೆದರು. ಬಳಿಕ ಬಂದ ಶಿವಂ ದುಬೆ 10 ಎಸೆತಗಳಲ್ಲಿ 20 ರನ್ ಚಚ್ಚಿದರು. ಇದರೊಂದಿಗೆ ಸಿಎಸ್‌ಕೆ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 212 ರನ್ ಗಳಿಸಿತು. ಡೆಲ್ಲಿ ಪರ ನಾಯಕ ಅಕ್ಷರ್ ಪಟೇಲ್ 1 ವಿಕೆಟ್ ಕಿತ್ತರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಡೆಲ್ಲಿಗೆ ಉತ್ತಮ ಆರಂಭ ಸಿಕ್ಕಿತು. ಆದರೆ ಅದನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಮಧ್ಯಮ ಕ್ರಮಾಂಕ ಎಡವಿತು.



ಆರಂಭಿಕ ಬ್ಯಾಟರ್ ಪಥುಮ್ ಸಿಸ್ಸಾಂಕ 41(24), ಕೆ.ಎಲ್.ರಾಹುಲ್ 18(10) ರನ್ ಗಳಿಸಿ ಔಟಾದರು. ನಂತರ ಬಂದ ಸಮೀರ್ ರಿಜ್ವಿ 6(9), ನಾಯಕ ಅಕ್ಷರ್ ಪಟೇಲ್ 1(2), ಡೇವಿಡ್ ಮಿಲ್ಲರ್ 17(14), ಅಶುತೋಷ್ ಶರ್ಮಾ 19(10), ಅಕ್ವಿಬ್ ನಬಿ 4(2) ಸ್ಥಿರ ಪ್ರದರ್ಶನ ತೋರುವಲ್ಲಿ ವಿಫಲವಾದ್ದರಿಂದ ತಂಡಕ್ಕೆ ದೊಡ್ಡ ಹೊಡೆತ ಬಿದ್ದಿತು.

ಈ ವೇಳೆ ನೆಲಕಚ್ಚಿ ನಿಂತ ಟ್ರಿಸ್ಟನ್ ಸ್ಟಬ್ಸ್ ಏಕಾಂಗಿ ಹೋರಾಟ ನಡೆಸಿದರೂ ಡೆಲ್ಲಿಗೆ ಗೆಲುವು ತಂದುಕೊಡಲು ಸಾಧ್ಯವಾಗಲಿಲ್ಲ. 38 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್ ಸಹಿತ 60 ರನ್ ಗಳಿಸಿ ಔಟಾದರು. ಉಳಿದಂತೆ ಕುಲ್ದೀಪ್ ಯಾದವ್ 4(7), ಲುಂಗಿ ಎನ್‌ಗಿಡಿ 3(5), ಹಾಗೂ ನಟರಾಜನ್ ಅಜೇಯ 1 ರನ್ ಗಳಿಸಿದರು.

ಅಂತಿಮವಾಗಿ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ ಆಲೌಟ್ ಆಗುವ ಮೂಲಕ 189 ರನ್ ಗಳಿಸಿ 23 ರನ್‌ನಿಂದ ಸೋಲೊಪ್ಪಿಕೊಂಡಿತು.

ಸಿಎಸ್‌ಕೆ ಪರ ಜೇಮಿ ಓವರ್‌ಟನ್ ಕೇವಲ 18ರನ್‌ಗಳಿಗೆ ಪ್ರಮುಖ 4 ವಿಕೆಟ್ ಉರುಳಿಸಿದರು. ಅಂಶುಲ್ ಕಾಂಬೋಜ್ 3, ಖಲೀಲ್ ಅಹ್ಮದ್ ಗುರ್ಜಪ್ನೀತ್ ಸಿಂಗ್ ಹಾಗೂ ನೂರ್ ಅಹ್ಮದ್ ತಲಾ ಒಂದೊಂದು ವಿಕೆಟ್ ಪಡೆದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಡಕಾಯಟ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಗಾರ್ಡಿಯನ್ಸ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ಟೆರರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಲವ್ ಇನ್ಶೂರೆನ್ಸ್ ಕಂಪನಿ (ತ)	4 ಪ್ರದರ್ಶನಗಳು
ಸಂಗಂ	
ಟೆರರ್ (ಕ)	4 ಪ್ರದರ್ಶನಗಳು
ಲಿಡೋ	
ಗ್ಯಾಂಗ್ ಆಫ್ ಯುಕೆ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕ್ಯಾಲೆಂಡರ್ (ಕ)	4 ಪ್ರದರ್ಶನಗಳು



ಎಸ್. ವಿನೀತ್‌ಗೆ ಶೇ. 565 ಅಂಕ

ಮೈಸೂರು, ಏ. 11– ಈ ಸಾಲಿನ ದ್ವಿತೀಯ ಪಿಯು ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಪಾಂಡವಪುರ ತಾಲೂಕಿನ ಚಿನಕುರಳಿಯಲ್ಲಿರುವ ಎಸ್‌ಟಿಜಿ ಪಿಯು ಕಾಲೇಜಿನ ವಿದ್ಯಾರ್ಥಿ ಎಸ್. ವಿನೀತ್ 565 (ಶೇ. 94.16) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಇಂಗ್ಲಿಷ್– 94, ಹಿಂದಿ – 94, ಭೌತಶಾಸ್ತ್ರ– 93, ರಸಾಯನಶಾಸ್ತ್ರ – 89, ಗಣಿತಶಾಸ್ತ್ರ– 99, ಜೀವಶಾಸ್ತ್ರ–96 ಅಂಕ ಗಳಿಸಿದ್ದಾರೆ. ಈತ ಕುರ್ಗಳ್ಳಿಯ ಶ್ರೀನಿವಾಸ್ ಹಾಗೂ ಶಾಲಿನಿ ಅವರ ಪುತ್ರ.

ಎಚ್. ಸುಚೇತನಾಗೆ 508 ಅಂಕ



ಮೈಸೂರು, ಏ. 11– ಈ ಸಾಲಿನ ದ್ವಿತೀಯ ಪಿಯು ಪರೀಕ್ಷೆಯ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ನಗರದ ಬಿಜಿಎಸ್ ಪಿಯು ಕಾಲೇಜಿನ ವಿದ್ಯಾರ್ಥಿನಿ ಎಚ್. ಸುಚೇತನಾ 508 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ರಾಮಕೃಷ್ಣನಗರದ ನಿವಾಸಿ, ಬಿಜೆಪಿ ಮುಖಂಡ ಹೇಮಂತ್ ಹಾಗೂ ನಿಶಾ ಅವರ ಪುತ್ರಿ.

ದಕ್ಷ ಪಿಯು ಕಾಲೇಜಿಗೆ ಶೇ.100ರಷ್ಟು ಫಲಿತಾಂಶ


ಸಮೀಕ್ಷಾ ಕೆ.


ಹರೀಶ್‌ಗೌಡ


ಪ್ರಣವ್ ಗೀತ್


ಪ್ರಕೃತಿ


ತರುಣ್


ಸಹನಾ


ವಿಖ್ಯಾತ್


ವೇದಿಕಾ


ಕವಿತಾ


ಲಕ್ಷ್ಯ


ಚೈತ್ರ


ಮಿಲನ್ ರಾಜ್


ಪ್ರೀತಂ ಶೆಟ್ಟಿ


ಕೀರ್ತನಾ


ನಯನಾ


ವರ್ಷ


ಗಗನಾ

ಮೈಸೂರು, ಏ.11–ಹೂಟಗಳ್ಳಿಯ ದಕ್ಷ ಪಿಯು ಕಾಲೇಜಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಲಭಿಸಿದೆ.

ಪರೀಕ್ಷೆಗೆ ಹಾಜರಾದ 169 ವಿದ್ಯಾರ್ಥಿಗಳಲ್ಲಿ 79 ಮಂದಿ ಅತ್ಯುನ್ನತ, 78 ಮಂದಿ ಪ್ರಥಮ ಹಾಗೂ 15 ಮಂದಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. 29 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ 100/100 ಅಂಕವನ್ನು ಪಡೆದಿದ್ದಾರೆ.

ವಿಜ್ಞಾನ ವಿಷಯದಲ್ಲಿ ಸಮೀಕ್ಷಾ ಕೆ.(588) (ರಾಜ್ಯಕ್ಕೆ 11ನೇ ರ್‍ಯಾಂಕ್), ಹರೀಶ್‌ಗೌಡ(583), ಪ್ರಣವ್ ಗೀತ್ ಕೆ.ಎಸ್.(580) ಪ್ರಕೃತಿ ಎಚ್.ವಿ.(574), ತರುಣ್ ಚಂದ್ರ ಬಿ.ಸಿ.(573), ಸಹನಾ ಎಸ್.(571).

ವಾಣಿಜ್ಯ ವಿಭಾಗದಲ್ಲಿ ವಿಖ್ಯಾತ್ ಗೌಡ(587) (ರಾಜ್ಯಕ್ಕೆ 14ನೇ ರ್‍ಯಾಂಕ್), ಎಂ.ಡಿ.ವೇದಿಕಾ (583), ಕವಿತಾ ಸೀರ್ವಿ (582), ಲಕ್ಷ್ಯ ಟಿ.(580), ಚೈತ್ರ ಸಿ.ಎಸ್.(576), ಮಿಲನ್ ರಾಜ್ ಎನ್.(570), ಟಾಪರ್‌ಗಳಾಗಿ ಹೊಮ್ಮಿದ್ದಾರೆ.

ಮಾಜಿ ಮೇಯರ್ ನಾರಾಯಣ್‌ಗೆ ಡಾ. ಬಾಬು ಜಗಜೀವನ ರಾಮ್ ರಾಜ್ಯ ಪ್ರಶಸ್ತಿ ಪ್ರದಾನ


ಮೈಸೂರಿನ ಪುರಭವನದಲ್ಲಿ ಶನಿವಾರ ಪೌರ ಕಾರ್ಮಿಕರ ವಿವಿಧ ಸಂಘಟನೆಗಳು ಸಂಯುಕ್ತವಾಗಿ ಆಯೋಜಿಸಿದ್ದ ಸಮಾರಂಭದಲ್ಲಿ ಮಾಜಿ ಮೇಯರ್ ನಾರಾಯಣ ಅವರಿಗೆ ಡಾ.ಬಾಬು ಜಗಜೀವನ ರಾಮ್ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಏ.11(ಬಿಎಲ್‌ಯು)– ಮಾಜಿ ಮೇಯರ್ ಹಾಗೂ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ನಾರಾಯಣ ಅವರಿಗೆ ಶನಿವಾರ ಡಾ.ಬಾಬು ಜಗಜೀವನ ರಾಮ್ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ಪುರಭವನದಲ್ಲಿ ಪೌರ ಕಾರ್ಮಿಕರ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ನಾರಾಯಣ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ, ಆತ್ಮೀಯವಾಗಿ ಅಭಿನಂದಿಸಲಾಯಿತು.

ಸಮಾರಂಭ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಅವರು ಮಾತನಾಡಿ, ಮೈಸೂರು ನಗರ ಪಾಲಿಕೆ ಸೇರಿದಂತೆ ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಪೌರ ಕಾರ್ಮಿಕರು ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿದ್ದರು. ಅವರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಸೇರಿದಂತೆ ಯಾವುದೇ ಸೌಲಭ್ಯ ದೊರೆಯುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ನಾರಾಯಣ ಅವರು ಗುತ್ತಿಗೆಯಾಧಾರಿತ ಪೌರಕಾರ್ಮಿಕರ ಖಾಯಂಮಾತಿಗೆ ಆಗ್ರಹಿಸಿ ರಾಜ್ಯಾದ್ಯಂತ ಹೋರಾಟ ಆರಂಭಿಸಿದರು ಎಂದು ಹೇಳಿದರು.

ನಾರಾಯಣ ಅವರು ಪೌರ ಕಾರ್ಮಿಕ ಸಂಘಟನೆಯನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಶಕ್ತಿಯುತವಾಗಿ ಸಂಘಟನೆ ಮಾಡಿ ಹೋರಾಟ ತೀವ್ರಗೊಳಿಸಿದರು. ಇವರ ಹೋರಾಟದ ಫಲವಾಗಿ ರಾಜ್ಯ ಸರ್ಕಾರ ಹಂತ ಹಂತವಾಗಿ 36 ಸಾವಿರ ಪೌರ ಕಾರ್ಮಿಕರನ್ನು ಖಾಯಂಗೊಳಿಸಿದೆ. ಇದರಿಂದ ಸಾವಿರಾರು ಪೌರ ಕಾರ್ಮಿಕರು ವೃತ್ತಿ ಭದ್ರತೆಯೊಂದಿಗೆ ನೆಮ್ಮದಿಯ ಬದುಕು ಕಟ್ಟಿಕೊಂಡಿದ್ದಾರೆ ಎಂದು ಡಾ.ತಿಮ್ಮಯ್ಯ ತಿಳಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾರಾಯಣ್ ಅವರನ್ನು ಮೇಯರ್ ಹಾಗೂ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿ ಮಾಡಿದ್ದರು. ಆದರೆ ನಾರಾಯಣ್ ಅವರು ತಮ್ಮ ಸಮುದಾಯದ ಜನರ ಪರವಾಗಿ ರಾಜಕೀಯ ಸ್ಥಾನಮಾನ ನೀಡಿದ ಸಿದ್ದರಾಮಯ್ಯ ಸರ್ಕಾರದ ವಿರುದ್ಧವೇ ಹೋರಾಟ ಮಾಡಿದರು. ಇದು ಕಾರ್ಮಿಕರ ಬಗ್ಗೆ ಇವರಲ್ಲಿರುವ ಬದ್ಧತೆಗೆ ಸಾಕ್ಷಿ ಎಂದರು.

ಸಮಾರಂಭದಲ್ಲಿ ಮಾಜಿ ಮೇಯರ್ ಅನಂತು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅನ್ವೇಷಣಾ ಟ್ರಸ್ಟ್‌ನ ಉಚಿತ ಉಪಹಾರ ಯೋಜನೆಗೆ ಡಾ. ಸದಾನಂದ ಮೆಚ್ಚುಗೆ


ಜಯದೇವ ಆಸ್ಪತ್ರೆ ಆವರಣದಲ್ಲಿ 26ನೇ ವಾರದ ಉಚಿತ ಬೆಳಗಿನ ಉಪಹಾರ ಕಾರ್ಯಕ್ರಮಕ್ಕೆ ಡಾ.ಸದಾನಂದ ಚಾಲನೆ ನೀಡಿದರು.

ಮೈಸೂರು, ಏ.11(ಎಂಕೆ)– ದಾನಗಳಲ್ಲಿ ಅನ್ನದಾನ ಶ್ರೇಷ್ಠದಾನವಾಗಿದ್ದು, ರೋಗಿಗಳು ಹಾಗೂ ರೋಗಿಗಳ ಸಂಬಂಧಿಕರಿಗೆ ಕಳೆದ 25 ವಾರಗಳಿಂದ ಉಚಿತವಾಗಿ ಬೆಳಗಿನ ಉಪಾಹಾರ ನೀಡುತ್ತಿರುವ ಅನ್ವೇಷಣಾ ಟ್ರಸ್ಟ್ ಕಾರ್ಯ ಶ್ಲಾಘನೀಯ ಎಂದು ಜಯದೇವ ಹೃದ್ರೋಗ ಸಂಸ್ಥೆಯ ಮೈಸೂರು ಕೇಂದ್ರದ ನಿರ್ದೇಶಕ ಡಾ.ಸದಾನಂದ ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರಿನ ಕೆ.ಆರ್.ಎಸ್ ರಸ್ತೆಯಲ್ಲಿರುವ ಜಯದೇವ ಹೃದ್ರೋಗ ಆಸ್ಪತ್ರೆ ಆವರಣದಲ್ಲಿ ಅನ್ವೇಷಣಾ ಟ್ರಸ್ಟ್ ಹಮ್ಮಿಕೊಂಡಿದ್ದ 26ನೇ ವಾರದ ಅನ್ನದಾನ ಕಾರ್ಯಕ್ರಮಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದ ಅವರು, ಆರ್ಥಿಕವಾಗಿ ಹಿಂದುಳಿದ ಹಾಗೂ ಗ್ರಾಮೀಣ ಪ್ರದೇಶದಿಂದ ಬರುವ ರೋಗಿಗಳಿಗೆ ಉಚಿತ ಚಿಕಿತ್ಸೆ ಹಾಗೂ ರೋಗಿಗಳ ಸಂಬಂಧಿಕರಿಗೆ ಉಚಿತವಾಗಿ ಊಟ ವಿತರಣೆ ಮಾಡುವುದು ಸತ್ಕಾರ್ಯಗಳಲ್ಲಿ ಒಂದಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆಸ್ಪತ್ರೆ ಆವರಣದಲ್ಲಿ ಕಳೆದ 25 ವಾರಗಳಿಂದಲೂ ಪ್ರತಿನಿತ್ಯ ಸುಮಾರು 600 ಮಂದಿಗೆ ಬೆಳಗಿನ ಉಪಾಹಾರ ನೀಡುತ್ತಿರುವ ಅನ್ವೇಷಣಾ ಟ್ರಸ್ಟ್‌ನ ಸೇವಾ ಕಾರ್ಯ ಇದೇ ರೀತಿ ಮುಂದುವರೆಯಲಿ. ಇದರಿಂದ ಸಾಕಷ್ಟು ಜನರಿಗೆ ಅನುಕೂಲವಾಗುತ್ತಿದೆ. ಜಯದೇವ ಆಸ್ಪತ್ರೆಯಲ್ಲೂ ಆರ್ಥಿಕವಾಗಿ ಹಿಂದುಳಿದವರಿಗೆ, ರೋಗಿ ಗಳಿಗೆ ಉಚಿತ ಚಿಕಿತ್ಸೆ ನೀಡಲಾಗುವುದು ಎಂದರು. ಅನ್ವೇಷಣಾ ಟ್ರಸ್ಟ್ ಅಧ್ಯಕ್ಷ ಅಮರನಾಥ ರಾಜೇ ಅರಸ್, ಉಪಾಧ್ಯಕ್ಷ ಲಿಂಗರಾಜೆ ಅರಸ್, ಚುಟುಕು ಸಾಹಿತಿ ಎಂಜಿಆರ್ ಅರಸ್ ಮತ್ತಿತರರಿದ್ದರು.

ಮೈಸೂರು ವಿಮಾನ ನಿಲ್ದಾಣದ ಬಳಿ ಹೆದ್ದಾರಿ ಟನಲ್ ನಿರ್ಮಾಣದ ಪರಿಷ್ಕೃತ ಡಿಪಿಆರ್‌ಗೆ ಕೇಂದ್ರದ ಅನುಮೋದನೆ

ಮೈಸೂರು ವಿಮಾನ ನಿಲ್ದಾಣ ನಿರ್ದೇಶಕಿ ಉಷಾಕುಮಾರಿ ಮಾಹಿತಿ

ಮೈಸೂರು, ಏ.11(ಎಂಕೆ)– ಮೈಸೂರು–ಮಂಡಕಳ್ಳಿ ವಿಮಾನ ನಿಲ್ದಾಣದ ವಿಸ್ತರಣೆಗಾಗಿ ವಿವರವಾದ ಪರಿಷ್ಕೃತ ಯೋಜನಾ ವರದಿ(ಡಿಪಿಆರ್)ಗೆ ಅಂತಿಮ ಅನುಮೋದನೆ ದೊರೆತಿದ್ದು, ನಾಗರಿಕ ವಿಮಾನಯಾನ ಭದ್ರತಾ ಬ್ಯೂರೋ(BCAS) ಅನುಮತಿಗಾಗಿ ಕಾಯುತ್ತಿದ್ದೇವೆ ಎಂದು ಮೈಸೂರು ವಿಮಾನ ನಿಲ್ದಾಣ ನಿರ್ದೇಶಕಿ ಪಿ.ವಿ.ಉಷಾಕುಮಾರಿ ತಿಳಿಸಿದ್ದಾರೆ.


ಮೈಸೂರು ವಿಮಾನ ನಿಲ್ದಾಣ


ಪಿ.ವಿ.ಉಷಾಕುಮಾರಿ

ಮೈಸೂರು ವಿಮಾನ ನಿಲ್ದಾಣ ಉನ್ನತೀಕರಣಕ್ಕಾಗಿ ರನ್‌ವೇ ವಿಸ್ತರಣೆ ಅಗತ್ಯವಾಗಿದ್ದು, ಅದಕ್ಕಾಗಿ ಸುರಂಗ ಮಾರ್ಗ ನಿರ್ಮಾಣ ಮಾಡಲಾಗುತ್ತಿದೆ. ಮೈಸೂರು–ನಂಜನಗೂಡು ಹೆದ್ದಾರಿಗೆ ತಿರುವು ನೀಡಿ, ಹೊಸದಾಗಿ 3.5 ಕಿಲೋ ಮೀಟರ್ ಹೆದ್ದಾರಿ ಅಭಿವೃದ್ಧಿಪಡಿಸಿ ಈ ಮಧ್ಯೆ ಅರ್ಧ ಕಿಲೋ(520 ಮೀಟರ್) ಮೀಟರ್ ಟನಲ್(ಸುರಂಗ)ನಿರ್ಮಾಣ ಮಾಡುವ ಪರಿಷ್ಕೃತ ಡಿಪಿಆರ್‌ಗೆ ರಾಜ್ಯ ಸರ್ಕಾರ, ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ(ಎಎಐ) ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಅನುಮೋದನೆ ದೊರೆತಿದೆ ಎಂದು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ್ದಾರೆ.

ಈ ಮೊದಲು ಮೈಸೂರು–ನಂಜನಗೂಡು ಹೆದ್ದಾರಿಯಲ್ಲಿ ವಾಹನಗಳು ಸಂಚರಿಸಲು ಅಂಡರ್‌ಪಾಸ್ ನಿರ್ಮಿಸಿ, ಅದರ ಮೇಲೆ ರನ್ ನಿರ್ಮಾಣ ಮಾಡಲು ನಿರ್ಧರಿಸಲಾಗಿತ್ತು. ಆದರೆ, ಇದರಿಂದ ಸುರಕ್ಷತೆಗೆ ಧಕ್ಕೆಯಾಗುತ್ತದೆ ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದ ಬಳಿಕ 9 ಕಿಲೋಮೀಟರ್ ಹೆದ್ದಾರಿ ನಿರ್ಮಿಸಲು ಮತ್ತೆ ಡಿಪಿಆರ್ ಸಿದ್ಧಪಡಿಸಲಾಗಿತ್ತು. ಇದಕ್ಕಾಗಿ 550 ಕೋಟಿ ರೂ.ಗಳನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನೀಡಲು ಒಪ್ಪಂದ ಮಾಡಿಕೊಳ್ಳಲಾಗಿತ್ತು. ನಂತರ ಈ ಯೋಜನೆಯನ್ನು ಕೈ ಬಿಟ್ಟು 3 ಕಿಲೋ ಮೀಟರ್ ಹೆದ್ದಾರಿ ಮಾಡಿ, ಮಧ್ಯೆ ಅರ್ಧ ಕಿಲೋ ಮೀಟರ್ ಟನಲ್ ನಿರ್ಮಾಣ ಮಾಡುವ ಪರಿಷ್ಕೃತ ಡಿಪಿಆರ್‌ಗೆ ಅಂತಿಮಗೊಳಿಸಲಾಗಿದೆ ಎಂದು ತಿಳಿಸಿದರು.

ಹೊಸ ಪರಿಷ್ಕೃತ ಡಿಪಿಆರ್‌ಗೆ ಅನುಗುಣವಾಗಿ ಹೆದ್ದಾರಿ ನಿರ್ಮಾಣಕ್ಕಾಗಿ ಎಎಐ 510 ಕೋಟಿ ರೂ.ಗಳನ್ನು ನೀಡಲು ಒಪ್ಪಿಕೊಂಡಿದೆ. ಹೆದ್ದಾರಿ ಮತ್ತು ಸೇವಾ ರಸ್ತೆಗಳಿಗೆ ಅಗತ್ಯವಿರುವ ಭೂಮಿ ಸೇರಿದಂತೆ ಭೂಸ್ವಾಧೀನದ ವೆಚ್ಚವನ್ನು ಎನ್‌ಎಚ್‌ಎಐ ಭರಿಸಬೇಕಾಗುತ್ತದೆ. ಟನಲ್‌ನ ಎರಡೂ ಕಡೆ ದಿನದ 24 ಗಂಟೆಯೂ ಭದ್ರತೆ ನೀಡುವ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು, ಉತ್ತರಕ್ಕಾಗಿ ಕಾಯುತ್ತಿದ್ದೇವೆ. ಹಾಗೆಯೇ ನಾಗರಿಕ ವಿಮಾನಯಾನ ಭದ್ರತಾ ಬ್ಯೂರೋ (BCAS) ಪ್ರಾಥಮಿಕ ಪರಿಶೀಲನೆ ನಡೆಸಿದೆ. ಅಂತಿಮ ಅನುಮೋದನೆಗಾಗಿ ತಜ್ಞರ ಸಮಿತಿಯನ್ನು ರಚಿಸಲಿದ್ದು, ಅನುಮತಿ ನೀಡಿದ ಬಳಿಕ ಹೆದ್ದಾರಿ ನಿರ್ಮಾಣ ಕಾಮಗಾರಿ ಆರಂಭವಾಗಲಿದೆ ಎಂದು ಹೇಳಿದರು.

ಭೂ ಸ್ವಾಧೀನ ಪ್ರಕ್ರಿಯೆ ಅಂತಿಮ: ಮೈಸೂರು ವಿಮಾನ ನಿಲ್ದಾಣ ವಿಸ್ತರಣೆಗಾಗಿ ಭೂ ಸ್ವಾಧೀನ ಪ್ರಕ್ರಿಯೆ ಬಹುತೇಕ ಮುಕ್ತಾಯಗೊಂಡಿದೆ. 3 ಕಿಲೋಮೀಟರ್ ಹೆದ್ದಾರಿ ನಿರ್ಮಾಣಕ್ಕೆ ಮೊದಲು 500 ಕೋಟಿ ರೂ. ನಿಗದಿಯಾಗಿತ್ತು ಅದರ ವೆಚ್ಚ ಇದೀಗ 600 ಕೋಟಿ ರೂ. ಏರಿಕೆಯಾಗಿದ್ದು, ಹೆಚ್ಚುವರಿ 100 ಕೋಟಿ ರೂ.ಗಳನ್ನು ಹೆದ್ದಾರಿ ಪ್ರಾಧಿಕಾರಿ ಅಥವಾ ವಿಮಾನಯಾನ ಪ್ರಾಧಿಕಾರಿ ಭರಿಸಬೇಕಾ ಎಂಬ ಗೊಂದಲ ಸೃಷ್ಟಿಯಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರಲ್ಲಿ ದೇಶಿ ತಳಿಯ ಜವಾರಿ ಕಾಳು ಮೇಳ

ನೈಸರ್ಗಿಕವಾಗಿ ಬೆಳೆದ ಅಪರೂಪದ ಕಾಳುಗಳ ಖರೀದಿಗೆ ಮುಗಿಬಿದ್ದ ಜನ


ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ಜವಾರಿ ಕಾಳು ಮೇಳದಲ್ಲಿ ಖರೀದಿಯಲ್ಲಿ ತೊಡಗಿರುವ ಮಹಿಳೆಯರು.

ಮೈಸೂರು, ಏ.11(ಬಿಎಲ್‌ಯು)– ನೈಸರ್ಗಿಕ ಕೃಷಿ ಪದ್ಧತಿಯಡಿ ಬೆಳೆದ ಅಪರೂಪದ 'ದೇಶಿ ತಳಿ ಕಾಳು'ಗಳ ಪ್ರದರ್ಶನ ಮತ್ತು ಮಾರಾಟ 'ಜವಾರಿ ಕಾಳು ಮೇಳ' ಶನಿವಾರ ಆರಂಭವಾಯಿತು.

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಎರಡು ದಿನಗಳ ಕಾಲ ಆಯೋಜಿಸಿರುವ ಜವಾರಿ ಕಾಳು ಮೇಳದಲ್ಲಿ ವೈವಿಧ್ಯಮಯ ಪೌಷ್ಠಿಕಾಂಶಯುಕ್ತ ಬೇಳೆಕಾಳುಗಳು, ಔಷಧೀಯ ಗುಣವುಳ್ಳ ಕಾಳುಗಳು ಹಾಗೂ ಅವುಗಳನ್ನು ಬಳಸಿ ತಯಾರಿಸಿದ ಆಹಾರ ಖಾದ್ಯಗಳನ್ನು ಸವಿಯಬಹುದಾಗಿದೆ.

ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಬೆಳೆದ ಚನ್ನಂಗಿ ಬೇಳೆ, ಕೆಂಪು ಅವರೆ, ಹಳದಿ ಹೆಸರು ಕಾಳು, ಅಲಸಂದೆ, ಕಪ್ಪು ಅಲಸಂದೆ, ಮಡಕೆ ಕಾಳು, ಕಪ್ಪು ಹೆಸರು ಕಾಳು, ಕಡಲೆ, ಹಸಿರು ಬಟಾಣಿ, ಬಿಳಿ ಅಲಸಂದೆ, ಸಜ್ಜೆ, ವಿವಿಧ ಮಾದರಿಯ ಭತ್ತಗಳಾದ ಸಿದ್ದ ಸಣ್ಣ, ಗಂಧ ಸಾಲೆ, ಕೆಂಪು ಸಣ್ಣ, ರಾಜಮುಡಿ, ಬರ್ಮಾ ಬ್ಲಾಕ್, ರಾಗಿ, ಕುಯ್ಯು ಕೀರೆ, ಅರ್ಕ, ನವಣೆ, ಸಾಮೆ, ಬರಗು, ಉದಲು ಪಾಲಕ್, ಕಿರಕೀರೆ, ಸಬ್ಬಸಿಗೆ, ಹಸಿರು ದಂಟು, ಅವರೆ ಸೇರಿದಂತೆ ವೈವಿಧ್ಯಮಯ ಕಾಳುಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಕೆಸು, ಅರಿಶಿಣ, ಸುವರ್ಣ ಗೆಡ್ಡೆ, ಬಿಳಿ ಕಾಜಲ್, ಆಳ್ವಿ, ಚಿಯಾ, ಅಜವಾನ, ಬಳ್ಳಿ ಆಲೂಗೆಡ್ಡೆ, ಹಲಸು, ಈರಳೆ ಕಾಯಿ, ನಾಟಿ ಬೆಲ್ಲ ಸೇರಿದಂತೆ ಹಲವು ರೀತಿಯ ದೇಶಿ ತಳಿಯ ಕಾಳು, ಹಣ್ಣು, ಕಾಯಿ ಸೇರಿದಂತೆ ಹಲವು ರೀತಿಯ ಆಹಾರ ಪದಾರ್ಥಗಳನ್ನು ಖರೀದಿಸಿದ ಜನ, ಅವುಗಳ ಬಗ್ಗೆ ಆಸಕ್ತಿಯಿಂದ ಮಾಹಿತಿ ಕೂಡ ಪಡೆದರು.

ದುಬಾರಿಯಾದರೂ ಖರೀದಿ: ಸಾಮಾನ್ಯವಾಗಿ ಎಂತಹ ಗುಣಮಟ್ಟದ ಅಕ್ಕಿ ಬೆಲೆ ಗರಿಷ್ಠ 100 ರೂಪಾಯಿ ಇರಬಹುದು. ಆದರೆ ಕಾಳು ಮೇಳದಲ್ಲಿ ಮಾರಾಟಕ್ಕಿಟ್ಟಿದ್ದ ಬಿದರಕ್ಕಿ ಕೆಜಿ.ಗೆ ಸಾವಿರ ರೂಪಾಯಿ. ಇದು ಕಾಡಿನಲ್ಲಿ ನೈಸರ್ಗಿಕವಾಗಿ ಬೆಳೆಯುವ ಭತ್ತ. ಮಧ್ಯ ಪ್ರದೇಶದ ಕಾಡಿನಲ್ಲಿ 60 ವರ್ಷಕ್ಕೊಮ್ಮೆ ಇದು ಬೆಳೆಯುತ್ತದೆ, ಅಲ್ಲಿನ ಗಿರಿಜನರು ಭತ್ತವನ್ನು ಕೊಯ್ದು ತಂದು ಅಕ್ಕಿ ಮಾಡಿಸುತ್ತಾರೆ ಎನ್ನಲಾಗಿದೆ. ಕೆಂಪು ಬಣ್ಣದ ಈ ಅಕ್ಕಿ ಬೆಲೆ ದುಬಾರಿಯಾದರೂ ಹಲವರು ಖರೀದಿ ಮಾಡಿದರು.

ಪಶುವೈದ್ಯೆ ಸಮೀಕ್ಷಾ ಸಾವಿಗೆ ಕಾರಣವಾಗಿದ್ದ ನೀರಾನೆಯ ಮರಿ ಗರ್ಭದಲ್ಲೇ ಸಾವು!

ಶಿವಮೊಗ್ಗ: ಕಳೆದ ಮಾರ್ಚ್ 19ರಂದು ಶಿವಮೊಗ್ಗದ ತ್ಯಾವರೆಕೊಪ್ಪ ಸಫಾರಿಯಲ್ಲಿ ತರಬೇತಿ ಪಶುವೈದ್ಯೆ ಸಮೀಕ್ಷಾ ರೆಡ್ಡಿ ಮೇಲೆ ಗರ್ಭಿಣಿ ನೀರಾನೆ ದಾಳಿ ಮಾಡಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಸಮೀಕ್ಷಾ ರೆಡ್ಡಿ ಮೃತಪಟ್ಟಿದ್ದರು. ಇದೀಗ ನೀರಾನೆ ಮರಿಗೆ ಜನ್ಮ ನೀಡಿದ್ದು ಆ ಮರಿ ಸಾವನ್ನಪ್ಪಿದೆ.



ಹಂಸಿನಿ ಹೆಸರಿನ ನೀರಾನೆ ಈ ಹಿಂದೆ ಎರಡು ಬಾರಿ ಮರಿಗಳಿಗೆ ಜನ್ಮ ನೀಡಿತ್ತು. ಆದರೆ ದುರಾದೃಷ್ಟವಶಾತ್ ಎರಡೂ ಬಾರಿ ಮರಿಗಳು ಸಾವನ್ನಪ್ಪಿದ್ದವು. ಈ ಬಾರಿಯಾದರೂ ಮರಿ ಉಳಿಯುಬಹುದು ಎಂಬ ನಿರೀಕ್ಷೆಯಲ್ಲಿದ್ದ ಸಫಾರಿ ಸಿಬ್ಬಂದಿಗೆ ಈಗ ನಿರಾಸೆಯಾಗಿದೆ. ಹಂಸಿನಿಯ ಮರಿಯು ಸಾವನ್ನಪ್ಪಿರುವುದಕ್ಕೆ ಸಫಾರಿ ಸಿಬ್ಬಂದಿ ಹಾಗೂ ಪ್ರಾಣಿ ಪ್ರೇಮಿಗಳಲ್ಲಿ ತೀವ್ರ ವಿಷಾದ ಮೂಡಿಸಿದೆ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಉಪವಿಭಾಗ, ಹೆಚ್.ಡಿ.ಕೋಟೆ–571114
ದೂರವಾಣಿ ಮತ್ತು ಫ್ಯಾಕ್ಸ್ ಸಂಖ್ಯೆ: 08228–255752

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
ಐ.ಎಫ್.ಟಿ ಸಂಖ್ಯೆ 01/2026–27 ದಿನಾಂಕ 10.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಹೆಚ್.ಡಿ ಕೋಟೆ ಉಪ ವಿಭಾಗ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ರಸ್ತೆ ದುರಸ್ಥಿ/ನಿರ್ವಹಣೆ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ಕೆ.ಡಬ್ಲ್ಯೂ–1 ರಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಒಟ್ಟು 03 ಕಾಮಗಾರಿಗಳ ಪೈಕಿ ಟೆಂಡರ್‌ಗಿಟ್ಟ ಮೊತ್ತ ರೂ.2.05 ಲಕ್ಷಗಳು ಗರಿಷ್ಠ 1.55 ಲಕ್ಷಗಳು ಕನಿಷ್ಠ ಹಾಗೂ ಇ.ಎಂ.ಡಿ ಮೊತ್ತ ರೂ.6250.00ಗಳು ಗರಿಷ್ಠ, ರೂ. 4750.00ಗಳು ಕನಿಷ್ಠ. ಕಾಮಗಾರಿಗಳಿಗೆ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 17.04.2026 ಸಂಜೆ 17.30 ಘಂಟೆಯವರೆಗೆ, ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ 17.04.2026 ಸಂಜೆ 17.30 ಘಂಟೆಯವರಗೆ ಮತ್ತು ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 18.04.2026 ಸಂಜೆ 16.00 ಘಂಟೆಯವರಗೆ. ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ 30 ದಿನಗಳು(ಮಳೆಗಾಲ ಸೇರಿದಂತೆ). ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಉಪ–ವಿಭಾಗ,
ಹೆಚ್.ಡಿ.ಕೋಟೆ.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ) ಇ–ಪೋರ್ಟಲ್ ನಲ್ಲಿ ಮಾತ್ರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕಾವೇರಿ ಭವನ ಸಂಕೀರ್ಣ, ಗೋಕುಲಂ ನಾಲ್ಕನೇ ಹಂತ, ಯಾದವಗಿರಿ ಅಂಚೆ, ಮೈಸೂರು – 570020
Ph. 0821-2515598 Email: eevccdn2@gmail.com

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಸಂಖ್ಯೆ: 02/2026–27 ದಿನಾಂಕ: 09.04.2026

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.2, ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು ಇವರು ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು ಕೆಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಅರ್ಹತೆಗೆ ಬೇಕಾಗುವ ಎಲ್ಲಾ ಅವಶ್ಯಕ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್‌ಗಳ ಜೊತೆಗೆ ಸಲ್ಲಿಸುವುದು. ಕಾಮಗಾರಿಗೆಳಿಟ್ಟ ಕನಿಷ್ಠ ಮೊತ್ತ ರೂ.1.00 ಲಕ್ಷದಿಂದ ರೂ.5.00 ಲಕ್ಷದವರೆಗಿನ ಒಟ್ಟಾರೆ 61 ಸಂಖ್ಯೆಯ ಡಿ.ದೇವರಾಜ ಅರಸು ನಾಲೆಗಳಲ್ಲಿ ಜಂಗಲ್ ತೆಗೆಯುವ ಕಾಮಗಾರಿಗಳನ್ನು ಕೈಗೊಳ್ಳಲು ಐಟಂವಾರು ಟೆಂಡರ್ ಕರೆಯಲಾಗಿದ್ದು, ಕೆ.ಪಿ.ಪಿ ಪೋರ್ಟಲ್ ನ ರ್‍ಯಾಂಡಮೈಸೇಶನ್ ಅನ್ವಯ ಪರಿಶಿಷ್ಟ ಜಾತಿಯವರಿಗೆ–11, ಪರಿಶಿಷ್ಟ ಪಂಗಡದವರಿಗೆ–04, ಹಿಂದುಳಿದ ವರ್ಗಗಳು ಪ್ರವರ್ಗ–1 ಕ್ಕೆ 02 ಕಾಮಗಾರಿಗಳು, ಪ್ರವರ್ಗ–2ಎ ಜಾತಿಯವರಿಗೆ 09 ಕಾಮಗಾರಿಗಳು, ಮತ್ತು ಸಾಮಾನ್ಯ ವರ್ಗದವರಿಗೆ 35 ಕಾಮಗಾರಿಗಳನ್ನು ಮೀಸಲಿರಿಸಲಾಗಿದೆ. ಸದರಿ ಕಾಮಗಾರಿಗಳ ವಿವರ, ಟೆಂಡರ್ ಕ್ವೆರಿಸ್/ಕ್ಲ್ಯಾರಿಫಿಕೇಷನ್ ಕೊನೆಯ **ದಿನಾಂಕ: 15–4–2026 ಸಾಯಂಕಾಲ 05.00 ಗಂಟೆ** ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸಲು ಕೊನೆಯ **ದಿನಾಂಕ: 16–4–2026 ಸಾಯಂಕಾಲ 05.30** ಗಂಟೆಯವರೆಗೆ ಹಾಗೂ ಟೆಂಡರ್ ಬಿಡ್‌ಗಳನ್ನು ತೆರೆಯುವ **ದಿನಾಂಕ: 18–4–2026 ಬೆಳಿಗ್ಗೆ 11.30 ಗಂಟೆ,** ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ: www.kppp.karnataka.gov.in ರಲ್ಲಿ ಪಡೆಯಬಹುದು. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ–ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು